

**ಅಕ್ಕಮಹಾದೇವಿ**

ವಚನಕಾರರಲ್ಲಿ ಬಸವಣ್ಣನವರು ಹೇಗೆ ಅಗ್ರಗಣ್ಯರೋ ಹಾಗೆ ವಚನಕಾರ್ತಿಯಲ್ಲಿ ಅಕ್ಕಮಹಾದೇವಿ ಅಗ್ರಗಣ್ಯೆ. ಅವಳು ಪ್ರಸ್ತಿದ್ಧ ಕವಯಿತ್ರಿ ಕೂಡ. ಶಿವಶರಣೆಯರಲ್ಲಿ ಅವಳು ಬೆಳ್ಳಿ ಚುಕ್ಕೆ. ಅಕ್ಕಮಹಾದೇವಿ ಶಿವಮೊಗ್ಗ ಜಿಲ್ಲೆಯ ಉಡುತಡಿ ಗ್ರಾಮದವಳು. ತಂದೆ ನಿರ್ಮಲಶೆಟ್ಟಿ; ತಾಯಿ ಸುಮತಿ. ಬಾಲ್ಯದಿಂದಲೂ ಶಿವಭಕ್ತೆಯಾಗಿ ಬೆಳೆದಳು. ಚೆನ್ನಮಲ್ಲಿಕಾರ್ಜುನನ್ನನ್ನೇ ತನ್ನ ಪತಿಯೆಂದು ಭಾವಿಸಿ ಪೂಜಿಸಿದ ಪರಮಭಕ್ತೆ. ದಿವ್ಯಸುಂದರಿಯಾದ ಅಕ್ಕಳನ್ನು ನೋಡಿದ ಉಡುತಡಿಯ ರಾಜ ಕೌಶಿಕನಿಗೆ ಅಕ್ಕಳನ್ನು ಕೊಡಲು ತಂದೆ ನಿರ್ಮಲಶೆಟ್ಟಿ ಹೆದರಿದನು. ಆದರೆ ರಾಜನ ಕೋಪಕ್ಕೆ ಹೆದರಿ ಒಪ್ಪಿಗೆ ಸೂಚಿಸಿದನು. ಆಗ ಅಕ್ಕಳು 'ನಾನು ಲಿಂಗಧಾರಿ, ಲಿಂಗಮುಖಿ, ಲಿಂಗ ಪೂಜಕಳು, ಭವಿಯಾದ ಕೌಶಿಕನು ಭಕ್ತನಾಗಬೇಕು. ನನ್ನ ಲಿಂಪಪೂಜೆಗೆ ಅಡ್ಡಿ ಮಾಡಬಾರದು. ನಾನು ಶರಣ ಸತಿ ಲಿಂಗಪತಿ ಎಂಬುದನ್ನು ಮರೆಯಬಾರದು ನನ್ನು ಗುರು ಜಂಗಮರ ಸೇವೆ ನಿರಂತರವಾಗಿ ನಡೆಯಬೇಕು. ಬೊಕ್ಕಸದ ಧನಕನಗಳು ವಿನಿಯೋಗಿಸಬೇಕು ಈ ಮೂರು ನುಡಿಗಳನ್ನು ಕೌಶಿಕನು ಪಾಲಿಸಬೇಕು ಇವುಗಳನ್ನು ಪಾಲಿಸದಿದ್ದರೆ ನಾನು ಅವರನ್ನು ತೊರೆಯುವೆ' ಎಂಬ ಷರತ್ತನ್ನು ಒಡ್ಡಿ ಕೌಶಿಕನನ್ನು ವಿವಾಹವಾದಳು. ಆದರೆ ಕಾಮುಕನಾದ ಕೌಶಿಕ ಆ ಮೂರು ನುಡಿಗಳನ್ನು ತಪ್ಪಿದ್ದರಿಂದ ವಿಚಾರ ಸ್ವಾತಂತ್ರ್ಯ ಮಹಿಳೆಯಾದ ಅಕ್ಕ ಕೌಶಿಕನನ್ನು ತೊರೆದು ನಿರ್ವಸ್ತ್ರಳಾಗಿ, ತನ್ನ ತಲೆಗೂದಲಿನಿಂದ ತನ್ನ ಮೈಯನ್ನು ಮುಚ್ಚಿಕೊಂಡು ದಿಗಂಬರೆಯಾಗಿ, ಕೇಶಾಂಬರಿಯಾಗಿ ಕಲ್ಯಾಣದತ್ತ ಹೊರಟಳು. ಅಲ್ಲಿ ಶಿವಶರಣರು ಒಡ್ಡಿದ ಎಲ್ಲಾ ಸತ್ವ ಪರೀಕ್ಷೆಗಳಲ್ಲಿ ಗೆದ್ದು ಅನುಭವ ಮಂಟಪದ ಸದಸ್ಯಳಾದಳು. ಕೆಲವು ಕಾಲ ಕಲ್ಯಾಣದಲ್ಲಿದ್ದು ನಂತರ ತನ್ನ ಇಷ್ಟ ದೇವರಾದ ಚನ್ನಮಲ್ಲಿಕಾರ್ಜುನನ್ನನ್ನು ಅರಸುತ್ತಾ ಶ್ರೀಶೈಲದತ್ತ ಹೊರಟಳು. ಕೊನೆಗೆ ಅಕ್ಕಳು ಶ್ರೀಶೈಲದ ಕದಳಿವನದಲ್ಲಿ ಶಿವೈಕ್ಯಳಾದಳು.ಅಕ್ಕಮಹಾದೇವಿಯು ಶ್ರೇಷ್ಠ ವಚನಗಾರ್ತಿ, ಕವಿಯತ್ರಿ, ಅವಳ ಸುಮಾರು ೪೩೪ ವಚನಗಳು ಲಭ್ಯವಾಗಿವೆ. ಇದರ ಜೊತೆಗೆ ೬೭ ತ್ರಿಪದಿಗಳನ್ನು ಒಳಗೊಂಡ 'ಯೋಗಾಂಗ ತ್ರಿಪದಿ' ಎಂಬ ತಾತ್ವಿಕ ಗ್ರಂಥವನ್ನು ಬರೆದಿದ್ದಾಳೆ. ಇದು ಅಕ್ಕಳು ಯೋಗಾಂಗ ಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕೊಡುಗೆ. ಅಕ್ಕನ ವಚನಗಳಲ್ಲಿ ವೈರಾಗ್ಯ ಕಂಡು ಬಂದಿದೆ. ಅವನ್ನು ತನ್ನ ಇಷ್ಟದೇವರಾದ ಚನ್ನಮಲ್ಲಿಕಾರ್ಜುನನಿಗೆ ಸಮರ್ಪಿಸಿದ್ದಾಳೆ.



**ಪುರಂದರದಾಸರು**

ದಾಸ ಶ್ರೇಷ್ಠ; ಹಿರಿಯ ಭಕ್ತ ಕವಿ ಪುರಂದರದಾಸರು ೧೪೮೪ರಲ್ಲಿ ಪುರಂದರಗಡದಲ್ಲಿ ಜನಿಸಿದರು. ಮೊದಲನೆಯ ಹೆಸರು ಶ್ರೀನಿವಾಸ. ತಂದೆ ವರದಪ್ಪ; ಶ್ರೀಮಂತರಾಗಿದ್ದರು. ಸಿರಿತನದಲ್ಲಿ ಬೆಳೆದು ಯಾವುದೋ ಒಂದು ಸಂದರ್ಭದಲ್ಲಿ ವೈರಾಗ್ಯ ಹುಟ್ಟಿ ತನ್ನ ಐಶ್ವರ್ಯವನ್ನು ಬಡವರಿಗೆ ದಾವಮಾಡಿ ವ್ಯಾಸರಾಯನಿಂದ ದೀಕ್ಷೆ ಪಡೆದು ಪುರಂದರದಾಸರಾದರು. 'ಸಾನ ಮಾಡಬೇಡ, ಸಾಲದೆನ್ನಬೇಡ, ನಾಳಿಗಿಡಬೇಡ' ಎಂಬ ಜೀವನಾದರ್ಶ ಹೊಂದಿದವರು.

ದೇಶ ತಿರುಗಿ ಲೋಕಾನುಭವ ಪಡೆದು ಭಕ್ತಿ, ಭಾವ, ಹಾಸ್ಯ ವಿಡಂಬನೆ ಎಂಬ ನಾಮ ಮಹಿಮೆ, ಅಂತರಂಗ ವಿವೇದನೆ, ಚಿಂತನೆ, ವಿಮರ್ಶೆಗಳಂತಹ ನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ಕೀರ್ತನೆಗಳನ್ನು ರಚಿಸಿದರೆಂಬ ಹೆಗ್ಗಳಿಕೆ ಇದೆ. ಇಲ್ಲಿಯವರೆಗೂ ಸಾವಿರದಷ್ಟು ಕೀರ್ತನೆಗಳು ದೊರೆತು ಪ್ರಕಟವಾಗಿದೆ. ಇಂತಹ ಹಲವಾರು ಭಕ್ತಿಪೂರಿತ ಕೀರ್ತನೆಗಳನ್ನು ರಚಿಸಿದ ದಾಸರೆಂದರೆ ಪುರಂದರದಾಸರಯ್ಯ ಎಂದು ವ್ಯಾಸರಾಯರಿಂದ ಹೊಗಳಿಸಿಕೊಂಡಿದ್ದಾರೆ.

ಇವರ ಕೀರ್ತನೆಗಳೆಂದರೆ; 'ಜೀವ ನಾನ್ಯಾಕೆ ಬಡವನು? ನಾನ್ಯಾಕೆ ಪರದೇಶಿ? ಶ್ರೀನಿಧೇಹರಿಯೆನಗೆ ನೀನಿರುವ ತನಕ', ಆರು ಹಿತವರು ನಿನಗೆ ಈ ಮೂವರೊಳಗೆ? ಯಾರು ಆ ಮೂವರು? ನಾರಿಯೋ ಧಾರುಣಿಯೋ, ಬಲುಧನದ ಸಿರಿಯೋ? 'ನಗೆಯು ಬರುತಿದೆ ಎನಗೆ ನಗೆಯ ಬರುತಿದೆ ಜಗದೊಳಿರುವ ಜಾಣರೆಲ್ಲ ಹಗರಣ ಮಾಡುವುದ ಕಂಡು, ಸ್ನಾನ ಮಾಡಿರೋ, ಜ್ಞಾನ ತೀರ್ಥದಲ್ಲಿ', 'ಈಸಬೇಕು ಇದ್ದು ಜೈಸಬೇಕು', 'ಹೇಸಿಗೆ ಸಂಸಾರದಲ್ಲಿ ಆಶೆ ಲೇಶ ಮಾಡದ್ದಂಗ, ಕಷ್ಟ ಸುಖಗಳು ಬಂದಾಗ ಚಲವಿಚಲಿತನಾಗದೆ ಕಲ್ಲಾಗಿ ಇರಬೇಕು'. 'ಮಾನವ ಜನ್ಮ ದೊಡ್ಡದು', 'ನೀನ್ಯಾಕೋ ನಿನ್ನ ಹಂಗ್ಯಾಕೋ, ನಿನ್ನ ನಾಮದ ಬಲವೊಂದಿದ್ದರೆ ಸಾಕೋ', 'ಹೂವ ತರುವರ ಮನೆಗೆ ಹುಲ್ಲು ತರುವ', 'ಭಾಗ್ಯದ ಲಕ್ಷ್ಮಿ ಬಾರಮ್ಮ', 'ಗೆಜ್ಜೆ ಕಾಲ್ಗಳ ಧ್ವನಿಯ ತೋರುವ ಹೆಜ್ಜೆಯನಿಕ್ಕುತ ಸಜ್ಜನ ಸಾಧು ಪೂಜೆಯ ವೇಳೆಗೆ ಮಜ್ಜಿಗೆಯೊಳಗಿನ ಬೆಣ್ಣೆಯಂತೆ', 'ಬಂದದ್ದೆಲ್ಲಾ ಬರಲಿ



**ಬಸವಣ್ಣ**

ಹನ್ನೆರಡನೆಯ ಶತಮಾನದಲ್ಲಿ ಕಂಡುಬರುವ ಹಿರಿಯ ವಚನಕಾರ, ಭಕ್ತ ಕ್ರಾಂತಿಯೋಗಿ, ರಾಜಕೀಯ ನೇತಾರ, ಸಮಾಜ ಸುಧಾರಕನಾಗಿ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿ ಲಿಂಗಾಯುತ ಧರ್ಮವನ್ನು ಅಭಿವೃದ್ಧಿಪಡಿಸಿದ ವಿಶ್ವಚೇತನ ಇವರು. ಬಸವಣ್ಣ ಬಿಜಾಪುರ ಜಿಲ್ಲೆಯ ಬಾಗೇವಾಡಿಯ ಸಮೀಪ ಇಂಗಳೇಶ್ವರದಲ್ಲಿ ೧೩೧೧ರಲ್ಲಿ ಜನಿಸಿದರು. ತಂದೆ ಮಾದರಸ. ತಾಯಿ ಮಾದಲಾಂಬಿಕೆ. ಸೋದರ ಮಾವ ಬಲದೇವನ ನೆರವಿನಿಂದ ವಿದ್ಯಾಭ್ಯಾಸ ಪಡೆದು ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿ ಪದವಿ ಪಡೆದು ಧರ್ಮ ರಾಜಕೀಯ, ಸಾಮಾಜಿಕ, ಸಾಹಿತ್ಯಕ ಕ್ರಾಂತಿಯನ್ನು ಮಾಡಿ ಸಮಾಜವನ್ನು ಸುಧಾರಿಸಿದ ಮಹಾನ್ ವ್ಯಕ್ತಿಯಾಗಿದ್ದಾರೆ.

ಹತ್ತನೇ ಶತಮಾನದಲ್ಲಿ ಅರಮನೆಗಳಲ್ಲಿ ರಾರಾಜಿಸುತ್ತಿದ್ದ ಪಂಡಿತರಿಗೆ ಮೀಸಲಾಗಿದ್ದ ಸಾಹಿತ್ಯವನ್ನು ಜನಸಾಮಾನ್ಯರಿಗೆ ತಂದು ಸರಳವಾದ ಗದ್ಯ ಪದ್ಯವಲ್ಲದ ವಿಶಿಷ್ಟ ಶೈಲಿಯ ಸಾಹಿತ್ಯ ಪ್ರಕಾರವನ್ನು ಪ್ರಚುರಪಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ನಾಡಿನ ಮೂಲೆ ಮೂಲೆಗಳಿಂದ ಶರಣರನ್ನು ಆವ್ಹಾನಿಸಿ ಕಲ್ಯಾಣವನ್ನು ಕೇಂದ್ರವಾಗಿಟ್ಟುಕೊಮಡು ಅಪಾರ ಅನುಭವದ ಮೂಲಕ ವಿಷಯ ಚರ್ಚಿಸಿ ನಂತರ ಇವರ ವಚನ ಕಮ್ಮಟದಲ್ಲಿ ಅಚ್ಚೊತ್ತಿದ ವಚನಗಳು ಸಮಾಜದ ಶ್ರೇಯಸ್ಸಿಗೆ ಕಾರಣವಾಗಿದೆ. ವಿಶಿಷ್ಟ ಪ್ರಕಾರದ ಸಾಹಿತ್ಯ ನಿರ್ಮಾಣವಾಗಿದೆ. ಬಸವಣ್ಣನವರಿಂದ ರಚಿತವಾದ ಷಟ್ ಸ್ಥಳದ ವಚನಗಳು ಹಾಗೂ ಬೇರೆ ಚನಗಳ ಕೃತಿಗಳು ಪ್ರಮುಖವಾಗಿವೆ. ಅವರ ವಚನಗಳ ಪ್ರಮುಖ ಸಾಲುಗಳನ್ನು ಇಲ್ಲಿ ಗಮನಿಸಬಹುದು.

ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯಾ, ಉಳ್ಳವರು ಶಿವಾಲಯವ ಮಾಡುವರು. ನುಡಿದರೆ ಮುತ್ತಿನ ಹಾರದಂತಿರಬೇಕು. ನಾಳೆ ಬಪ್ಪುದು ನಮಗಿಂದೆ ಬರಲಿ. ದೇವನೊಬ್ಬ ನಾಮ ಹಲವು, ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ ನೀರ ಕಂಡಲ್ಲಿ ಮುಳುಗುವರಯ್ಯಾ, ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗವನು, ತಂದೆ ನೀನು;

ಅವುಗಳಲ್ಲಿ ಆಧ್ಯಾತ್ಮಿಕ ಹಾಗೂ ಶೃಂಗಾರವನ್ನು ಸಮನ್ವಯಗೊಳಿಸಿದ್ದಾಳೆ. ನೋವು, ನಲಿವು, ವೈರಾಗ್ಯ, ವಿರಕ್ತಿ ಅಂಶಗಳನ್ನು ಅಭಿವ್ಯಕ್ತಿಗೊಳಿಸಿದ್ದಾಳೆ. ರಮ್ಯತೆ ಅವಳ ವಚನಗಳಲ್ಲಿ ಎದ್ದು ಕಾಣುವ ಅಂಶ.

ಗೋವಿಂದನ ದಯ ನಮಗಿರಲಿ', 'ಅಪರಾಧಿ ನಾನಲ್ಲ, ಅಪರಾಧ ಎನಗಿಲ್ಲ', ಬೈಲಿಗೆ ಬೈಲಾಗಿತು ಬೈಲೊಳಗೆ' 'ಕಲ್ಲು ಸಕ್ಕರೆ ಕೊಳ್ಳಿರೊ' ಇಂತಹ ಕೀರ್ತನೆಗಳನ್ನಲ್ಲದೆ ಹಲವಾರು ಸುಳಾದಿಗಳನ್ನು ಉಗಾಭೋಗಗಳನ್ನು ರಚಿಸಿದ್ದಾರೆ.
ಸಮಾಜ ಜೀವನ, ಸಂಸಾರ, ವೈರಾಗ್ಯ ಜೀವನ ನಿಷ್ಠ ಡಾಂಭಿಕತೆ, ಅನೀತಿ, ಸಮಾಜದ ಕಟು ವಿಮರ್ಶೆ, ಭಕ್ತಿ ಭಾವಗಳ ಸಂಗಮವನ್ನು ಒಳಗೊಂಡ ಕೀರ್ತನೆಗಳನ್ನು ಪುರಂದರ ವಿಠಲ ಎಂಬ ಅಂಕಿತದಿಂದ ರಚಿಸಿ ಕರ್ನಾಟಕ ಸಂಗೀತಶಾಸ್ತ್ರಕ್ಕೆ ಕೊಟ್ಟ ಸಾಹಿತ್ಯ ಸೇವೆ ಅತ್ಯಮೂಲ್ಯವಾಗಿದೆ.

ತಾಯಿ ನೀನು, ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಹಬ್ಬಕ್ಕೆ ತಂದ ಹರಕೆಯ ಕುರಿ, ಲೋಕದ ಡೊಂಕ ನೀವೇಕೆ ತಿದ್ದುವಿರಿ ಒಲೆ ಹತ್ತಿಯುರಿದಡೆ ನಿಲ್ಲಬಹುದಲ್ಲವೆ, ಇವನಾರವ ಇವನಾರವ ಇವನಾರವ? ನೆಂದೆನಿಸದಿರಯಯ್ ಎನ್ನವರೊಲಿದು ಹೊನ್ನ ಶೂಲದಲ್ಲಿಕ್ಕಿದರೆನ್ನ ಹೊಗಳಿ ಹೊಗಳಿ.
ಕೂಡಲ ಸಂಗಮದೇವ ಅಂಕಿತದಿಂದ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಬಹು ಅಮೂಲ್ಯವಾದ ವಚನಗಳನ್ನು ರಚಿಸಿ ಸಾಹಿತ್ಯಕ್ಕೆ ನೀಡಿದ ಅಪಾರ ಕೊಡುಗೆ ಇವರುದ.



**ಕುಮಾರವ್ಯಾಸ**

ಕುಮಾರವ್ಯಾಸನ ಮೂಲ ಹೆಸರು ನಾರಣಪ್ಪ. ಈಗಿನ ಕುಂದಗೋಳ ತಾಲ್ಲೂಕಿನ ಕೋಳಿವಾಡ ಈತನ ಜನ್ಮಸ್ಥಳ. ಈತನ ಕಾಲ ಕ್ರಿ.ಶ. ೧೪೩೦. ಗದುಗಿನ ವೀರ ನಾರಾಯಣಸ್ವಾಮಿ ಈತನ ಆರಾಧ್ಯ ದೈವ. ತಂದೆ ಲಕ್ಕರಸ. ವಿಜಯನಗರದ ದೇವರಾಯನ ಆಸ್ಥಾನದಲ್ಲಿ ಈತನ ತಂದೆ ಮಂತ್ರಿಯಾಗಿದ್ದನೆಂದು ವಿದ್ವಾಂಸರ ಅಭಿಪ್ರಾಯ. ಈತನಿಗೆ ಐದು ಜನಗಂಡು ಮಕ್ಕಳಲ್ಲಿ ನಾರಣಪ್ಪನೇ ಹಿರಿಯನೆಂದು ತಿಳಿದುಬರುತ್ತದೆ. ಕುಮಾರವ್ಯಾಸನು 'ಕರ್ಣಾಟ ಭಾರತ ಕಥಾಮಂಜರಿ' ಯನ್ನು ಗದುಗಿನ ವೀರನಾರಾಯಣ ಸ್ವಾಮಿ ದೇವಾಲಯದಲ್ಲಿ ಕುಳಿತು ಬರೆದನೆಂದು ತಿಳಿದುಬರುತ್ತದೆ.
ಕರ್ಣಾಭಾರತ ಕಥಾಮಂಜರಿಯನ್ನು 'ಗದುಗಿನ ಭಾರತ' ವೆಂತಲೂ ಕರೆಯುತ್ತಾರೆ. ಗದುಗಿನ ಭಾರತವು ಭಾಮಿನಿ ಷಟ್ಪದಿಯಲ್ಲಿದೆ. ಗದುಗಿನ ಭಾರತವು. ೧೫೨ ಸಂಧಿ, ೮೪೭೯ ಪದ್ಯಗಳು, ಹಾಗೂ ೧೦ ಪರ್ವಗಳನ್ನೊಳಗೊಂಡಿದೆ. ಇದರ ವಿಶಿಷ್ಟ ಅಂಶಗಳೆಂದರೆ ಕರ್ಣ ದುರ್ಯೋಧನರ ಸ್ನೇಹ, ಕೃಷ್ಣ ಕಥೆ, ಕೃಷ್ಣನೇ ಈ ಕೃತಿಯ ನಾಯಕ. ಕುಮಾರವ್ಯಾಸನ ಗದುಗಿನ ಭಾರತವು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಮಹೋನ್ನತ ಕೃತಿ ಕುಮಾರವ್ಯಾಸನಿಗೆ 'ರೂಪಕ ಸಮ್ರಾಜ್ಯ ಚಕ್ರವರ್ತಿ' ಎಂಬ ಬಿರುದು ಕೂಡ ಇದೆ.
ಮಹಾಕವಿ ಕುಮಾರವ್ಯಾಸ ಕನ್ನಡ ಸಾಹಿತ್ಯದ ಒಬ್ಬ ಮಹಾಕವಿ. ನಡುಗನ್ನಡ ಕಾಲದ ಮಹತ್ವ ಕವಿ. ಕುಮಾರವ್ಯಾಸ ಭಾಗವತ ಸಂಪ್ರದಾಯದ ಕವಿ.



**ಜನ್ನ**

ಜನ್ನನು ಹೊಯ್ಸಳ ಅರಸ ವೀರ ನರಸಿಂಹನ ಆಸ್ಥಾನದಲ್ಲಿ ಆಸ್ಥಾನ ಕವಿಯಾಗಿದ್ದನು. ತಂದೆ ಸುಮನೋಬಾಣ, ತಾಯಿ ಗಂಗಾದೇವಿ. ಜನ್ನನು ಯಶೋಧರ ಚರಿತೆ, ಅನಂತ ಪುರಾಣ ಎಂಬ ಎರಡು ಜೈನ ಗ್ರಂಥಗಳನ್ನು ರಚಿಸಿದ್ದಾನೆ. ಈತ 'ಕವಿ ಚಕ್ರವರ್ತಿ' ಎಂಬ ಬಿರುದು ಗಳಿಸಿರುವನು. ಲಕುಮಾದೇವಿ ಜನ್ನನ ಹೆಂಡತಿಯ ಹೆಸರು. ಸೂಕ್ತಿಸುಧಾರ್ಣವ ಮಲ್ಲಿಕಾರ್ಜುನ ಜನ್ನನ ಭಾವ ಕವಿ ಕೇಶಿರಾಜನು ಈ ಮಲ್ಲಿಕಾರ್ಜುನನ ಮಗ.
ಜನ್ನನ ಕೃತಿ ಯಶೋಧರರ ಚರಿತೆಯು ೩೦೦ ಕಂದ ಪದ್ಯಗಳನ್ನೊಳಗೊಂಡಿದ್ದು ನಾಲ್ಕು ಆಶ್ವಾಸಗಳಿಂದ ಕೂಡಿದೆ. ಇಲ್ಲಿಯ ಪದ್ಯಗಳು ಭಾವ ಪರಿಪೂರ್ಣತೆಯಿಂದ ತುಂಬಿಕೊಂಡಿವೆ. ಜನ್ನನ ಶೈಲಿಯು ಸರಳತೆ, ಲಾಲಿತ್ಯಗಳಿಂದ ಕೂಡಿದ್ದು ಪಾತ್ರಗಳು ಜೀವಂತಪೂರ್ಣವಾಗಿವೆ. ಜನ್ನನ ಇನ್ನೊಂದು ಕೃತಿಯು 'ಅನಂತನಾಥ ಪುರಾಣವು' ಹದಿನಾಲ್ಕನೆಯ ತೀರ್ಥಂಕರನಾದ ಅನಂತನಾಥನ ಕಥೆ. ೧೪೦೦ ಪದ್ಯಗಳನ್ನೊಳಗೊಂಡಿದ್ದು ೧೪ ಅಶ್ವಾಸಗಳುಳ್ಳ ಚಂಪೂ ಗ್ರಂಥ.

ಪೊನ್ನ

ರತ್ನತ್ರಯರಲ್ಲಿ ಎರಡನೆಯಬನೆ ಪೊನ್ನ. ಇವನು ಮುಮ್ಮಡಿ ಕೃಷ್ಣನ ಆಸ್ಥಾನ ಕವಿಯಾಗಿದ್ದನು. ಪಂಪನ ನಾಡಾದ ವೆಂಗಿ ಪ್ರದೇಶವೆ ಈತನ ನಾಡಾಗಿರಬೇಕೆಂದು ವಿದ್ವಾಂಸರ ಅಭಿಪ್ರಾಯ. ಇವನಿಗೆ 'ಕವಿ ಚಕ್ರವರ್ತಿ ' ಎಂಬ ಬಿರುದು ಇತ್ತು. ದಾನಚಿಂತಾಮಣಿ ಅತ್ತಿಮಬ್ಬೆಯು ಪೊನ್ನನ 'ಶಾಂತಿ ಪುರಾಣ' ಕೃತಿಯ ಸಾವಿರ ಪ್ರತಿಗಳನ್ನು ಬರೆಯಿಸಿ ದಾನವಾಗಿ ಹಂಚಿದಳು. ಪೊನ್ನನು ತಾನು ಕನ್ನಡದ ಕಾವ್ಯಗಳನ್ನು ಬರೆಯುವುದರಲ್ಲಿ ಅರಸನಿಗಿಂತಲೂ ನೂರು ಪಾಲು ಶ್ರೇಷ್ಠ. ಹಾಗೆಯೇ ಸಂಸ್ಕೃತ ಕಾವ್ಯ ರಚನೆಯಲ್ಲಿ ತಾನೇ ಹೊಗಳಿಕೊಂಡಿದ್ದಾನೆ.
ಪೊನ್ನನು ನಾಲ್ಕು ಕೃತಿಗಳನ್ನು ರಚಿಸಿದ್ದಾನೆ. ಅವುಗಳೆಂದರೆ ; ಶಾಂತಿಪುರಾಣ, ಜಿನಾಕ್ಷರ ಮಾಲೆ, ಭುವನೈಕ್ಯ ರಾಮಾಭ್ಯುದಯ ಮತ್ತು ಗತಪ್ರತ್ಯಾಗತ ಮೊದಲೆರಡು ಕೃತಿಗಳು ಮಾತ್ರ ಲಭ್ಯವಿದ್ದು ಇನ್ನೆರಡು ಕೃತಿಗಳು ಲಭ್ಯವಿಲ್ಲ.
ಶಾಂತಿಪುರಾಣ ಕೃತಿಯ ಹನ್ನೆರಡು ಆಶ್ವಾಸಗಳಿಂದ ಕೂಡಿರುವ ಕೃತಿ ಇದು ಐದನೆಯ ಚಕ್ರವರ್ತಿಯೂ ಹನ್ನೊಂದನೆಯ ತೀರ್ಥಂಕರನೂ ಆದ ಶಾಂತಿನಾಥನ ಜೀವನ ವೃತಾಂತವನ್ನೊಳಗೊಂಡ ಕೃತಿ.
ಜಿನಾಕ್ಷರ ಮಾಲೆ ಚಿಕ್ಕ ಕೃತಿ. ಈ ಕೃತಿಯಲ್ಲಿ 'ಕ' ಕಾರದಿಂದ 'ಳ' ಕಾರದವರೆಗಿನ ಅಕ್ಷರಗಳಿಂದ ಪ್ರಾರಂಭವಾಗುವಂತೆ ೩೯ ಕಂದ ಪದ್ಯಗಳಲ್ಲಿ ಜಿನ ಸ್ತೋತ್ರವನ್ನು ಮಾಡಲಾಗಿದೆ.

ರಾಘವಾಂಕ

ಹರಿಹರನ ಶಿಷ್ಯ ಹಾಗೂ ಸೋದರಳಿಯನಾದ ರಾಘವಾಂಕನು ೧೨೨೫ರಲ್ಲಿ ಹಂಪಿಯಲ್ಲಿ ಜೀವಿಸಿದ್ದನು.

ಮಧುರಚೆನ್ನ

ಮಧುರ ಚೆನ್ನರು ೧೯೦೩ರ ಜುಲೈ ೩೧ ರಂದು ವಿಜಾಪುರದ ಜಿಲ್ಲೆಯ ಹಲಸಂಗಿಯ ಸಮೀಪದ



ಅಲ್ಲಮಪ್ರಭು

ಅಲ್ಲಮಪ್ರಭು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ

ಇವನ ಬಗೆಗೆ ಒಂದು ದಂತಕತೆಯನ್ನು ಹೆಣೆಯಲಾಗಿದೆ. ಹರಿಶ್ಚಂದ್ರ ಕಾವ್ಯವನ್ನು ಬರೆದು ನರಸ್ತುತಿ ಮಾಡಿದಾಗ ಹರಿಹರ ಕೋಪದಿಂದ ಹೊಡೆದಾಗ ರಾಘವಾಂಕನ ಐದು ಹಲ್ಲುಗಳು ಉದುರಿ ಹೋದವು. ಮುಂದೆ ಐದು ಶೈವಕೃತಿ ಬರೆದ ಮೇಲೆ ಹರಿಹರನು ಮುಂದೆ ಹಲ್ಲುಗಳನ್ನು ಕೊಟ್ಟ ಕತೆ ಒಂದು ದಂತಕತೆಯಾಗಿದೆ.

ಸೌರಾಷ್ಟ್ರದಿಂದ ಆದಯ್ಯನು ಪುಲಿಗೆರೆಗೆ ಬಂದು ಅಲ್ಲಿಯ ಸೋಮನಾಥನನ್ನು ಇಲ್ಲಿ ಪ್ರತಿಷ್ಠಾಪಿಸಿ ಕೆಲವು ಪವಾಡಗಳನ್ನು ಮಾಡಿ ಜೈನರನ್ನು ಶಿವಭಕ್ತರನ್ನಾಗಿ ಮಾಡಿದ ಕಥೆ ಸೋಮನಾಥ ಚರಿತ್ರೆಯಾಗಿದೆ ಶಿವನ ಕೋಪದಿಂದ ಹುಟ್ಟಿ ಬಂದ ವೀರಭದ್ರನು ದಕ್ಷ ಯಜ್ಞವನ್ನು ನಾಶ ಮಾಡಿದ ರೌದ್ರರಸ ಪ್ರಧನವಾದ ವಿರೇಶಚರಿತೆ ಉದ್ದಂಡ ಷಟ್ಪದಿಯ ೧೨೭ ಪದ್ಯವನ್ನು ಒಳಗೊಂಡ ಚಿಕ್ಕ ಕಾವ್ಯವಾಗಿದೆ. ಸೊನ್ನಲಿಗೆ ಸಿದ್ದರಾಮನ ಚರಿತ್ರೆಯನ್ನು ಒಳಗೊಂಡ ಸಿದ್ದರಾಮ ಚರಿತ್ರೆ ಒಂಬತ್ತು ಸಂಧಿಯುಳ್ಳ ವಾರ್ಧಕ ಷಟ್ಪದಿಯ ಮಹಾನ್ ಕಾವ್ಯ. ಸಿದ್ಧರಾಮನನ್ನು ಕಳೆದುಕೊಂಡು ಸಂಕಟಪಡುವ ಕರುಣೆ ಮಲ್ಲಿನಾಥನನ್ನು ಅರುಸುತ್ತಿರುವ ಸಿದ್ದರಾಮನ ಭಕ್ತಿ ಇಲ್ಲಿ ಎರಡು ರಸ ಹರಿದಾಡಿದೆ. ರಾಘವಾಂಕನ ಷಟ್ಪದಿ ಕಾವ್ಯಗಳಲ್ಲಿ ಮೊದಲನೆಯದಾದ ಹರಿಶ್ಚಂದ್ರ ಮಹಾರಾಜಯ ಸತ್ಯವನ್ನು ಒರೆಗಚ್ಚುವ ಇದರ ಕಥಾವಸ್ತು ಎಲ್ಲರ ಮನ ಸೆಳೆಯುವುದಾಗಿದೆ. ಇವನ ಶರಭ ಚರಿತ್ರೆ ದೊರೆತಿದ್ದು ಇನ್ನೂ ಪ್ರಕಟವಾಗಿಲ್ಲ. ಹರಿಹರ ಮಹತ್ವ ಈ ಕೃತಿ ಇನ್ನೂವರೆಗೂ ದೊರೆತಿಲ್ಲ.

ಇಂತಹ ಅಮೂಲ್ಯ ಕೃತಿಗಳನ್ನು ರಚಿಸಿದ ರಾಘವಾಂಕ ಷಟ್ಪದಿ ಬ್ರಹ್ಮ, ಉಭಯಕವಿ ಕಮಲರವಿ, ಕವಿ ಶರಭ ಬೇರುಂಡ, ಆದಟಕವಿ ಹೀಗೆ ಹಲವಾರು ಬಿರುದುಗಳನ್ನು ಪಡೆದಿದ್ದನು.

ಹಿರೇಲೋಣಿಯಲ್ಲಿ ಜನಿಸಿದರು. ಇವರ ಹೆಸರು ಚೆನ್ನಮಲ್ಲಪ್ಪ ಗಲಗಲಿ. ಮಧುರ ಚೆನ್ನ ಎಂಬುದು ಇವರ ಕಾವ್ಯನಾಮ. ತಂದೆ ಸಿದ್ದಲಿಂಗಪ್ಪ, ತಾಯಿ ಅಂಬವ್ವ, ಇಲ್ಲಿಯೇ ಪ್ರಾಥಮಿಕ ಶಿಕ್ಷಣ ಮುಗಿಸಿ ೧೯೨೧ರಲ್ಲಿ ಪ್ರಥಮ ಸ್ಥಾನದಲ್ಲಿ ಮುಲ್ಕಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಇವರ ಶಿಕ್ಷಣ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಇವರ ಶಿಕ್ಷಣ ಇಲ್ಲಿಗೆ ಅಂತ್ಯಗೊಂಡಿತ್ತು. ಸಾಹಿತ್ಯದ ಕಡೆಗೆ ಇವರ ಮನಸ್ಸು ಒಲವು ತೋರಿದ್ದರಿಂದ ಸಾಹಿತ್ಯಕ್ಕೆ ಇವರ ಮನಸ್ಸು ಒಲಿಯಿತು. ಓದಿನಲ್ಲಿ ವಿಪರೀತ ಆಸಕ್ತಿ ಹುಟ್ಟಿದ್ದರಿಂದ ಸ್ವತಂತ್ರವಾಗಿ ಇಂಗ್ಲಿಷ್ ಮತ್ತು ಬಂಗಾಳಿ ಭಾಷೆಗಳನ್ನು ಕಲಿತರು.

ಮಧುರ ಚೆನ್ನರು ತತ್ವಶಾಸ್ತ್ರ, ಇತಿಹಾಸ, ಸಾಹಿತ್ಯ, ಭಾಷಾಶಾಸ್ತ್ರ, ಜಾನಪದ ಮುಂತಾದ ವಿಷಯಗಳನ್ನು ಕುರಿತು ಲೇಖನಗಳನ್ನು, ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರು ಅನೇಕ ಜನಪದ ಗೀತೆಗಳನ್ನು ಸಂಗ್ರಹಿಸಿದ್ದಾರೆ. ಇವರು ಜನಪದ ಗೀತೆಗಳನ್ನು ಹಾಡುವುದರಲ್ಲೂ ನಿಸ್ಸೀಮರಾಗಿದ್ದರು.

ಹಲಸಂಗಿಯಲ್ಲಿ ಮಧುರ ಚೆನ್ನರು ತಮ್ಮ ಸ್ನೇಹಿತರ ನೆರವಿನಿಂದ 'ಶ್ರೀ ಅರವಿಂದ ಮಂಡಳಿ' ಎಂಬ ಸಂಸ್ಥೆ ಸ್ಥಾಪಿಸಿ ಅದರ ಮುಖಾಂತರ ಅರವಿಂದರ ತತ್ವಗಳ ಪ್ರಚಾರ ಮತ್ತು ಸಾಹಿತ್ಯ ಚಟುವಟಿಕೆಗಳನ್ನು, ಗ್ರಂಥ ಪ್ರಕಟಣೆಗಳನ್ನು ನಿರ್ವಹಿಸಿದರು. ಮಧುರಚೆನ್ನರು ಆಗಸ್ಟ್ ೧೫, ೧೯೫೩ರಂದು ನಿಧನ ಹೊಂದಿದರು.

ಕೃತಿಗಳು

ಪೂರ್ವರಂಗ (೧೯೩೨), ಕಾಳರಾತ್ರಿ (೧೯೩೩), ನನ್ನ ನಲ್ಲ (೧೯೩೩), ಆತ್ಮ ಸಂಶೋಧನೆ (೧೯೩೫), ಬೆಳಕು (೧೯೩೭) ಪೂರ್ಣಯೋಗದ ಪಥದಲ್ಲಿ, ಕನ್ನಡಿಗರ ಕುಲಗುರು, ವಿಸರ್ಜನ (ಅನುವಾದ), ಮಾತೃವಾಣಿ (ಅನುವಾದ), ವಿನೋದ ಕುಸುಮಾವಳಿ (ಕವನ ಸಂಕಲನ)

ಮಧುರ ಚೆನ್ನರದು ಅಪರೂಪದ ವ್ಯಕ್ತಿತ್ವ, ಅನುಭವದ ಸಾಧನೆ, ಸಾಹಿತ್ಯಿಕ ಹಿರಿಮೆ, ಸ್ನೇಹಿತರ ಬಾಂದವ್ಯದಿಂದ ಅಪರೂಪದ ಸಾಹಿತ್ಯಿಕ ಕೃತಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿದ ಕೀರ್ತಿ ಇವರದು. ನನ್ನ ನಲ್ಲ ಕೃತಿಯಲ್ಲಿ ತಮ್ಮ ಆತ್ಮಕಥನವನ್ನು ಮಧುರಚೆನ್ನರು ಬಿಂಬಿಸಿದ್ದಾರೆ.

ಗೌರವ, ಪ್ರಶಸ್ತಿ-ಪುರಸ್ಕಾರಗಳು

೧೯೫೦ರಲ್ಲಿ ಸೊಲ್ಲಾಪುರದಲ್ಲಿ ನಡೆದ ೩೩ನೇ ಅಖಿಲ ಭಾರತ ಕನ್ನಡ ಸಹಿತ್ಯ ಸಮ್ಮೇಳನದ ಕವಿಗೋಷ್ಠಿಗೆ ಇವರು ಅಧ್ಯಕ್ಷರಾಗಿದ್ದರು.

ತಾಲ್ಲೂಕಿನ ಬಳ್ಳಿಗಾವೆ ಊರಿನವರು. ಹನ್ನೆರಡನೆಯ ಶತಮಾನದ ಶರಣರಲ್ಲಿಯೇ ಶ್ರೇಷ್ಠ ಚನಕಾರರು. ಇವರ ತಂದೆ ನಿರಂಹಕಾರ, ತಾಯಿ ಸುಜ್ಞಾನಿ. ಶೈವ ದಂಪತಿಗಳು. ಬಸವಣ್ಣನವರ ಹಿರಿಯ ಸಮಕಾಲೀನ ವಚನಕಾರರಲ್ಲಿ ಇವರು ಅಗ್ರಗಣ್ಯ. ಏಕಾಂತದ ರಾಮಯ್ಯ, ಸಕಲೇಶ ಮಾದರಸ, ಮಡಿವಾಳ ಮಾಚಯ್ಯ ಇವರುಗಳು ಅಲ್ಲಮನ ಅನುಭವದಿಂದಾಗಿ ಪ್ರದೀಪ್ತವಾಗಿದ್ದರು. ಅವರೆಲ್ಲರೂ ದೀಪಗಳಂತೆ ಪ್ರಜ್ವಲಿಸುತ್ತಿರುವುದಕ್ಕೆ ಅಲ್ಲಮರೇ ಕಾರಣ. ಇವರು ಯೌವ್ವನದಲ್ಲಿಯೇ ವಿರಕ್ತನಾಗಿ ಆಳವಾದ ಆಧ್ಯಾತ್ಮ ಆತ್ಮ ಚಿಂತನೆಯಿಮದ ದಿವ್ಯಜ್ಞಾನಿಯಾಗಿ ದೇಶ ಸುತ್ತುತ್ತಾ ಕಲ್ಯಾಣಕ್ಕೆ ಬಂದರು. ಕಲ್ಯಾಣದಲ್ಲಿ ಶರಣ ಸಾಧಕರಿಗಾಗಿ ಅನುಭವ ಮಂಟಪವನ್ನು ಬಸವಣ್ಣನವರೊಮದಿಗೆ ಸ್ಥಾಪಿಸಿದರು. ಕಲ್ಯಾಣದ ಶಿವ ಶರಣರನ್ನೆಲ್ಲ ಸಂಘಟಿಸಿದರು. ಅಲ್ಲಮಪ್ರಭುವು ಅನುಭವ ಮಂಟಪದ ಅಧ್ಯಕ್ಷರಾದರು. ಅಲ್ಲಿ ಆಗಾಗ ಶಿವಶರಣದ ಗೋಷ್ಠಿಗಳು ನಡೆಯಲು ಅನುವು ಮಾಡಿಕೊಟ್ಟರು. ಶೂನ್ಯ ಸಿಂಹಾಸನಾಧೀಶನಾದರು.

(ಗುಹೇಶ್ವರಾ ಇವರ ಅಂಕಿತನಾಮ) ಇವರ ವಚನಗಳು, ಬೆಡಗಿನ ವಚನಗಳು, ಮಂತ್ರ ಮಹಾತ್ಮೆ ಮತ್ತು ಹಾಡುಗಳನ್ನು ರಚಿಸಿದ್ದಾರೆ. ಅಲ್ಲಮರ ವಚನಗಳು ಈ ಕೆಳಕಂಡಂತಿವೆ.

ಅಲ್ಲಮನ ವಚನಗಳು

೧. ಲಿಂಗದ ಮೇಲೆ ಲಿಂಗ
ಲಿಂಗದ ಮೇಲೆ ಅಂಗವಿದೇನೋ?
ಮನದ ಮೇಲೆ ಅರಿವು
ಅರಿವಿನ ಮೇಲೆ ಕುರುಹಿದೇನೋ?
ನೀನೆಂಬಲ್ಲಿ ನಾನು
ನಾನೆಂಬಲ್ಲಿ ನೀನು
ನೀ-ನಾನೆಂಬುದಕ್ಕೆ ತೆರಹಿಲ್ಲ ಗುಹೇಶ್ವರ.

೨. ಅಂಗವಿಲ್ಲಾಗಿ ಅನ್ಯಸಂಗವಿಲ್ಲಯ್ಯ!
ಅನ್ಯಸಂಗವಿಲ್ಲಾಗಿ ಮತ್ತೊಂದು ವಿವರಿಸಲಿಲ್ಲಯ್ಯ!
ಮತ್ತೊಂದ ವಿವರಿಸಲಿಲ್ಲಾಗಿ ನಿಸ್ಸಂಗವಾಯಿತ್ತಯ್ಯ!
ಗುಹೇಶ್ವರ, ನಿಮ್ಮ ನಾಮವಿಂತಟಯ್ಯ!

೩. ತಮ್ಮ ತಮ್ಮ ಭಾವಕ್ಕೆ ಉಡಿಯಲ್ಲಿ ಕಟ್ಟಿಕೊಂಡರು.
ತಮ್ಮ ತಮ್ಮ ಭಾವಕ್ಕೆ ಕೊರಳಲ್ಲಿ ಕಟ್ಟಿಕೊಂಡನು.
ನಾನೆನ್ನ ಭಾವಕ್ಕೆ ಪೂಜಿಸ ಹೋದರೆ,
ಕೈತಪ್ಪಿ, ಮನದಲ್ಲಿ ಸಿಲುಕಿತೆನ್ನಲಿಂಗ!
ಸಾಧಕನಲ್ಲ, ಭೇದಕನಲ್ಲ!
ಗುಹೇಶ್ವರನೆಲ್ಲಯ್ಯ ತಾನೆ ಬಲ್ಲ.



ಆಲೂರು ವೆಂಕಟರಾಯರು

ಆಲೂರು ವೆಂಕಟರಾಯರು ೧೮೮೦ರ ಜುಲೈ ೧೨ ರಂದು ಬಿಜಾಪುರದಲ್ಲಿ ಜನಸಿದರು. ತಂದೆ ಭೀಮರಾಯ; ತಾಯಿ ಭಾಗೀರಥಿಬಾಯಿ. ತಂದೆ ಸರ್ಕಾರಿ ವೃತ್ತಿಯಲ್ಲಿದುದ್ದರಿಂದ ಇವರ ವಿದ್ಯಾಭ್ಯಾಸ ನವಲಗುಂದ, ಗದಗ, ಹಾನಗಲ್, ಧಾರವಾಡ ಹೀಗೆ ಬೇರೆ ಬೇರೆ ಕಡೆಗಳಲ್ಲಿ ನಡೆಯಿತು.

೧೮೯೭ ರಲ್ಲಿ ವೆಂಕಟರಾಯರು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಶಾಲೆಗೆ ಎರಡನೆಯವರಾಗಿ ಉತ್ತೀರ್ಣರಾದರು. ೧೮೯೯ರಲ್ಲಿ ಪುಣೆಯ ಫರ್ಗ್ಯೂಸನ್ ಕಾಲೇಜನ್ನು ಆಲೂರರು ಸೇರಿದರು. ಕಾಲೇಜು ವಿದ್ಯಾರ್ಥಿಯಾಗಿಯೂ ಆಲೂರರು ಸಾಧರಣ ಜೀವನವನ್ನು ನಡೆಸುತ್ತಿದ್ದರು. ೧೯೦೩ರಲ್ಲಿ ಬಿ.ಎ. ಪದವಿ ಪಡೆದ ಆಲೂರು ವೆಂಕಟರಾಯರು ಮುಮಬಯಿಯಲ್ಲಿ ಕಾನೂನು ಅಭ್ಯಾಸದಲ್ಲಿ ತೊಡಗಿ ೧೯೦೫ ರಲ್ಲಿ ವಕೀಲರಾದರು. ೧೯೦೮ ರಲ್ಲಿ ಧಾರವಾಡದಲ್ಲಿ ಅಖಿಲ ಕರ್ನಾಟಕ ಗ್ರಂಥಕರ್ತರ ಸಮ್ಮೇಳನವನ್ನು ನಡೆಸಿದರು. ಧಾರವಾಡದಲ್ಲಿ ಆ ದಿನಗಳಲ್ಲಿ ಮರಾಠಿಗರ ಪ್ರಾಬಲ್ಯ ಅಧಿಕವಾಗಿದ್ದು ಕನ್ನಡಿಗರಿಗೆ ಬಹಳ ಅನ್ಯಾಯವಾಗುತ್ತಿತ್ತು.

ನಾಡು ನುಡಿ, ಸಂಸ್ಕೃತಿಗಳ ಪ್ರತೀಕವಾಗಿದ್ದ ಅಲೂರು ವೆಂಕಟರಾಯರು ಕಟ್ಟಾ ಕನ್ನಡಾಭಿಮಾನಿಗಳು. ೧೯೧೨ ರಲ್ಲಿ ಆಲೂರು ವೆಂಕಟರಾಯರು ತಮ್ಮ ಕೃತಿ ಕರ್ನಾಟಕ ಗತವೈಭವ ವನ್ನು ಪ್ರಕಟಿಸಿದರು. ಕನ್ನಡಿಗರ ಪಾಲಿಗೆ ಇದೊಂದು ಮಹತ್ವದ ಕೃತಿ. ಅನೇಕ ಕನ್ನಡಿಗರಿಗೆ ತಮ್ಮ ಬೆಲೆ ಏನೆಂಬುದನ್ನು ಕಣ್ದೆರೆಸಿ ತೋರಿಸಿದ ಕೃತಿ ಇದು.

ಕನ್ನಡ ಸಂಸ್ಕೃತಿಯ ಅಧ್ಯಯನಕ್ಕೆ ನಾಡಿನ ಭವ್ಯ ಪರಂಪರೆಯನ್ನು ತಿಳಿಸುವಲ್ಲಿ ಕುತೂಹಲ ಇತ್ತು. ಆನೆಗೊಂದಿ, ಹಂಪೆ ಮೊದಲಾದ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿ ಸಂದರ್ಶಿಸಿ ೧೯೧೪ ರಲ್ಲಿ ಧಾರವಾಡದಲ್ಲಿ 'ಕರ್ನಾಟಕ ಇತಿಹಾಸ ಮಂಡಲ' ಸ್ಥಾಪಿಸಿ, ಅದರ ಅಧ್ಯಕ್ಷರಾಗಿ ೧೫ ವರ್ಷಗಳ ಕಾಲ ದುಡಿದರು. ೧೯೨೩ ರಲ್ಲಿ 'ಜಯ ಕರ್ನಾಟಕ' ಪತ್ರಿಕೆ ಪ್ರಾರಂಭಿಸಿದರು.

ತಮ್ಮ ಜೀವನ ಕೊನೆಯವರೆಗೂ ಕ್ರಿಯಾಶೀಲರಾಗಿದ್ದು ನಾಡು ನುಡಿಗಳ ಮೇಲ್ಮೆಯನ್ನೇ ಉಸಿರಾಗಿಸಿಕೊಂಡಿದ್ದ ಆಲೂರು ವೆಂಕಟರಾಯರು ೧೯೬೪ ಫೆಬ್ರವರಿ ೨೫ ರಂದು ನಿಧನರಾದರು.

ಕೃತಿಗಳು

ಶ್ರೀ ವಿದ್ಯಾರಣ್ಯ, ಚರಿತ್ರೆ, ಕರ್ನಾಟಕ ಗತವೈಭವ, ಕರ್ನಾಟಕತ್ವದ ಸೂತ್ರಗಳು, ಕರ್ನಾಟಕ ವೀರ ರತ್ನಗಳು, ಕನ್ನಡಿಗರ ಭ್ರಮನಿರಸನ, ಗೀತಾ ಪ್ರಕಾಶ, ಗೀತಾ ಪರಿಮಳ, ಸ್ವಾತಂತ್ರ್ಯ ಸಂಗ್ರಾಮ, ಕರ್ನಾಟಕತ್ವದ ವಿಕಾಸ, ಮಧ್ವ ಸಿದ್ಧಾಂತ ಪ್ರೌಏಶಿಕೆ, ತಿಲಕರ ಗೀತಾ ರಹಸ್ಯ ಮೊದಲಾದವು.



ಆದ್ಯ ರಂಗಾಚಾರ್ಯ (ಶ್ರೀ ರಂಗ)

ಆದ್ಯ ರಂಗಾಚಾರ್ಯರ ಮೂಲ ಹೆಸರು ಆರ್.ವಿ.ಜಾಗೀರ್‌ದಾರ್. 'ಶ್ರೀರಂಗ' ಎಂಬ ಕಾವ್ಯನಾಮದಿಂದ ಸುಪ್ರಸಿದ್ದರು. ಇವರು ೧೯೦೪ರ ಸೆಪ್ಟೆಂಬರ್ ೨೬ ರಂದು ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಅಗರಖೇಡದಲ್ಲಿ ಜನಿಸಿದರು. ತಂದೆ ವಾಸುದೇವಾಚಾರ್ಯ ಜಾಗೀರದಾರ. ಶ್ರೀರಂಗರ ಶಿಕ್ಷಣ ಅಗರಖೇಡ, ಬಿಜಾಪುರಗಳಲ್ಲಿ ಜರುಗಿತು. ಅನಂತರ ಪುಣೆಯ ಡೆಕ್ಕನ್ ಕಾಲೇಜಿನಿಂದ ೧೯೨೫ ರಲ್ಲಿ ಬಿ.ಎ. ಪದವಿ ಪಡೆದರು. ಇವರಿಗೆ ಸಂಸ್ಕೃತದಲ್ಲಿ ವಿಶೇಷವಾದ ಒಲವಿದ್ದತು. ಅನಂತರ ಐ.ಸಿ.ಎಸ್. ಪರೀಕ್ಷೆಗೆ ಇಂಗ್ಲೇಂಡ್‌ಗೆ ತೆರಳಿ ಅಲ್ಲಿ ಭಾಷಾಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದುಕೊಂಡು ೧೯೨೮ರಲ್ಲಿ ಭಾರತಕ್ಕೆ ಬಂದರು. ಕೆಲವು ಕಾಲ ನಿರುದ್ಯೋಗಿಯಾಗಿದ್ದು ತದನಂತರ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ೧೯೩೦ ರಿಂದ ೧೯೫೮ ರವರೆಗೆ ಸಂಸ್ಕೃತ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಬೆಂಗಳೂರು ಆಕಾಶವಾಣಿ ನಾಟಕ ವಿಭಾಗದ ಅಧ್ಯಕ್ಷರಾಗಿದ್ದರು. ೧೯೭೩ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಯ ಸದಸ್ಯರಾದರು. ೧೯೭೧ ರಿಂದ ೧೯೭೪ ರವರೆಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಕನ್ನಡ ರಂಗಭೂಮಿಗೆ ವೈವಿಧ್ಯಗಳನ್ನು ತಂದುಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರು ಕನ್ನಡ, ಇಂಗ್ಲಿಷ್, ಸಂಸ್ಕೃತ, ಮರಾಠಿ ಭಾಷೆಗಳಲ್ಲಿ ಪರಿಣಿತರು. (ಇವರು ೧೯೮೪ ಅಕ್ಟೋಬರ್ ೧೭ ರಂದು ನಿಧನರಾದರು)

ಕೃತಿಗಳು

ರಂಗ ನಾಟಕಶಾಸ್ತ್ರ, ಭರತನಾಟ್ಯ, ಹರಿಜನ್ವಾರ, ಉದರ ವೈರಾಗ್ಯ, ಸಂಧ್ಯಾಕಾಲ, ಪ್ರಪಂಚ ಪಾಣಿಪತ್ತು, ಜರಾಸಂಧಿ, ದರಿದ್ರ ನಾರಾಯಣ, ಶ್ರೀರಂಗ ನಾಟ್ಯ ತರಂಗ, ರಂಗಭಾರತ, ಶೋಕಚಕ್ರ, ಕತ್ತಲೆ ಬೆಳಕು, ಹಾಳು ದೇಗುಲ, ಪ್ರಾರಬ್ಧ, ಶಾರದೆಯ ಸಂಸಾರ, ನಗೆ, ಗೀತ ಆಹ್ವಾನ, ಕಾಲಿದಾಸ, ರಂಗಭಾರತ, ಸಾಹಿತಿಯ ಆತ್ಮ ಜಿಜ್ಞಾಸೆ, ಕೇಳು ಜನಮೇಜಯ, ಶತಾಯಗತಾಯ, ಸ್ವರ್ಗಕ್ಕೆ ಮೂರೇ ಬಾಗಿಲು, ನರಕದಲ್ಲಿ ನರಸಿಂಹ, ದಿ ಇಂಡಿಯನ್ ಥಿಯೇಟರ್, ಕಾಳಿದಾಸ ಮುಂತಾದವು.

ಗೌರವ, ಪ್ರಶಸ್ತಿ ಪುರಸ್ಕಾರಗಳು.



ಯು.ಆರ್. ಅನಂತಮೂರ್ತಿ.

ಯು.ಆರ್. ಅನಂತಮೂರ್ತಿಯವರು ೧೯೩೨ ರ ಡಿಸೆಂಬರ್ ೨೧ರಂದು ಶಿವಮೊಗ್ಗ ಜಿಲ್ಲೆಯ ಮೇಳಿಗೆಯಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ. ತಂದೆ ಯು.ಪಿ.ರಾಜಗೋಪಾಲಾಚಾರ್ಯ, ತಾಯಿ ಸತ್ಯಭಾಮ. ಇವರ ಪ್ರಾಥಮಿಕ ವಿದ್ಯಾಭ್ಯಾಸ ಮೇಳಿಗೆ, ಮೇಗರವಳ್ಳಿ, ಕೊಣಂದೂರು, ತೀರ್ಥಹಳ್ಳಿಗಳಲ್ಲಿ ನಡೆಯಿತು. ಲೋಯರ್ ಸೆಕೆಂಡರಿ ಮತ್ತು ಎಸ್.ಎಸ್.ಎಲ್ಲ.ಸಿ. ಪರೀಕ್ಷೆಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು.

ಅನಂತರ ಶಿವಮೊಗ್ಗದ ಸರ್ಕಾರಿ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್ ಓದಿದರು. ಅನಂತರ ಮೈಸೂರು ಮಹಾರಾಜ ಕಾಲೇಜಿಗೆ ಸೇರಿ ಬಿ.ಎ. ಅನ್ನರ್ ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಡೆದರು. ಮೈಸೂರಿನಲ್ಲಿ ಇಂಗ್ಲಿಷ್ ಎಂ.ಎ ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದರು. ಶಿವಮೊಗ್ಗದಲ್ಲಿ ಇಂಗ್ಲಿಷ್ ಉಪನ್ಯಾಸಕರಾದರು. ಹಾಸನದ ಸರ್ಕಾರಿ ಕಾಲೇಜಿನಲಲಿ ಅಧ್ಯಾಪಕರಾಗಿ, ಅನಂತರ ಮೈಸೂರಿನ ಮಹಾರಾಜ ಕಾಲೇಜಿಗೆ ಅಧ್ಯಾಪಕರಾಗಿ ೧೯೫೭ ರಲ್ಲಿ ಬಂದರು. ಅನಂತರ ೧೯೬೩ರಲ್ಲಿ ಕಾಮನ್‌ವೆಲ್ತ್ ಫೆಲೊಷಿಪ್ ಪಡೆದು ಇಂಗ್ಲೆಂಡಿನ ಬರ್ಮಿಂಗ್‌ಹೆಮ್ ವಿಶ್ವವಿದ್ಯಾಲಯದಿಂದ ಪಿ.ಎನ್.ಡಿ. ಪದವಿ ಪಡೆದರು. ೧೯೬೭ ರಿಂದ ೧೯೭೦ ರವರೆಗೆ ಮೈಸೂರಿನ ರೀಜನಲ್ ಕಾಲೇಜು ಆಫ್ ಎಜುಕೇಷನ್‌ನಲ್ಲಿ ರೀಡರ್ ಆಗಿ ಕೆಲಸ ಮಾಡಿದರು. ೧೯೭೦ ರಿಂದ ೧೯೮೦ ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದಲ್ಲಿ ರೀಡರ್ ಆಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಅಮೇರಿಕಾದ ಅಯೋವ ವಿಶ್ವವಿದ್ಯಾನಿಲಯ, ಕೊಲ್ಲಾಪುರ, ಶಿವಾಜಿ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ೧೯೮೭ ರಿಂದ ೯೧ ರವರೆಗೆ ಕೇರಳದ ಕೊಟ್ಟಾಯಂನ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ಕುಲಪತಿಯಾದರು.

ಯು.ಆರ್.ಅನಂತಮೂರ್ತಿಯವರು ಹಲವಾರು ಉನ್ನತ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ೧೯೯೨ ೯೩ ನ್ಯಾಷನಲ್ ಬುಕ್ ಟ್ರಸ್ಟ್ ಅಧ್ಯಕ್ಷರಾಗಿದ್ದರು. ೧೯೯೩ ರಲ್ಲಿ

ಗೌರವ, ಪ್ರಶಸ್ತಿ ಪುರಸ್ಕಾರಗಳು
೧೯೪೧ ರಲ್ಲಿ ಉತ್ತರ ಕರ್ನಾಟಕದ ಕನ್ನಡಿಗರು ಇವರಿಗೆ ಕರ್ನಾಟಕದ ಕುಲ ಪುರೋಹಿತ ಎಂಬ ಬಿರುದ್ದನ್ನು ನೀಡಿ ಗೌರವಿಸಿದ್ದರು.
೧೯೬೧ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಇವರನ್ನು ಗೌರವಿಸಿತು.
೧೯೩೦ ರಲ್ಲಿ ಮೈಸೂರಿನಲ್ಲಿ ನಡೆದ ೧೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಿತು.

೧೯೫೬ ರಲ್ಲಿ ರಾಯಚುರಿನಲ್ಲಿ ಜರುಗಿದ ೩೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.
೧೯೬೮ ರಾಷ್ಟ್ರೀಯ ಸಂಗೀತ ನಾಟಕ ಅಕಾಡೆಮಿ ಫೆಲೋಷಿಪ್ ಗೌರವ
೧೯೭೧ರಲ್ಲಿ ಕಾಳಿದಾಸ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
೧೯೭೨ರಲ್ಲಿ ಭಾರತ ಸರ್ಕಾರವು ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ
೧೯೭೭ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಗೌರವ.

ದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು.
೧೯೯೩ ೯೮ ರವರೆಗೆ ವಿ.ಕೃಗೋಕಾಕರ ನಂತರ ದೆಹಲಿಯ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು.

ಗೌರವ, ಪ್ರಶಸ್ತಿ ಪುರಸ್ಕಾರಗಳು
೧೯೮೩ ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
೧೯೮೪ ರಲ್ಲಿ ಕರ್ನಾಟಕ ಸರ್ಕಾರದ ಪ್ರಶಸ್ತಿ
೧೯೯೪ ರಲ್ಲಿ ಮಾಸ್ತಿ ಪ್ರಶಸ್ತಿ
೧೯೯೫ ರಲ್ಲಿ ಹಿಮಾಚಲ ಪ್ರದೇಶ ಸರ್ಕಾರದ ಶಿಖರ ಸಮ್ಮಾನ್ ಪ್ರಶಸ್ತಿ
೧೯೯೪ ರಲ್ಲಿ ಜ್ಞಾನಪೀಠ ಪ್ರಶಸ್ತಿ
೧೯೯೫ ರಲ್ಲಿ ಕೊಲ್ಕತ್ತಾದ ರವೀಂದ್ರ ಭಾರತಿ ವಿಶ್ವವಿದ್ಯಾಲಯದ ಗೌರವ ಡಿ.ಲಿಟ್ ಪ್ರಶಸ್ತಿ
೧೯೯೮ ಪದ್ಮಭೂಷಣ ಪ್ರಶಸ್ತಿ
೨೦೦೨ ರಲ್ಲಿ ತುಮಕೂರಿನಲ್ಲಿ ಜರುಗಿದ ೬೯ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿದ್ದರು.



**ಪಾ.ವೆಂ.ಆಚಾರ್ಯ**

ಪಾ.ವೆಂ ಆಚಾರ್ಯ ಅವರು ೧೯೧೫ ಫೆಬ್ರವರಿ ೬ ರಂದು ಉಡುಪಿಯಲ್ಲಿ ಜನಿಸಿದರು. ಪಾಡಿಗಾರು ವೆಂಕಟರಮಣ ಅಚಾರ್ಯ ಇವರ ಪೂರ್ಣ ಹೆಸರು. ಇವರೊಬ್ಬ ಕನ್ನಡದ ಪ್ರಸಿದ್ಧ ಪತ್ರಿಕೋದ್ಯಮಿ, ಸಾಹಿತಿ. ಇವರು ಓದಿದ್ದು ಆಗಿನ ಮೆಟ್ರಿಕ್‌ವರೆಗೆ ಮಾತ್ರ ಪತ್ರಿಕೋದ್ಯಮ ಇವರನ್ನು ಸಣ್ಣ ವಯಸ್ಸಿನಲ್ಲಿಯೇ ಆಕರ್ಷಿಸಿತು. ಆರಂಭದಲ್ಲಿ ಇವರು ಉಡುಪಿಯಲ್ಲಿದ್ದ 'ಅಂತರಂಗ' ಹಾಗೂ ಧಾರವಾಡದ 'ಜಯ ಕರ್ನಾಟಕ' ಪತ್ರಿಕೆಯಲ್ಲಿ ಕೆಲಸ ಮಾಡಿದರು.
ಪಾ.ವೆಂ.ಅಚಾರ್ಯರು ೧೯೪೨ ರಲ್ಲಿ ಹುಬ್ಬಳ್ಳಿಗೆ ಬಂದು ಆಗಿನ ಪ್ರಸಿದ್ಧ ಲೋಕ ಶಿಕ್ಷಣ ಟ್ರಸ್ಟನ 'ಕರ್ಮವೀರ' ಸಾಪ್ತಾಹಿಕದಲ್ಲಿ ಸಹ ಸಂಪಾದಕರಾಗಿ ವೃತ್ತಿಜೀವನ ಆರಂಭಿಸಿದರು. ಇವರು ಲಾಂಗೂಲಾಚಾರ್ಯ ಎಂಬ ಹೆಸರಿನಿಂದ ವಾರ ವಾರವೂ ಅಂಕಣ ಬರೆಯುತ್ತಿದ್ದು ಕೊನೆಯಲ್ಲಿ ಈ ಕಾವ್ಯನಾಮವೇ ಪ್ರಸಿದ್ಧವಾಯಿತು. ಲೋಕಶಿಕ್ಷಣ ಟ್ರಸ್ಟಿನಲ್ಲಿ ೧೯೬೫ ರಲ್ಲಿ 'ಕಸ್ತೂರಿ' ಮಾಸಪತ್ರಿಕೆ ಆರಂಭಿಸಿದಾಗ ಇವರು ಅದರ ಸಂಪಾದಕರಾದರು. ೧೯೭೨ರಲ್ಲಿ ನಿವೃತ್ತರಾದರು.
ಇವರು ಮೂಲತಃ ಹರಟೆಗಾರರೆಂದು ಪ್ರಸಿದ್ಧರು. ಕನ್ನಡದಲ್ಲಿ ಇವರಷ್ಟು ಹರಟೆಗಳನ್ನು ಬರೆದವರು ವಿರಳ. ವಿಡಂಬಣೆಯ ಮೊನಚುಳ್ಳ ಇವರ ಹರಟೆಗಳು ಕನ್ನಡ ಸಾಹಿತ್ಯಲೋಕಕ್ಕೆ ವಿಶಿಷ್ಟ ಕೊಡುಗೆಯೆನಿಸಿವೆ. ( ಆಚಾರ್ಯರು ೧೯೯೨ ಏಪ್ರಿಲ್ ೮ ರಂದು



**ಆ.ನೇ. ಉಪಾಧ್ಯೆ**

ಆದಿನಾಥ ನೇಮಿನಾಥ ಉಪಾಧ್ಯೆಯು ೧೯೦೬ರ ಫೆಬ್ರುವರಿ ೬ ರಂದು ಬೆಳಗಾವಿ ಜಿಲ್ಲೆಯ ಸದಲಗಿಯಲ್ಲಿ ಜನಿಸಿದರು. ಪ್ರಾರಂಭದ ವ್ಯಾಸಂಗವನ್ನು ಬೆಳಗಾವಿಯಲ್ಲಿ ಮುಗಿಸಿ ಸಂಸ್ಕೃತ, ಪ್ರಾಕೃತ ಮತ್ತು ಅರ್ಧಮಾಗದೀ ಭಾಷೆ ಮತ್ತು ಸಾಹಿತ್ಯವನ್ನು ವ್ಯಾಸಂಗ ವಿಷಯವನ್ನಾಗಿ ಆರಿಸಿಕೊಂಡು ಕೊಲ್ಹಾಪುರದ ರಾಜಾರಾಮ ಕಾಲೇಜು ಮತ್ತು ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜುಗಳಲ್ಲಿ ಅಭ್ಯಾಸ ಮಾಡಿ ೧೯೨೮ರಲ್ಲಿ ಬಿ.ಎ. ಪದವಿ ಪಡೆದರು. ಅನಂತರ ಪುಣೆಯ ಭಂಡಾರ್‌ಕರ್ ಸಂಸ್ಥೆಯಲ್ಲಿ ಕಲಿತು ಉನ್ನತ ಶ್ರೇಣಿಯಲ್ಲಿ ಎಂ.ಎ. ಪದವಿ ಪಡೆದರು. ೧೯೩೦ ರಲ್ಲಿ ಎಂ.ಎ. ಮುಗಿದ ನಂತರ ಕೊಲ್ಹಾಪುರದ ರಾಜರಾಮ್ ಕಾಲೇಜಿನಲ್ಲಿ ಅರ್ಧಮಾಗದೀ ಪ್ರಾಕೃತ ವಿಭಾಗದ ಅಧ್ಯಾಪಕರಾಗಿ ನೇಮಕಗೊಂಡು ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ಮುಂದೆ ಮೂರು ವರ್ಷಗಳ ನಂತರ ಪ್ರಾಧ್ಯಾಪಕರಾದರು. ಅದೇ ವಿಶ್ವವಿದ್ಯಾಲಯದ ಸ್ಪ್ರಿಂಜರ್ ಸಂಶೋಧನಾ ಶಿಷ್ಯ ವೃತ್ತಿಯನ್ನು ಪಡೆದರು. ರಾಜರಾಮ್ ಕಾಲೇಜಿನಲ್ಲಿ ೩೩ ವರ್ಷಗಳ ಸೇವೆಯ ನಂತರ ನಿವೃತ್ತಿ ಹೊಂದಿ ಅದೇ ಕಾಲೇಜಿನಲ್ಲಿ ಯು.ಜಿ.ಸಿ ಪ್ರಾಧ್ಯಾಪಕರಾಗಿ ಸೇವೆ



**ಜಿ.ಎಸ್. ಆಮೂರ**

ಗುರುರಾಜ ಶಾಮಚಾರ್ಯ ಆಮೂರ ಇವರ ಪೂರ್ಣ ಹೆಸರು. ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಹೂರಣಗಿಯಲ್ಲಿ. ೧೯೨೫ ಮೇ ೮ ರಂದು ಜನಿಸಿದರು. ತಂದೆ ಶಾಮಾಚಾರ್ಯ, ತಾಯಿ ಗಂಗಾದೇವಿ. ಮುಂಬಯಿ ವಿಶ್ವವಿದ್ಯಾಲಯದಿಂದ ೧೯೪೭ ರಲ್ಲಿ ಬಿ.ಎ. ಪದವಿ, ೧೯೪೯ ರಲ್ಲಿ ಎಂ.ಎ. ಪದವಿಗಳನ್ನು ಗಳಿಸಿದರು. ಇವರು 'ದಿ ಕಾನ್ಸೆಪ್ಟ್ ಆಫ್ ಕಾಮಿಡಿ' ಎಂಬ ವಿಷಯವನ್ನು ಕುರಿತು ಪ್ರಬಂಧವನ್ನು ಮಂಡಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ೧೯೬೧ ರಲ್ಲಿ ಪಿ.ಎಚ್.ಡಿ. ಪದವಿಯನ್ನು ಗಳಸಿದರು. ೧೯೭೨ರಲ್ಲಿ ಇವರು ಸೀನಿಯರ್ ಫುಲ್‌ಬ್ರೈಟ್ ಸ್ಕಾಲರ್‌ಷಿಪ್ ಪಡೆದು ಅಮೇರಿಕೆಯ ಯೇಲ್ ಮತ್ತು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯಗಳಲ್ಲಿ ಟಿ.ಎಸ್. ಎಲಿಯಟ್ ಕವಿಯ ಕುರಿತು ಪೋಸ್ಟ್ ಡಾಕ್ಟೋರಲ್ ಸಂಶೋಧನೆಯನ್ನು ನಡೆಸಿದರು. ೧೯೭೩ ರಲ್ಲಿ ಇವರು ಬ್ರಿಟಿಷ್ ಕೌನ್ಸಿಲ್ಲಿನ ಆಮಂತ್ರಣದ ಮೇರೆಗೆ ಇಂಗ್ಲೆಂಡಿಗೆ ಭೇಟಿ ನೀಡಿದರು. ಪ್ರಾರಂಭದಲ್ಲಿ ಇವರು ಗದುಗಿನ ತೋಂಟದಾರ್ಯ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ವೃತ್ತಿಯನ್ನು ಪ್ರಾರಂಭಿಸಿ, ಅನಂತರ

ಹುಬ್ಬಳ್ಳಿಯಲ್ಲಿ ನಿಧನರಾದರು.)

ಕೃತಿಗಳು
ಸ್ವತಂತ್ರ ಭಾರತ, ನವನೀರವ, ಪ್ರಹಾರ, ಬ್ರಾಹ್ಮಣರೇನು ಮಾಡಬೇಕು, ಆಯ್ದ ಲಲಿತ ಪ್ರಬಂಧಗಳು, ಇವರೇ ಲಾಂಗೂಲಾಚಾರ್ಯರು, ಚಿತ್ರ ವಿಚಿತ್ರ, ಈ ಜಗತ್ತು, ಹಿಂದೂ ಮುಸ್ಲಿಮ್ ಹಾಗೂ ಇತರ ಕಥೆಗಳು ಮುಂತಾದವು.

ಗೌರವ, ಪ್ರಶಸ್ತಿ ಪುರಸ್ಕಾರಗಳು
ಬಿ.ಡಿ. ಗೋಯೆಂಕಾ ಪ್ರಶಸ್ತಿ
೧೯೮೧ ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
'ನವನೀರವ' ಕೃತಿಗೆ ಮುಂಬಯಿ ಸರ್ಕಾರದ ಬಹುಮಾನ ಲಭಿಸಿದ.

ಸಲ್ಲಿಸಿದರು. ಇವರು ಮೈಸೂರು ವಿಶ್ವವಿದ್ಯಾಲಯ ಜೈನಶಾಸ್ತ್ರ ಮತ್ತು ಪ್ರಾಕೃತ ಮುಖ್ಯಸ್ಥರೂ ಆಗಿದ್ದರು. ಇವರು ೧೯೭೫ರ ಅಕ್ಟೋಬರ್ ೧೦ ರಂದು ನಿಧನರಾದರು.

ಕೃತಿಗಳು
ಪ್ರವಚನ ಸಾರ, ಪರಮಾತ್ಮ ಪ್ರಕಾಶ, ವರಾಂಗ ಚರಿತೆ, ಕಂಸವಹೊ, ಬೃಹತ್ ಕಥಾಕೋಶ, ತಿಲೋಯಪಣ್ಣತ್ತಿ, ಪಂಚಸ್ತುತ ಆತ್ಮಾನುಶಾಸನಂ, ದೇಶಕೋಶಗಳಲ್ಲಿನ ಕನ್ನಡ ಪದಗಳು, ಕವಿ ಪರಮೇಶ್ವರ ಅಥವ ಕವಿ ಪರಮೇಷ್ಠಿ ಮೊದಲಾದವು.

ಗೌರವ ಪ್ರಶಸ್ತಿ ಪುರಸ್ಕಾರಗಳು.
೧೯೩೯ ರಲ್ಲಿ ಮುಂಬೈ ವಿಶ್ವವಿದ್ಯಾಲಯದ ಗೌರವ ಡಿ.ಲಿಟ್ ಪದವಿ.
೧೯೪೦ ರಲ್ಲಿ ಹೈದರಾಬಾದಿನಲ್ಲಿ ಜರುಗಿದ ಅಖಿಲ ಭಾರತ ಪ್ರಾಚ್ಯ ಸಮ್ಮೇಳನದ ಅಧ್ಯಕ್ಷತೆ
೧೯೭೪ ರಲ್ಲಿ ಬೆಲ್ಜಿಯಂನಲ್ಲಿ ಜರುಗಿದ ಎರಡನೆಯ ಜಾಗತಿಕ ಧರ್ಮ ಮತ್ತು ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು.
೧೯೭೫ ರಲ್ಲಿ ಭಾರತ ಸರ್ಕಾರ ಸಂಸ್ಕೃತ ವಿದ್ವಾಂಸ ಪ್ರಶಸ್ತಿ ಪತ್ರ ಕೊಟ್ಟು ಗೌರವಿಸಿತು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ರೀಡರ್ ಇನ್ ಇಂಗ್ಲಿಷ್ ಆಗಿ ಸೇವೆ ಸಲ್ಲಿಸಿದರು.

ಕೃತಿಗಳು
ಮಹಾಕವಿ ಮಿಲ್ಟನ್, ಕೃತಿ ಪರೀಕ್ಷೆ, ಕನ್ನಡ ಕಾದಂಬರಿ ಬೆಳವಣಿಗೆ, ಆಧುನಿಕ ಕನ್ನಡ ಸಾಹಿತ್ಯ, ವಿರಾಟ್ ಪುರುಷ, ಕಾದಂಬರಿಯ ಸ್ವರೂಪ, ಹೊಸ ಚಿಂತನೆ, ಅಮೃತವಾಹಿನಿ, ಸಿಮೋಲ್ಲಂಘನ, ಬೇಂದ್ರೆ ಕಾವ್ಯದ ಪ್ರತಿಮಾಲೋಕ, ಕನ್ನಡ ಸಣ್ಣಕತೆ, ದತ್ತಾತ್ರೇಯ ರಾಮಚಂದ್ರ ಬೇಂದ್ರ, ಕನ್ನಡ ಕಥನ ಸಾಹಿತ್ಯ ಕಾದಂಬರಿ, ಕಾಮಿಡಿ ಭುವನದ ಭಾಗ್ಯ ಮುಂತಾದವು.

ಗೌರವ, ಪ್ರಶಸ್ತಿ ಪುರಸ್ಕಾರಗಳು
ಭಾರತೀಯ ಭಾಷಾ ಪ್ರಶಸ್ತಿ, ಸ.ಸ. ಮಾಳವಾಡ ಪ್ರಶಸ್ತಿ,
ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.
ಭುವನದ ಭಾಗ್ಯ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಲಭಿಸಿವೆ.



**ಅನುಪಮಾ ನಿರಂಜನ**
ಅನುಮಪ ನಿರಂಜನರು ೧೯೩೪ ಮೇ ೧೭ ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಜನಿಸಿದರು. ತಂದೆ ಡಿ.ಶಿವರಾಮಯ್ಯ, ತಾಯಿ ಲಕ್ಷ್ಮೀದೇವಮ್ಮ. ವೆಂಕಟಲಕ್ಷ್ಮಿ ಇವರ ನಿಜ ನಾಮಧೇಯ. ಇವರ ಪತಿ ಸಾಹಿತಿ ನಿರಂಜನ. ನಿರಂಜನ ಅವರು ಇಟ್ಟ ಹೆಸರೇ ಅನುಪಮಾ. ಅನುಪಮಾ ನಿರಂಜನ ಎಂದೇ ಸಾಹಿತ್ಯ ಲೋಕದಲ್ಲಿ ಚಿರಪರಿಚಿತರು. ಇವರ ತಂದೆ ವಿದ್ಯಾ ಇಲಾಖೆಯಲ್ಲಿ ನೌಕರಿಯಲ್ಲಿದುದ್ದರಿಂದ ಇವರ ವಿದ್ಯಾಭ್ಯಾಸ ಬೇರೆ ಬೇರೆ ಕಡೆಗಳಲ್ಲಿ ಜರುಗಿತು.
ಅನಂತರ ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿ ಇಂಟರ್‌ಮಿಡಿಯಟ್‌ನಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದರು. ತದನಂತರ ಮೈಸೂರು ವಿಶ್ವವಿದ್ಯಾಲಯದ ವೈದ್ಯಕೀಯ ಕಾಲೇಜು ಸೇರಿ ವೈದ್ಯಕೀಯ ಪದವಿ ಪಡೆದರು. ಆ ಸಂದರ್ಭದಲ್ಲಿ ನಿರಂಜನ ಅವರೊಂದಿಗೆ ಅಂತರ್ಜಾತಿಯ ವಿವಾಹವಾದರು. ಇವರು ಮೊದಲ ವೃತ್ತಿ ಆರಂಭಿಸಿದ್ದು ಧಾರವಾಡದಲ್ಲಿ ತದನಂತರ ಬೆಂಗಳೂರಿಗೆ ಸ್ಥಳಾಂತರಿಸಿದರು. ಇವರ ವಿದ್ಯಾರ್ಥಿ ದೆಸೆಯಲ್ಲಿಯೆ ಸಾಹಿತ್ಯ ರಚನೆ ಆರಂಭವಾಯಿತು. ಇವರು ಇಪ್ಪತ್ತಕ್ಕೂ ಹೆಚ್ಚು ಕಾದಂಬರಿಗಳನ್ನು ಒಂಬತ್ತು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಕನ್ನಡದ ವೈದ್ಯ ಸಾಹಿತ್ಯವನ್ನು ಕಟ್ಟಿ

**ಆಶ್ವಿನಿ**
ಆಶ್ವನಿ ಮೂಲತಃ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಮಾದಮಂಗಲಂ ಗ್ರಾಮದವರು. ಇವರ ತಂದೆ ವೆಂಕಟರಾಘವಾಚಾರ್ಯರು. ಮಾಧ್ಯಮಿಕ ಶಾಲಾ ಉಪಾಧ್ಯಾಯರಾಗಿದ್ದರು. ತಾಯಿ ಲಕ್ಷ್ಮಮ್ಮ ಆಶ್ವಿನಿಯವರ ಮೂಲ ಹೆಸರು ಕನಕಮ್ಮ. ಪ್ರೌಢಶಾಲೆಯ ವ್ಯಾಸಂಗವನ್ನು ತುಮಕೂರಿನಲ್ಲಿ ಮುಗಿಸಿದರು. ಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ಮೈಸೂರಿನಲ್ಲಿ ಪಡೆದರು. ಇಂಟರ್‌ಮಿಡಿಯೇಟ್ ಮುಗಿನ ನಂತರ ಅಕೌಂಟೆಂಟ್ ಜನರಲ್ ಕಛೇರಿಯಲ್ಲಿ ಉದ್ಯೋಗವನ್ನು ಹೊಂದಿದರು. ತದನಂತರ ಇದರ ಅನುಭವದಿಂದಾಗಿ ವಿಶ್ವವಿದ್ಯಾಲಯದ ಆಡಳಿತ ಕಛೇರಿಯಲ್ಲಿ ಆಡಳಿತಾಧಿಕಾರಿಯಾಗಿ ನೇಮಕಗೊಂಡರು. ಕೃಷಿ ವಿಶ್ವವಿದ್ಯಾಲಯದಲ್ಲಿ ೨೬ ವರ್ಷಗಳಷ್ಟು ದೀರ್ಘಕಾಲ ಸೇವೆ ಸಲ್ಲಿಸಿದರು.
ಆಶ್ವಿನಿಯವರ ಕಾದಂಬರಿಗಳಲ್ಲಿ 'ಬೇಸುಗೆ', 'ಕಪ್ಪುಕೊಳ', 'ನಿಲುಕದ ನಕ್ಷತ್ರ', 'ಮನಮಿಡಿಯಿತು', 'ಕಾಮನ ಬಿಲ್ಲು' ಇವು ಜನಪ್ರಿಯ ಚಲನಚಿತ್ರಗಳಾಗಿ ತೆರೆಕಂಡಿವೆ.
ಆಶ್ವಿನಿಯವರು ಮೂಲತಃ ದಿಟ್ಟ



**ಎಂ.ಕೆ. ಇಂದಿರಾ**
ಎಂ.ಕೆ. ಇಂದಿರಾ ಅವರು ೧೯೧೭ ಜನವರಿ ೫ ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಜನಿಸಿದರು. ತಂದೆ ಸೂರ್ಯನಾರಾಯಣರಾವ್, ತಾಯಿ ಬನಶಂಕರಮ್ಮ. ಇವರ ಶಿಕ್ಷಣ ಮಾಧ್ಯಮಿಕ ಶಾಲೆಯ ಎರಡನೆಯ ತರಗತಿಯವರೆಗೆ ಮಾತ್ರ. ಟಿ.ಎಸ್. ರಾಮಚಂದ್ರರಾವ್ ಇವರ ಸೋದರ ಪ್ರಜಾವಾಣಿಯ ಸಂಪಾದಕರಾಗಿದ್ದರು. ಇವರ ಹನ್ನೆರಡನೆಯ ವಯಸ್ಸಿನಲ್ಲಿ ಮಂಡಗದ್ದೆ ಕೃಷ್ಣರಾಯರೊಡನೆ ವಿವಾಹವಾಯಿತು. ಪತಿ ೧೯೬೯ರಲ್ಲಿ ಅಸ್ತಮಾ ಕಾಯಿಲೆಯಿಂದ ನಿಧನರಾದರು. ಇವರಿಗೆ ಎಂಟು ಮಂದಿ ಮಕ್ಕಳು ಅದರಲ್ಲಿ ಉಳಿದವರು ನಾಲ್ವರು ಮಾತ್ರ. ಇಂದಿರಾರವರು ಬರೆಯಲು ಪ್ರಾರಂಭಿಸಿದ್ದು ತಮ್ಮ ನಲವತ್ತೈದನೆಯ ವಯಸ್ಸಿನ ಅನಂತರ ಕೃಷ್ಣರಾಯರ ಪ್ರೇರಣೆ ಇವರಿಗೆ ಬರೆಯಲು ಒತ್ತಾಸೆಯಾಯಿತು. ಕಾದಂಬರಿ, ಪ್ರವಾಸ ಕಥನ, ಕಥೆ, ಹರಟೆ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ.ಇವರ ಕೆಲವು ಕಾದಂಬರಿಗಳು ಭಾರತೀಯ ಕೆಲವು

ಬೆಳೆಸಿದವರಲ್ಲಿ ಇವರು ಪ್ರಮುಖರು. ಇವರ ಹಲವಾರು ಕೃತಿಗಳು ಬೇರೆ ಬೇರೆ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿದೆ. ಇವರು ಪ್ರವಾಸ ಸಾಹಿತ್ಯವನ್ನು ಕುಡಾ ರಚಿಸಿದ್ದಾರೆ. ೧೯೭೫ ರಲ್ಲಿ ಬರ್ಲಿನ್‌ನಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ಕಾಂಗ್ರಸ್‌ಗೆ ಬೆಂಗಲೂರಿನ ಪ್ರತಿನಿಧಿಯಾಗಿ ಪೂರ್ವ ಜರ್ಮನಿ, ರಷ್ಯಾ, ಪೋಲೆಂಡ್‌ಗಳಲ್ಲಿ ಪ್ರವಾಸ ಮಾಡಿ ಬಂದರು (ಇವರು ೧೯೯೧ ಫೆಬ್ರವರಿ ೧೪ ರಂದು ನಿಧನರಾದರು.)

ಕೃತಿಗಳು
ಅನಂತಗೀತ, ಸಂಕೋಲೆಯೊಳಗಿಂದ, ನೂಲುನೇಯ್ದ ಚಂದ್ರ, ಹಿಮದ ಹೂ,ಕಣ್ಮಣಿ, ನೀರಿಗೆ ನೈದಿಲೆ ಶೃಂಗಾರ, ರೂವಾರಿಯ ಲಕ್ಷ್ಮಿ, ಏಳುಸುತ್ತಿನ ಕೋಟೆ, ಹೃದಯ ಸಮುದ್ರ ಗಿರಿಧಾಮ, ಕೇಳು ಕಿಶೋರ, ದಿನಕ್ಕೊಂದು ಕಥೆ ೧೨ ಸಂಪುಟಗಳು ಮುಂತಾದವುಗಳು.

ಗೌರವ, ಪ್ರಶಸ್ತಿ ಪುರಸ್ಕಾರಗಳು.
೧೯೭೭ ರಲ್ಲಿ ಕಾಸರಗೋಡು ಮಹಿಳಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ
೧೯೭೮ರಲ್ಲಿ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ
೧೯೭೮ ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
೧೯೮೧ ರಲ್ಲಿ ಬೆಂಗಳೂರು ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ
೧೯೮೩ ರಲ್ಲಿ ಕನ್ನಡ ರಾಜ್ಯೋತ್ಸವದ ಬೆಳ್ಳಿ ಹಬ್ಬದ ಪ್ರಶಸ್ತಿ
೧೯೮೭ ನಂಜನಗೂಡು ತಿರುಮಲಾಂಬ ಪ್ರಶಸ್ತಿ
೧೯೬೦ ರಲ್ಲಿ 'ರೂಪಾಯಿ ಲಕ್ಷ್ಮಿ'
೧೯೭೧ರಲ್ಲಿ 'ಆರೋಗ್ಯ ದರ್ಶ' ಕೃತಿಗೆ ರಾಜ್ಯ ಸರ್ಕಾರದ ಬಹುಮಾನ ಲಭಿಸಿದೆ.
ಇವರಿಗೆ 'ಅನುಪಮಾ' ಅಭಿನಂದನಾ ಎಂಬ ಅಭಿನಂದನಾ ಗ್ರಂಥವನ್ನು ಅಭಿಮಾನಿಗಳು ಅರ್ಪಿಸಿದ್ದಾರೆ.

ಸ್ವಭಾವದ ವ್ಯಕ್ತಿ, ಗಂಭೀರ ಸ್ವಭಾವದವರು. ಇವರ ಕಾದಂಬರಿಯ ನಾಯಕಿಯರಲ್ಲೂ ಇದನ್ನು ಕಾಣಬಹುದು. ಆಶ್ವಿನಿಯವರ ಬಹುತೇಕ ಕಾಂದಬರಿಗಳು ನಾಯಕಿ ಪ್ರಧಾನವಾದವುಗಳು
ಆಶ್ವಿನಿಯವರಿಗೆ ತೆಲುಗು ಭಾಷೆಯಲ್ಲೂ ಒಳ್ಳೆಯ ಪಾಂಡಿತ್ಯವಿತ್ತು. ತೆಲುಗಿನಿಂದ ಎರಡು ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರಿಗೆ ಚಿಕ್ಕಂದಿನಿಂದಲೂ ಓದುವ ಅಭಿರುಚಿ ಇತ್ತು.


ಭಾಷೆಗಳಿಗೆ ಅನುವಾದಗೊಂಡಿವೆ ಗೆಜ್ಜೆಪೂಜೆ, ಸದಾನಂದ, ಫಣಿಯಮ್ಮ, ಹೂಬಾಣ, ಕಾದಂಬರಿಗಳು ಚಲನಚಿತ್ರಗಳಾಗಿ ಜನಪ್ರಿಯಗೊಂಡಿವೆ. (ಇವರು ೧೯೯೪ ಮಾರ್ಚ್ ೧೫ ರಂದು ನಿಧನರಾದರು.

ಕೃತಿಗಳು
ತುಂಗಭದ್ರ ಹೆಣ್ಣಿನ ಆಕಾಂಕ್ಷೆ, ಕಲಾದರ್ಶಿ, ತಪೋವನದಲ್ಲಿ, ಬಿದಿಗೆ ಚಂದ್ರಮ ಡೊಂಕು, ನಾಗವೀಣಾ, ಚಿದ್ವಿಲಾಸ, ಯಾರು ಹಿತವರು, ಮುಸುಕು, ಡಾಕ್ಟರ್, ಜಾತಿ ಕೆಟ್ಟವಳು, ಕತೆಗಾರ, ಕೂಚುಭಟ್ಟ, ಮಧುವನ, ಜಾಲ, ಆಭರಣ, ನವಜೀವನ, ನಗಬೇಕು, ಅಂಬರದ ಅಪ್ಸರೆ, ದಶಾವತಾರ, ಸುಸ್ವಾಗತ, ಕವಲು, ಪೌರ್ಣಿಮೆ, ಕನ್ಯಾಕುಮಾರಿಯರಿಗೆ, ಕನ್ನಡ ಚಿತ್ರಶಿಲ್ಪಿ, ಚಿತ್ರಭಾರತ, ಪುಟ್ಟಣ್ಣ ಕಣಗಾಲ್, ಮುಂತಾದವು.

ಗೌರವ ಪ್ರಶಸ್ತಿ ಪುರಸ್ಕಾರಗಳು.
೧೯೬೫ ರಲ್ಲಿ 'ಸದಾನಂದ' ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ.
೧೯೭೦ ರಲ್ಲಿ ಕಥಾಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ
೧೯೭೬ ರಲ್ಲಿ ಫಣಿಯಮ್ಮ ಕೃತಿಗೆ ಕರ್ನಾಟಕ ರಾಜ್ಯ ಪ್ರಶಸ್ತಿ
೧೯೮೦ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಗೌರವ.
೧೯೮೧ ರಲ್ಲಿ ದಾವಣಗೆರೆಯಲ್ಲಿ ಜರುಗಿದ ಕರ್ನಾಟಕ ಲೇಖಕಿಯರ ಸಮ್ಮೇಳನದ ಅಧ್ಯಕ್ಷೆ
೧೯೯೧ ರಲ್ಲಿ 'ಸುರಗಿ' ಎಂಬ ಅಭಿನಂದನಾ ಗ್ರಂಥವನ್ನು ಅಭಿಮಾನಿಗಳು ಅರ್ಪಿಸಿದ್ದಾರೆ.

ಉಷಾ ನವರತ್ನರಾವ್
ಉಷಾ ನವರತ್ನರಾವ್ ಅವರು ೧೯೩೯ ನವೆಂಬರ್ ೨೩ ರಂದು ಮೈಸುರಿನಲ್ಲಿ ಜನಿಸಿದರು. ತಂದೆ ಎಂ. ವಿ. ಸುಬ್ಬರಾವ್, ತಾಯಿ ಶಾಂತಾಬಾಯಿ. ಇವುರ ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಓದಿ ಬಿ.ಎ. ಪದವಿ ಪಡೆದುಕೊಂಡರು. ಫ್ರೆಂಚ್, ಜರ್ಮನಿ ಹಾಗೂ ಸಂಸ್ಕೃತದಲ್ಲಿ ಒಳ್ಳೆಯ ಪರಿಶ್ರಮವಿತ್ತು. ಪತ್ರಿಕೋದ್ಯಮ ಡಿಪ್ಲೋಮಾ, ಹರ್ಬಲ್ ಬ್ಯೂಟಿಕೇರ್‌ನಲ್ಲಿ ಸರ್ಟಿಫಿಕೇಟ್ ಕೋರ್ಸ್ ಹೊಂದಿದ್ದರು. ಇವರು ಓದುವ ಸಂದರ್ಭದಲ್ಲಿಯೇ ಬರೆಯುವ ಗೀಳಿಗೆ ಬಿದ್ದರು.
ಅನಂತರ ಇವರು ನವರತ್ನರಾಮ್ ಎಮಬುವರೊಡನೆ ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ಇವರಿಗೆ ಕರ್ನಾಟಕ ಸಂಗೀತ ಹಾಗೂ ಭರತ ನಾಟ್ಯಗಳಲ್ಲಿ ಒಳ್ಳೆಯ ಪ್ರಾವಿಣ್ಯತೆ ಇತ್ತು. (ಇವರು ೨೦೦೦ ಅಕ್ಟೋಬರ್ ಒಂದರಂದು ನಿಧನರಾದರು)

ವಿ.ಎಂ. ಇನಾಂದರ್
ವಿ.ಎಂ. ಇನಾಂದರ್ ಅವರು ೧೯೧೨ರ ಅಕ್ಟೋಬರ್ ೧ ರಂದು ಬೆಳಗಾವಿ ತಾಲ್ಲೂಕಿನ ಹುದಲಿಯಲ್ಲಿ ಜನಿಸಿದರು. ವೆಂಕಟೇಶ್ ಮಾಧ್ವರಾವ್ ಇನಾಂದರ್ ಇವರ ಪೂರ್ಣ ಹೆಸರು. ತಂದೆ ಮದ್ವರಾಯ, ತಾಯಿ ಕಮಲಾಬಾಯಿ. ಪ್ರಾಥಮಿಕ ಶಿಕ್ಷಣವನ್ನು ಇವರ ಗ್ರಾಮದಲ್ಲಿಯೇ ಮುಗಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಚಿನ್ನದ ಪದಕದೊಂದಿಗೆ ಬಿ.ಎ (ಅನರ್ಸ್) ಪದವಿ ಪಡೆದುಕೊಂಡರು. ಅನಂತರ ೧೯೪೧ರಲ್ಲಿ ಮುಂಬೈ ಎಲ್ಫಿನ್‌ಸ್ಟನ್ ಕಾಲೇಜಿನಿಂದ ಎಂ.ಎ. ಪದವಿ ಪಡೆದುಕೊಂಡರು. ಮುಂದೆ ಅದೇ ಕಾಲೇಜಿನಲ್ಲಿಯೇ ಇಂಗ್ಲಿಷ್ ಉಪ ಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಸಂಸ್ಕೃತ, ಇಂಗ್ಲಿಷ್, ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ. ಇವರು


ಕೆ.ವಿ. ಅಯ್ಯರ್
ಕೆ.ವಿ.ಅಯ್ಯರ್ ಅವರು ಕೋಲಾರ ಜಿಲ್ಲೆಯ ದೇವರಾಯನ ಸಮುದ್ರದಲ್ಲಿ ಜನಿಸಿದರು. ಕೋಲಾರ ವೆಂಕಟೇಶ್ ಅಯ್ಯರ್ ಇವರ ಪೂರ್ಣ ಹೆಸರು. ತಂದೆ ರಾಮಸ್ವಾಮಯ್ಯ, ಬಡತನದಿಂದಾಗಿ ಮೆಟ್ರಿಕ್ಯುಲೇಷನ್‌ವರೆಗೆ ಓದಿ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಬೇಕಾಯಿತು.
ಇವರಿಗೆ ಅಂಗ ಸಾಧನೆಯಲ್ಲಿ ವಿಶೇಷ ಅಭಿರುಚಿಯಿತ್ತು. ಇದರಿಂದ ಅದರ ಆಸಕ್ತಿವಹಿಸಿ ಸ್ವಂತ ವ್ಯಾಯಾಮ ಶಾಲೆಯನ್ನು ಇವರು ಬೆಂಗಳೂರಿನಲ್ಲಿ ತೆರೆದರು. ಇವರಿಗೆ ನಾಟಕದಲ್ಲಿ ವಿಶೇಷ ಅಭಿರುಚಿಯಿದ್ದ ಕಾರಣದಿಂದ ಟಿ.ಪಿ. ಕೈಲಾಸಂ ಪರಿಚಿತರಾದರು. ಟಿ.ಪಿ ಕೈಲಾಸಂ ಇವರಿಗೆ ಬರೆಯಲು

ಕೃತಿಗಳು
ಆಲಾಪನಾ, ಆಸೆಗಳು ನೂರಾರು, ಅಂದೋಲನ, ಅಂಗೈಯಲ್ಲಿ ಅರಮನೆ, ಹೊಸ ಬಾಳಿಗೆ ನೀ ಜೊತೆಯಾದೆ, ಹೊಸರಾಗ, ಹೊಟ್ಟೆಗಾಗಿ ಗೇಣುಬಟ್ಟೆಗಾಗಿ, ಹೃದಯಮಿಲನ, ಇಲ್ಲೆ ಸ್ವರ್ಗ, ಕರೆದರೆ ಬರಬಾರದೇ, ಕೊನೆಯ ರಾತ್ರಿ ಮತ್ತು ಪ್ರತೀಕಾರ, ಮಕ್ಕಳಿರಲ್ಲವ್ವ ಮನೆತುಂಬ, ಮಾಮರಕೋಗಿಲೆ, ತವಸುಪ್ರಭಾತ, ವಧು ಬೇಕಾಗಿದೆ, ವಿಭಜನೆ, ವಾರ್ಡ್‌ನಂ.೫ ಯೌವ್ವನದ ಹೊನಲಲ್ಲಿ ಮುಂತಾದವು.

ಗೌರವ ಪ್ರಶಸ್ತಿ ಪುರಸ್ಕಾರಗಳು.
೧೯೭೫ರಲ್ಲಿ ಅತ್ಯುತ್ತಮ ಲೇಖಕಿ ಪ್ರಶಸ್ತಿ
೧೯೭೫ ರಲ್ಲಿ ಅತ್ಯುತ್ತಮ ಉಪಾಧ್ಯಾಯಿನಿ ಪ್ರಶಸ್ತಿ
೧೯೮೨ ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಮೊದಲಾದವು.

ಇಂಗ್ಲೆಂಡ್, ಕೆನಡಾ ಅಮೆರಿಕಾ ದೇಶಗಳನ್ನು ಪ್ರವಾಸ ಮಾಡಿದ್ದಾರೆ. (ಇವರು ೧೯೮೬ ರಲ್ಲಿ ನಿಧನರಾದರು)
ಕೃತಿಗಳು
ಸ್ವರ್ಗದ ಬಾಗಿಲು, ಯಾತ್ರಿಕರು, ಈಪರಿಯ ಸೊಬಗು, ಚಿತ್ರಲೇಖ ಯಾತ್ರಿಕರು, ನವಿಲು ನೌಖೆ, ಮುಕ್ತಿ, ಎರಡು ಧ್ರುವ, ಮುರಾಚಿಟ್ಟೆ, ಕನಸಿನ ಮನೆ, ವಿಜಯ ಯಾತ್ರೆ, ಶಾಪ, ಪಾಶ್ಚಾತ್ಯ ಕಾವ್ಯ ಮೀಮಾಂಸೆ, ಪಾಶ್ಚಾತ್ಯ ವಿಮರ್ಶೆಯ ಪ್ರಾಚೀನ ಪರಂಪರೆ, ಯಯಾತಿ ಇದು ಇವರ ಅನುವಾದಿತ ಕೃತಿ. ಬಿಡುಗಡೆ, ಅಂಬೇಡ್ಕರ್ ಜೀವನ ಚರಿತ್ರೆ, ಉತ್ತರ ರಾಮ ಚರಿತ್ರೆ, ಗೋವಿಮದ ಪೈ. ಶಿವರಾಮ ಕಾರಂತ ಮುಂತಾದವು.

ಗೌರವ ಪ್ರಶಸ್ತಿ ಪುರಸ್ಕಾರಗಳು
ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ,
ಯಯಾತಿ ಕಾದಂಬರಿಯ ಅನುವಾದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.
ಮುಂಬಯಿ ವಿಶ್ವವಿದ್ಯಾಲಯ ಮಾಂಡಲಿಕ ಸುವರ್ಣ ಪದಕ,
ಭಾರತೀಯ ವಿದ್ಯಾಭವನದ ಸುವರ್ಣ ಪದಕ ಲಭಿಸಿದೆ.

ಪ್ರೇರೇಪಿಸಿದರು. ಜಿ.ಪಿ. ರಾಜರತ್ನಂ ಅವರು ಇವರಿಗೆ ಮಾರ್ಗದರ್ಶನ ನೀಡಿದರು. ನಾಟಕ ಕ್ಷೇತ್ರವು ಇವರಿಗೆ ಪ್ರಿಯವಾದುದ್ದರಿಂದ ರವಿ ಎಮಬ ನಾಟಕ ಸಂಘವೊಂದನ್ನು ಸ್ಥಾಪಿಸಿ ಅದರ ಸ್ಥಾಪಕ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಇವರು ೧೯೮೦ರ ಜನವರಿ ೩ ರಂದು ನಿಧನ ಹೊಂದಿದರು.


ಕೃತಿಗಳು
ಶಾಂತಲಾ, ರೂಪದರ್ಶಿ, ಮಹಾಶಿಲ್ಪಿ, ಸಮುದ್ಯತಾ, ದಯ್ಯದ ಮನೆ, ಕೈಲಾಸಂ ಸ್ಮರಣೆ ಮುಂತಾದವು

ಗೌರವ, ಪ್ರಶಸ್ತಿ ಪುರಸ್ಕಾರಗಳು
೧೯೭೯ ರಲ್ಲಿ ಕರ್ನಾಟಕದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿತು.




**ಸು.ರಂ. ಎಕ್ಕುಂಡಿ.**
ಸುಬ್ಬಣ್ಣ ರಂಗನಾಥ ಎಕ್ಕುಂಡಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರುನಲ್ಲಿ ೧೯೨೩ರ ಜನವರಿ ೨೦ ರಂದು ಜನಿಸಿದರು. ತಂದೆ ರಂಗಾಚಾರ್ಯ, ಶಿಕ್ಷಕರು, ತಾಯಿ ರಾಜಕ್ಕ. ಇವರ ಆರಂಭದ ಶಿಕ್ಷಣವು ಹುಬ್ಬಳ್ಳಿಯಲ್ಲಿ ನಡೆಯಿತು. ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನಲ್ಲಿ ಮತ್ತು ಹೈದರಾಬಾದಿನಲ್ಲಿ ಉನ್ನತ ಶಿಕ್ಷಣವನನು ಮುಗಿಸಿ ಸಿ.ಐ.ಈ ಪದವಿಯನ್ನು ಪಡೆದರು. ಮುಂದೆ ಬಂಕಿಕೊಡ್ಲಿನ ಆನಂದಾಶ್ರಮ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ, ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಇವರ ಗುರುಗಳು ಇವರಿಗೆ ಬಿ.ಎಂ.ಶ್ರೀ, ಟೆನಿಸನ್, ವರ್ಡ್ಸ್‌ವರ್ತ್ ಮುಂತಾದವರ ಸಾಹಿತ್ಯವನ್ನು ಪರಿಚಯ ಮಾಡಿಸಿಕೊಟ್ಟರು. ಇವರು ತಮ್ಮ ಸಾಹಿತ್ಯವನ್ನು ಹದಿನೈದನೆಯ ವಯಸ್ಸಿನಲ್ಲಿಯೇ ಆರಂಭಿಸಿದರು. ಹುಬ್ಬಳ್ಳಿಯಲ್ಲಿ ಬೇಂದ್ರೆ, ಗೋಕಾಕ್, ಶಂ.ಬಾ.ಜೋಶಿ, ಶ್ರೀರಂಗ, ಆನಂದಕಂದ ಮೊದಲಾದ ಮಹೋದಯರ ಪರಿಚಯವಾಗಿ ಕಾವ್ಯದಲ್ಲಿ ಆಸಕ್ತಿ ಬೆಳೆಯಿತು. ಇವರು ಕೆಲವು ಕಾಲ ರೋಮನ್ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಇವರು ೧೯೯೫ರ ಆಗಸ್ಟ್ ೨೦ ರಂದು ನಿಧನರಾದರು.

ಕೃತಿಗಳು.



**ಕನಕದಾಸರು.**
ಕನಕದಾಸರು ಪುರಂದದಾಸರ ಸಮಕಾಲೀನರು. ಬೀರಪ್ಪ ಮತ್ತು ಬಚ್ಚಮ್ಮ ಕುರುಬ ದಂಪತಿಗಳ ಮಗನಾಗಿ ೧೫೦೯ ರಲ್ಲಿ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದರು. ಕಾಗಿನೆಲೆಯಲ್ಲಿ ಆದಿಕೇಶವನ ಗುಡಿಯನ್ನು ಕಟ್ಟಿಸಿ ಆತನನ್ನು ಆರಾಧ್ಯ ದೈವನನ್ನಾಗಿ ಮಾಡಿಕೊಂಡು ಸಾಹಿತ್ಯ ರಚನೆ ಮಾಡಿದ ಕವಿ. 'ಕಾಗಿನೆಲೆಯಾದಿಕೇಶವ' ಇವರ ಅಂಕಿತನಾಮವಾಗಿದೆ. ಉಡುಪಿಯ ಶ್ರೀಕೃಷ್ಣ ದರ್ಶನಕ್ಕೆ ಶೂದ್ರನಾದ ಇವರಿಗೆ ಅರ್ಚಕರು ಅವಕಾಶ ಕಲ್ಪಿಸಿಕೊಡದಿದ್ದಾಗ ಕೃಷ್ಣ ವಿಗ್ರಹವೇ ಈತನ ಕಡೆಗೆ ತಿರುಗಿ ದರ್ಶನ ಕೊಟ್ಟಿತಂತೆ, ಆಗ ಅಲ್ಲಿನ ಗೋಡೆಗೆ ಒಂದು ಕಿಂಡಿ ಬಿದ್ದು ಕನಕನ ಕಿಂಡಿಯೆಂದು ಪ್ರಸಿದ್ಧಿಯಾಗಿದೆ. ಇದು ಇವರ ಒಂದು ಪವಾಡವಾಗಿದೆ. ಕನಕದಾಸರು ಹರಿಕೀರ್ತನೆಗಳನ್ನು ರಚಿಸಿದರು. ಇವುಗಳಲ್ಲದೆ ಷಟ್ಪದಿ ಸಾಂಗತ್ಯ ಕೃತಿಗಳನ್ನು ರಚಿಸಿದರು. 'ಮೋಹನ ತರಂಗಿಣಿ' ಇದೊಮದು ಸಾಂಗತ್ಯ ಕೃತಿ. ೨೭೦೦ ಪದ್ಯಗಳನ್ನು ಒಳಗೊಂಡ ದೊಡ್ಡ ಕಾವ್ಯ. ಕಾಮದಹನ ಉಷಾ ಅನಿರುದ್ಧ ಪ್ರಣಯ ಶಂಬಕಾಸುರ ವಧೆ, ಬಾಣಾಸುರ ವಿಜಯದ ಕತೆ



**ಡಿ.ಎಸ್. ಕರ್ಕಿ**
ಡಿ.ಎಸ್.ಕರ್ಕಿ ಅವರು ೧೯೦೭ ರ ನವೆಂಬರ್ ೧೫ ರಂದು ಬೆಳಗಾವಿ ಜಿಲ್ಲೆಯ ಭಾಗೋಜಿ ಕೊಪ್ಪದಲ್ಲಿ ಜನಿಸಿದರು. ತಂದೆ ಸಿದ್ದಪ್ಪ ಕರ್ಕಿ, ತಾಯಿ ದುಂಡವ್ವ ದುಂಡಪ್ಪ ಸಿದ್ದಪ್ಪ ಕರ್ಕಿ ಇವರ ಪೂರ್ಣ ಹೆಸರು. ಇವರು ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡಿದ್ದರಿಂದಾಗಿ ಇವರು ಸೋದರಮಾವನ ಮನೆಯಲ್ಲಿ ಬೆಳೆಯಬೇಕಾಯಿತು. ಬೆಲ್ಲದ ಬಾಗೇವಾಡಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಬೆಳಗಾವಿಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪಡೆದರು. ಮಹಾರಾಷ್ಟ್ರದ ಕೊಲ್ಲಾಪುರದ ರಾಜಾರಾಮ ಕಾಲೇಜಿನಲ್ಲಿ ಶಿಕ್ಷಣವನ್ನು ಪಡೆದರು. ಮಹಾರಾಷ್ಟ್ರದ ಕೊಲ್ಲಾಪುರದ ರಾಜಾರಾಮ್ ಕಾಲೇಜಿನಲ್ಲಿ ಪುಣೆಯ ಫರ್ಗುಸನ್ ಕಾಲೇಜಿನಲ್ಲಿ, ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಓದಿ ಎಂ.ಎ. ಪದವಿ ಪಡೆದರು. ಕಾರವಾರದ ಸರ್ಕಾರಿ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಜೀವನ ಆರಂಭಿಸಿದರು. ಹಲವು ಕಾಲ ಕೆ ಎಲ್ ಇ ಸೊಸೈಟಿಯಲ್ಲಿ ಸೇವೆ ಸಲ್ಲಿಸಿದರು. ಅನಂತರ ಜಿ.ವಿ.ಹೈಸ್ಕೂಲಿನಲ್ಲಿ ಅಧ್ಯಾಪಕರಾದರು. ಅನಂತರ ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ,

ಪ್ರತಿಬಿಂಬಗಳು, ಹಾವಾಡಿಗರ ಹುಡುಗ, ಆನಂದ ತೀರ್ಥರು, ಮತ್ಸ್ಯಗಂಧಿ, ಸಂತಾನ, ಲೆನಿನ್ನರ ನೆನಪಿಗಾಗಿ, ಗೋದಿಯ ತೆನೆಗಳು, ಕಾವ್ಯ ವಿಮರ್ಶೆ, ನವ್ಯ ಕವಿತೆ, ಮಧ್ವಮುನಿ, ಬೆಳ್ಳಕ್ಕಿಗಳು, ನೆರಳು, ಪಂಜುಗಳು, ಪು.ತಿ.ನ. ಜೀವನ ಚರಿತ್ರೆ, ಬಕುಲದ ಹೂಗಳು ಮುಂತಾದವು.

ಗೌರವ, ಪ್ರಶಸ್ತಿ ಪುರಸ್ಕಾರಗಳು

೧೯೭೦ ರಲ್ಲಿ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ

೧೯೭೪ರಲ್ಲಿ ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ

೧೯೮೨ ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ

೧೯೯೨ ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಇದರಲ್ಲಿದೆ. ರಾಮಧಾನ್ಯ ಚರಿತ್ರೆ ಇದೊಂದು ಭಾಮಿನಿ ಷಟ್ಪದಿಯಲ್ಲಿರುವ ಖಂಡಕಾವ್ಯ. ಅಪರೂಪದ ಕೃತಿ. ಇಲ್ಲಿ ೧೬೫ ಪದ್ಯಗಳಿದ್ದು ರಾಗಿ ಮತ್ತು ಭತ್ತಗಳ ನಡುವೆ ವಾದ ವಿವಾದ ಮೂಡಿ ಅಲ್ಲಿ ರಾಗಿ ಗೆದ್ದಿತೆಂದು ಹೇಳುವ ಕೃತಿಯಾಗಿದೆ. ನಳಚರಿತ್ರೆ ಭಾಮಿನಿ ಷಟ್ಪದಿಯಲ್ಲಿರುವ ರಮ್ಯವಾದ ಕಥನ ಕಾವ್ಯ. ಇಲ್ಲಿ ೪೮೦ ಪದ್ಯಗಳಿವೆ. ಇದರಲ್ಲಿ ನಳದಮಯಂತಿಯರ ಕತೆ ಸ್ವಾರಸ್ಯಕರವಾಗಿ ಮೂಡಿಬಂದಿದೆ. ಹರಿಭಕ್ತಸಾರವು ಭಾಮಿನಿ ಷಟ್ಪದಿಯ ೧೧೦ ಪದ್ಯಗಳನ್ನೊಳಗೊಂಡ ಭಕ್ತಿ ವೈರಾಗ್ಯಗಳನ್ನು ಕುರಿತು ತಿಳಿಸುವ ಕಾವ್ಯವಾಗಿದೆ. ಇವರ ಕೀರ್ತನೆಗಳಲ್ಲಿ ಭಕ್ತಿ ತೊರೆಯಾಗಿ ಹರಿದಿದೆ. ಏನು ಇಲ್ಲದ ಎರಡು ದಿನದ ಸಂಸಾರ. ಬೆಳ್ಳಿ ಬಂಗಾರಿಟ್ಟುಕೊಂಡು ಒಳ್ಳೆ ವಸ್ತ್ರ ಹೊದ್ದುಕೊಂಡು ಚಳ್ಳಿ ಪಿಳ್ಳಿ ಗೊಂಬೆಯಂತೆ ಆಡಿಹೋಯಿತು. ತನು ನಿನ್ನದು ಜೀವನ ನಿನ್ನದು, ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ, ಅಜ್ಞಾನಿಗಳ ಕೂಡಾ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡ ಜಗಳವೇ ಲೇಸು ಹೀಗೆ ಸಮಾಜದ ಕಟು ಟೀಕೆ ಪ್ರಪಂಚದ ಅನುಭವ. ಭಕ್ತಿಯ ಭೋರ್ಗರೆತ ಜನ ಮನವನ್ನು ತಿದ್ದಿ ಸಮಾಜ ಸುಧಾರಿಸುವ ಕೀರ್ತನೆಗಳನ್ನು ರಚಿಸಿದ್ದಲ್ಲದೆ ಇನ್ನು ಹಲವಾರು ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ಅರ್ಪಿಸಿದ ಅಪಾರ ಕೀರ್ತಿ ಇವರದು.

ಕೆಎಲ್‌ಇ ಸೊಸೈಟಿಯ ಹುಬ್ಬಳ್ಳಿಯ ಕಾಡಸಿದ್ದೇಶ್ವರ ಕಲಾ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ, ಪ್ರಾಂಶುಪಾಲರಾಗಿ, ಸೇವೆ ಸಲ್ಲಿಸಿದರು. 'ಕನ್ನಡ ಛಂಧೋವಿಕಾಸ' ಕೃತಿಗೆ ೧೯೪೪ರಲ್ಲಿ ಪಿ.ಎಚ್.ಡಿ. ಪದವಿ ನೀಡಿತು. ಇವರು ಜನವರಿ ೧೬ ೧೯೮೪ ರಲ್ಲಿ ನಿಧನರಾದರು.

ಕೃತಿಗಳು

ನಕ್ಷತ್ರಗಾನ, ಕನ್ನಡ ಛಂದೋವಿಕಾಸ, ಗೀತಗೌರವ, ಭಾವತೀರ್ಥ, ತನನ ತೋಂ, ಕರಿಕೆ ಕಣಗಿಲು, ನಮನ, ಸಾಹಿತ್ಯ ಸಂಸ್ಕೃತಿ ಶೃತಿ, ಮಕ್ಕಳ ಶಿಕ್ಷಣ, ಮೊದಲಾದವು. 'ಹಚ್ಚೇವು ಕನ್ನಡದ ದೀಪ' ಇವರ ಒಂದು ಖ್ಯಾತಿವೆತ್ತ ಕವಿತೆ.

ಗೌರವ, ಪ್ರಶಸ್ತಿ ಪುರಸ್ಕಾರಗಳು

೧೯೪೪ ರಲ್ಲಿ ಕನ್ನಡ ಛಂದೋವಿಕಾಸ ಕೃತಿಗೆ ಪಿ.ಎಚ್.ಡಿ. ಪದವಿ


೧೯೭೨ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೯೧ ರಲ್ಲಿ 'ಕಾವ್ಯ ಗೌರವ' ಎಂಬ ಅಭಿನಂದನಾ ಗ್ರಂಥವನ್ನು ಅಭಿಮಾನಿಗಳು ಅರ್ಪಿಸಿದ್ದಾರೆ.



ಕೆರೂರ ವಾಸುದೇವಾಚಾರ್ಯ

ಕೆರೂರ ವಾಸುದೇವಾಚಾರ್ಯರು ೧೮೬೬ ರ ಅಕ್ಟೋಬರ್ ೧೫ ರಂದು ಬಾಗಲಕೋಟೆ ಜಿಲ್ಲೆಯ ಕೆರೂರಿನಲ್ಲಿ ಜನಿಸಿದರು. ತಂದೆ ಶ್ರೀನಿವಾಸಚಾರ್ಯ ಕೆರೂರಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಧಾರವಾಡದಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದರು. ಪ್ರೌಢ ಶಿಕ್ಷಣಕ್ಕಾಗಿ ಪೂನಾದ ಫರ್ಗೂಸನ್ ಕಾಲೇಜಿಗೆ ಸೇರಿದರು. ಕಾರಣಾಂತರಗಳಿಂದ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ವಕೀಲಿ ಅಭ್ಯಾಸದ ಕಡೆಗೆ ಗಮನ ಸೆಳೆದು ೧೮೯೯ ರಲ್ಲಿ ವಕೀಲಿ ವೃತ್ತಿಯಲ್ಲಿ ತೇರ್ಗಡೆ ಹೊಂದಿದರು. ವಕೀಲಿ ಪದವಿ ಪಡೆದರೂ ಅವರ ಮನಸ್ಸು ಹೊರಳಿದ್ದು ಸಾಹಿತ್ಯ ಮತ್ತು ಪತ್ರಿಕೋದ್ಯಮದತ್ತ ಇವರು 'ಶುಭೋದಯ' ಮತ್ತು ಸಚಿತ್ರ ಭಾರತ ಎಂಬ ಪತ್ರಿಕೆಗಳ ಸಂಪಾದಕರಾಗಿದ್ದರು. ಹೊಸಗನ್ನಡದ ಪ್ರಾರಂಭದ ಗಮನಾರ್ಹ ಕಾದಂಬರಿಕಾರರಲ್ಲಿ ಕೆರೂರು ವಾಸುದೇವಾಚಾರ್ಯರು ಒಬ್ಬರು. ಕನ್ನಡದ ಪ್ರಥಮ ಸಾಮಾಜಿಕ ಕಾದಂಬರಿಯ 'ಇಂದಿರಾ' ಕೃತಿಯ ಕರ್ತೃ ವಾಸುದೇವಾಚಾರ್ಯರು



ನಾ. ಕಸ್ತೂರಿ

ನಾ.ಕಸ್ತೂರಿಯವರು ೧೮೯೭ ರ ಡಿಸೆಂಬರ್ ೧೫ ರಂದು ಕೇರಳ ತ್ರಿಪುಣ್ತೂರ್‌ನಲ್ಲಿ ಜನಿಸಿದರು. ಇವರ ಮಾತೃ ಭಾಷೆ ಮಲಯಾಳಂ. ಆದರೆ ಇವರು ಬರೆದದ್ದು ಕನ್ನಡದಲ್ಲಿ. ಇವರ ವಿದ್ಯಾಭ್ಯಾಸ ಕೇರಳದಲ್ಲಿ ಜರುಗಿತು. ತಿರುವನಂತಪುರದಲ್ಲಿ ಎಂ.ಎ. ಮತ್ತು ಬಿ.ಎಲ್. ಪದವಿಗಳನ್ನು ಪಡೆದುಕೊಂಡರು. ತದನಂತರ ಮೈಸುರಿಗೆ ಬಂದು ಬನುಮಯ್ಯನವರ ವಿದ್ಯಾಸಂಸ್ಥೆಯ ಪ್ರೌಢಶಾಲೆಯಲ್ಲಿ ಇತಿಹಾಸ ಅಧ್ಯಾಪಕರಾಗಿ ಕೆಲವು ಕಾಲ ಸೇವೆ ಸಲ್ಲಿಸಿದರು. ತದನಂತರ ಮೈಸುರು ವಿಶ್ವವಿದ್ಯಾಲಯದ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ ಇವರು ಉಪಪ್ರಾಧ್ಯಾಪಕರಾಗಿ, ಸೂಪರಿಂಡೆಂಟರಾಗಿ ವಿವಿಧ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ ೧೯೫೫ ರಲ್ಲಿ ನಿವೃತ್ತಿ ಹೊಂದಿದರು. ಸನಾತನ ಸಾರಥಿ ಎಂಬ ಆಧ್ಯಾತ್ಮಿಕ ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸಿದರು. ಹಾಸ್ಯ ಪ್ರಧಾನ

ಕಮಲಾ ಹಂಪನಾ

ಕಮಲಾ ಹಂಪನಾ ಅವರು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ೧೯೩೫ ಅಕ್ಟೋಬರ್ ೨೮ ರಂದು ಜನಿಸಿದರು. ತಂದೆ ರಾಮಧಾಮ ನಾಯಕ್, ತಾಯಿ ರಂಗಲಕ್ಷ್ಮಮ್ಮ. ಕ್ಯಾತಸಂದ್ರ, ಯಳಂದೂರು, ಅಮೃತೂರು ಚಳ್ಳಕೆರೆ, ಭದ್ರಾವತಿ, ತುಮಕೂರು, ಹಾಗೂ ಮೈಸೂರಿನಲ್ಲಿ ಇವರ ವಿದ್ಯಾಭ್ಯಾಸ ನಡೆಯಿತು. ಸುಮಾರು ೩೫ ವರ್ಷ ಅಧ್ಯಾಪಕ ವೃತ್ತಿ ನಿರ್ವಹಿಸಿದ ಇವರು ೧೯೯೩ರಲ್ಲಿ ನಿವೃತ್ತರಾದ ಮೇಲೆ ಮೈಸೂರು ವಿಶ್ವವಿದ್ಯಾಲಯದ. ಜೈನಶಾಸ್ತ್ರ ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷೆಯಾಗಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಮೇರಿಕಾ, ಕೆನಾಡಾ ಮುಂತಾದ ವಿದೇಶಗಳಿಗೆ ಭೇಟಿ ನೀಡಿ ಅಲ್ಲಿ ಮೌಲಿಕ ಪ್ರಬಂಧಗಳನ್ನು ಮಂಡಿಸಿ ಜನರ ಮೆಚ್ಚುಗೆ ಗಳಿಸಿದ್ದಾರೆ. ಕುವೆಂಪು, ತೀ.ನಂ. ಶ್ರೀಕಂಠಯ್ಯ ಡಿ.ಎಲ್.ನರಸಿಂಹಚಾರ್, ಗುರುಗಳಾಗಿದ್ದರು. ಪ್ರಸಿದ್ಧ ಸಾಹಿತಿ

ಕಾದಂಬರಿಕಾರರಂತೆ ಕತೆಗಾರರಾಗಿಯೂ ಪ್ರಮುಖರು. ಹಲವಾರು ಕಥೆಗಳನ್ನು ರಚಿಸಿದ್ದಾರೆ. ಕೆರೂರರು ಸಾಹಿತ್ಯ ಕೃಷಿಯಲ್ಲಿ ನಾಟಕ ಸಾಹಿತ್ಯವೂ ಕೂಡ ಗಮನಾರ್ಹವಾದದ್ದು. ಕೆರೂರರು ಜೀವಿಸಿದ್ದು ಐವತ್ತೈದು ವರ್ಷ ಮಾತ್ರ. ಅವರ ಸಾಹಿತ್ಯ ಸೇವೆ, ಪತ್ರಿಕೋದ್ಯಮ ಕಾರ್ಯ ನಡೆದದ್ದು ಎರಡು ದಶಕಗಳ ಅವಧಿಯಲ್ಲಿ ಸಣ್ಣ ಕಥೆ, ಕಾದಂಬರಿ, ನಾಟಕಗಳನ್ನು ರಚಿಸಿ ಮಹತ್ವಪೂರ್ಣವಾದ ಸೇವೆ ಸಲ್ಲಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ತನ್ನದೆ ಆದ ವಿಶಿಷ್ಟ ಕೊಡುಗೆ ನೀಡಿದ್ದಾರೆ. ವಾಸುದೇವ ವಿನೋದಿನಿ ನಾಟ್ಯ ಸಭೆಯವರು ೧೯೬೪ ರಲ್ಲಿ ಕೆರೂರರ ಜ್ಞಾಪಕಾರ್ಥವಾಗಿ 'ವಾಸುದೇವ ಪ್ರಶಸ್ತಿ' ಎಂಬ ಸ್ಮರಣ ಗ್ರಂಥವನ್ನು ಪ್ರಕಟಿಸಿದ್ದಾರೆ. ಇವರು ಜನವರಿ ೨೧ ರಂದು ನಿಧನ ಹೊಂದಿದರು.

ಕೃತಿಗಳು
ಯದುಮಹಾರಾಜ, ಭ್ರಾತೃಘಾತಕನಾದ ಔರಂಗಜೇಬ, ವಾಲ್ಮೀಕಿ ವಿಜಯ, ಪ್ರೇಮ ವಿಜಯ, ತೊಳೆದ ಮುತ್ತು, ಬೆಳಗಿದ ದೀಪಗಳು, ಇಂದಿರೆ, ಮಲ್ಲೇಶಿಯ ನಲ್ಲೆಯರು, ಪ್ರಕೃತಿಬಲ, ಮನೆಮನೆಯ ಸಮಾಚಾರ, ನಳದಮಯಂತಿ, ವಸಂತಯಾಮಿನಿ, ಸ್ವಪ್ನ ಚಮತ್ಕಾರ, ಸುರತನಗರದ ಶ್ರೇಷ್ಠಿ, ಪತಿ ವಶೀಕರಣ ಮುಂತಾದವು.

ಬರವಣಿಗೆಗೆ ಹೆಸರಾಗಿದ್ದ ನಾ.ಕಸ್ತೂರಿ ಕನ್ನಡದ ಹೆಸರಾಂತ ಶ್ರೇಷ್ಠ ಬರಹಗಾರರು. ನಾ.ಕಸ್ತೂರಿಯವರು 'ಕೊರವಂಜಿ' ಪತ್ರಿಕೆಗೆ ಇಪ್ಪತ್ತೈದು ವರ್ಷಗಳ ಕಾಲ ಲೇಖನಗಳನ್ನು ಬರೆದರು. ಉತ್ತಮ ಭಾಷಣಕಾರರಾಗಿದ್ದ ನಾ. ಕಸ್ತೂರಿಯವರು ತಮ್ಮ ಭಾಷಣಗಳುದ್ದಕ್ಕೂ ಹಾಸ್ಯ ಮಿಶ್ರಿತವಾಗಿ ಮಾತನಾಡಿ ಜನರನ್ನು ರಂಜಿಸುತ್ತಿದ್ದರು. ಇವರು ೧೯೮೭ ರ ಆಗಸ್ಟ್ ೧೪ ರಂದು ಪುಟ್ಟಪರ್ತಿಯಲ್ಲಿ ನಿಧನರಾದರು.

ಕೃತಿಗಳು.
ಚೆಂಗೊಲಿಚೆಲುವ, ಗಗ್ಗಯ್ಯನ ಗಡಿಬಿಡಿ, ಚಕ್ರದೃಷ್ಟಿ, ಗೃಹದಾರಣ್ಯಕ, ಶಂಖವಾದ್ಯ, ಗಾಳಿಗೋಪುರ, ಯದ್ವಾತದ್ವಾ, ಡೊಂಕುಬಾಲ, ಉಪಾಯವೇದಾಂತ, ಅಲ್ಲೋಲ ಕಲ್ಲೋಲ, ಅನರ್ಥಕೋಶ, ಪಾತಾಳದಲ್ಲಿ ಪಾಪಚ್ಚಿ, ದಿಲ್ಲೀಶ್ವರನ ದಿನಚರಿ, ಕಾಡಾನೆ, ವರಪರೀಕ್ಷೆ, ಕೆಂಪು ಮೀನು, ಎರಡು ಬಳ್ಳಿ, ಅಶೋಕ, ಮದುವೆ, ಲೇಮಿಸರ್ ಬಲ್ಸ್, ಮೊದಲಾದವು.

ಗೌರವ, ಪ್ರಶಸ್ತಿ ಪುರಸ್ಕಾರಗಳು
೧೯೮೧ ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಇವರನ್ನು ಪುರಸ್ಕರಿಸಿತು.

ಹಂಪ ನಾಗರಾಜಯ್ಯರೊಡನೆ ೧೯೬೧ ರಲ್ಲಿ ವಿವಾಹವಾದರು. ಇವರು ಬಹುಮುಖ ಸಾಹಿತ್ಯ ಕೃಷಿ ನಡೆಸಿದ್ದಾರೆ. ಪ್ರಸ್ತುತ ಇವರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಕೃತಿಗಳು:
ಅಕ್ಕಮಹಾದೇವಿ, ಬದ್ದವಣ, ಬಿತ್ತರ, ಬೊಗಸೆ, ಬೊಮ್ಮಳ, ಚಾಮುಂಡರಾಯ ಪುರಾಣ, ಜಾತಿ ಮೀಮಾಂಸೆ, ಮಕ್ಕಳೊಡನೆ ಮಾತುಕತೆ, ವೀರವನಿತೆ ಓಬ್ಬವ್ವ, ಹೆಳವನಕಟ್ಟೆ ಗಿರಿಯಮ್ಮ, ಸುಕುಮಾರ ಚರಿತೆ ಸಂಗ್ರಹ, ಭರತೇಶ ವೈಭವ, ಶಾಂತಿನಾಥ, ಆದರ್ಶ ಜೈನ ಮಹಿಳೆಯರು, ನಕ್ಕಿತು ಹಾಲಿನ ಬಟ್ಟಲು, ಜನ್ನ, ಡಾ.ಅಂಬೇಡ್ಕರ್, ಬಾಂದಳ, ಬಾಸಿಂಗ ಮುಂತಾದವು.

ಗೌರವ, ಪ್ರಶಸ್ತಿ -ಪುರಸ್ಕಾರಗಳು
೧೯೯೭ ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ
೧೯೮೫ ರಲ್ಲಿ ರಜ್ಯ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ
೧೯೯೯ ರಲ್ಲಿ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ,
೧೯೯೬ ರಲ್ಲಿ ಸಾವಿತ್ರಮ್ಮ ದೇಜಗೌ ಪ್ರಶಸ್ತಿ,
೨೦೦೩ ರಲ್ಲಿ ಡಾ|| ಅನುಪಮಾ ಪ್ರಶಸ್ತಿ,
೧೯೯೦ ರಲ್ಲಿ ಬಾಬಾ ಆಮ್ಟೆ, ರಾಷ್ಟ್ರೀಯ ಪ್ರಶಸ್ತಿ,
೨೦೦೩ ರಲ್ಲಿ ಮೂಡಬಿದರೆಯಲ್ಲಿ ಜರುಗಿದ ೭೧ನೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.



ಕಯ್ಯಾರ್ ಕಿಞ್ಞಣ್ಣರೈ

ಕಯ್ಯಾರ ಕಿಞ್ಞಣ್ಣ ರೈ ಅವರು ೧೯೧೫ ರ ಸೆಪ್ಟೆಂಬರ್ ೮ ರಂದು ಈಗಿನ ಕೇರಳ ರಾಜ್ಯದಲ್ಲಿರುವ ಕಾಸರಗೋಡು ಜಿಲ್ಲೆಯ ಪೆರಡಾಲದಲ್ಲಿ ಜನಿಸಿದರು. ತಂದೆ ದುಗ್ಗಪ್ಪ ರೈ, ತಾಯಿ ಕಯ್ಯಾರ ದೈಯ್ಯಕ್ಕ, 'ದುರ್ಗಾದಾಸ' ಇವರ ಕಾವ್ಯನಾಮ ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢಶಾಲಾ ಶಿಕ್ಷಣವು ಪೆರಡಾಲದಲ್ಲಿ ನಡೆಯಿತು. ಇವರಿಗೆ ಇಂಗ್ಲಿಷ್ ಶಿಕ್ಷಣ ಪಡೆಯಬೇಕೆಂಬ ಆಸೆ ಇತ್ತು. ತಂದೆ ತೀರಿಕೊಂಡಿದ್ದರಿಂದ ಅದಕ್ಕೆ ಅಡಚಣೆಯುಂಟಾಯಿತು. ಸಂಸ್ಕೃತ ವಿದ್ಯಾಲಯವನ್ನು ಸೇರಿ ಸಂಸ್ಕೃತ ಮತ್ತು ಕನ್ನಡಗಳನ್ನು ಚೆನ್ನಾಗಿ ಅಭ್ಯಸಿಸಿದರು. ಅದರಲ್ಲಿ ವಿಧ್ವಾನ್ ಪದವಿಗಳಿಸಿದರು. ಪತ್ರಿಕೋದ್ಯಮದ ಕಡೆಗೆ ಆಕರ್ಷಿತರಾಗಿ ಮಂಗಳೂರಿನ 'ಸ್ವದೇಶಾಭಿಮಾನಿ' ಪತ್ರಿಕೆಗೆ ದುಡಿದರು. ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಪಡೆದುಕೊಂಡು ಅಧ್ಯಾಪಕ ತರಬೇತಿಯನ್ನು ಪಡೆದುಕೊಂಡರು.



ಎಂ.ಎಂ. ಕಲಬುರ್ಗಿ

ಎಂ.ಎಂ. ಕಲಬುರ್ಗಿಯವರು ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಗುಬ್ಬೇವಾಡದಲ್ಲಿ ೧೯೩೮ರ ನವೆಂಬರ್ ೨೮ ರಂದು ಜನಿಸಿದರು. ತಂದೆ ಕಲಬುರ್ಗಿ ಮಡಿವಾಳಪ್ಪ ಸಂಗಪ್ಪ, ತಾಯಿ ಕಲಬುರ್ಗಿ ಗುರಮ್ಮ ಮಡಿವಾಳಪ್ಪ. ಇವರು ಬಿಜಾಪುರದ ವಿಜಯಾ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದುಕೊಂಡರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಹಾಗೂ ೧೯೭೦ ರಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಮಹಾಪ್ರಂಧಕ್ಕೆ ಪಿ.ಎಚ್.ಡಿ. ಪದವಿ ಪಡೆದುಕೊಂಡರು. ಇವರು ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕರಾಗಿ ೧೯೬೨ರಲ್ಲಿ ವೃತ್ತಿಜೀವನ ಆರಂಭಿಸಿದರು. ೧೯೬೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ.



ಕೆ.ಜಿ. ಕುಂದಣಗಾರ

ಕೆ.ಜಿ.ಕುಂದಣಗಾರ ಅವರು ಬೆಲಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಕೌಜಲಗಿಯಲ್ಲಿ ೧೮೯೨ ರ ಆಗಸ್ಟ್ ೧೪ರಂದು ಜನಿಸಿದರು. ತಂದೆ ಗಿರಿಯಪ್ಪ ಇವರ ಪೂರ್ಣ ಹೆಸರು ಕಲ್ಲಪ್ಪ ಕಾರಿಯಪ್ಪ ಕುಂದಣಗಾರ 'ಕೇಶವ' ಇವರ ಕಾವ್ಯನಾಮ. ಇವರದು ಅಕ್ಕಸಾಲಿಗ ಬಡ ಕುಟುಂಬವಾಗಿತ್ತು. ಆರಂಭಿಕ ಶಿಕ್ಷಣವನ್ನು ಇವರು ಕೌಜಲಗಿಯಲ್ಲಿ ಮುಗಿಸಿ, ಪ್ರೌಢಶಿಕ್ಷಣಕ್ಕಾಗಿ ಬೆಳಗಾವಿಗೆ ಹೋದರು. ತದನಂತರ ಧಾರವಾಡದ ವಿಕ್ಟೋರಿಯಾ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಿ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ೧೯೧೯ರಲ್ಲಿ ಬಿ.ಎ. ಪದವಿ ಪಡೆದ ಗೋಕಾಕದ ವಿ.ವಿ. ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ತಮ್ಮ ಆರಂಭಿಕ ವೃತ್ತಿಜೀವನವನ್ನು ಆರಂಭಿಸಿದರು. ಇವರು

ತರಬೇತಿ ಮುಗಿದ ನಂತರ ಪೆರಡಾಲದ ನವಜೀವನ ಪ್ರೌಢಶಾಲೆಯಲ್ಲಿ ಅಧ್ಯಾಪಕರಾದರು. ಕರ್ನಾಟಕದ ಹೊರಗಿದ್ದು ಕನ್ನಡಕ್ಕಾಗಿ ದುಡಿಯುತ್ತಿರುವವರಲ್ಲಿ ರೈ ಅವರು ಪ್ರಮುಖರು. ಸಾಹಿತ್ಯ ಕ್ಷೇತ್ರಕ್ಕೆ ಇವರ ಕಾಣಿಕೆ ಮಹತ್ವ ಪೂರ್ಣವಾದುದ್ದು. ದೇಶಕ್ಕಾಗಿ ಮತ್ತು ನಾಡಿಗಾಗಿ ಹೋರಾಡಿದ, ಹೋರಾಡುತ್ತಿರುವ ನಿಷ್ಠಾವಂತ ಸಾಹಿತಿ. ಇವರು ಗಾಂಧೀಜಿಯವರ ಕಟ್ಟಾ ಅಭಿಮಾನಿಗಳು. ಇವರು ಸಾಹಿತಿಯಷ್ಟೇ ಅಲ್ಲ ವಿಮರ್ಶಕರು ಹೌದು. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಕಯ್ಯಾರ ಕಿಞ್ಞಣ್ಣರೈ ಮಹತ್ವದ ಪಾತ್ರವಹಿಸಿದ್ದರು. ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿಯ ಕಾರ್ಯದರ್ಶಿಯಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ.

ಕೃತಿಗಳು.
ರಾಷ್ಟ್ರಕವಿ ಗೋವಿಂದ ಪೈ, ಕವಿ ಗೋವಿಂದ ಪೈ ಸ್ಮೃತಿ-ಕೃತಿ, ವ್ಯಾಕರಣ ಮತ್ತು ಪ್ರಬಂಧ, ಸಾಹಿತ್ಯ ದೃಷ್ಟಿ ಮಲಯಾಳಂ ಸಾಹಿತ್ಯ ಚರಿತ್ರಂ, ಮಹಾಕವಿ ಗೋವಿಂದ ಪೈ, ಸಂಸ್ಕೃತಿಯ ಹೆಗ್ಗುರುತು ಶ್ರೀಮುಖ, ಐಕ್ಯಗಾನ, ಪುನರ್ನವ, ಚೇತನ, ಮಕ್ಕಳ ಪದ್ಯಮಂಜರಿ, ವಿರಾಗಿಣಿ, ಅನ್ನದೇವರು, ರತ್ನರಾಶಿ, ಪರಶುರಮ, ಶತಮಾನದಗಾನ, ಪಂಚಮೀ, ಕೊರಗ ಮತ್ತು ಕೆಲವು ಕವನಗಳು, ಪ್ರತಿಭಾಪಯಸ್ವಿನಿ, ಎನಪ್ಪೆ ತುಳುವಪ್ಪೆ, ಗಂಧವತಿ, ದುಡಿತವೇ ನನ್ನ ದೇವರು, ಲಕ್ಷ್ಮೀಶನ ಕಥೆಗಳು, ನಾರಾಯಣ ಕಿಲ್ಲೆ, ಎ.ಬಿ.ಶೆಟ್ಟಿ ಕಾರ್ನಾಡ್ ಸದಾಶಿವರಾವ್ ಮುಂತಾದವು.

ಗೌರವ, ಪ್ರಶಸ್ತಿ ಪುರಸ್ಕಾರಗಳು,
೧೯೬೯ ರಲ್ಲಿ ಕೇಂದ್ರ ಸರ್ಕಾರದಿಂದ ಆದರ್ಶ ಶಿಕ್ಷಕ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ. ಸ್ವಾತಂತ್ರ್ಯ ಯೋಧ ಪ್ರಶಸ್ತಿ ಲಭಿಸಿದೆ.
೧೯೮೫ ರಾಜ್ಯೋತ್ಸವ ಪ್ರಶಸ್ತಿ
೧೯೮೯ ಅಖಿಲ ಭಾರತ ತುಳು ಸಮ್ಮೇಳನದ ಸನ್ಮಾನ ಪ್ರಶಸ್ತಿ
೧೯೯೭ ರಲ್ಲಿ ಮಂಗಳೂರಿನಲ್ಲಿ ಜರುಗಿದ ೬೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ ಗೌರವಿಸಿತ್ತು.

ಪದವಿ ಹಾಗೂ ೧೯೭೦ ರಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಮಹಾಪ್ರಂಥಕ್ಕೆ ಪಿಎಚ್‌ಡಿ ಪದವಿ ಪಡೆದುಕೊಂಡರು. ಇವರು ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕರಾಗಿ ೧೯೬೨ರಲ್ಲಿ ವೃತ್ತಿಜೀವನ ಆರಂಭಿಸಿದರು. ೧೯೬೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠವನ್ನು ಸೇರಿ, ಇಲ್ಲಿಯೇ ಪ್ರಾಧ್ಯಾಪಕರಾಗಿ, ಅಧ್ಯಾಪಕರಾಗಿ ೩೨ ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದರು. ಈ ವಿಷಯಗಳಿಗೆ ಸಂಬಂಧಿಸಿದಂತೆ. ೪೬ ಕ್ಕೂ ಹೆಚ್ಚು ಗ್ರಂಥಗಳನ್ನು ೨೦೦ಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ಇವರ ಸಂಪಾದಕತ್ವದಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ.

ಕೃತಿಗಳು
ಶಾಸನ ಸಂಪದ, ಕನ್ನಡ ಸಂಶೋಧನಾ ಶಾಸ್ತ್ರ, ಶಾಸನಸೂಚಿ, ವಿಜಾಪುರ ಜಿಲ್ಲೆಯ ಶಾಸನ ಸೂಚಿ, ಧಾರವಾಡ ಜಿಲ್ಲೆಯ ಶಾಸನಗಳು, ಶಾಸನ ಸೂಕ್ತಿ ಸುಧಾರ್ಣವ, ಬಸವಣ್ಣನವರನ್ನು ಕುರಿತ ಶಾಸನಗಳು, ಶಾಸನಗಳಲ್ಲಿ ಶಿವಶರಣರು, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಬಸವಣ್ಣನವರ ಟೀಕಿನ ವಚನಗಳು, ಕೊಂಡಗುಳಿ ಕೇಶಿರಾಜನ ಕೃತಿಗಳು, ಅಧ್ಯಯನ ಲಘುಕೃತಿಗಳು, ಮುಂತಾದವರು.

ಗೌರವ, ಪ್ರಶಸ್ತಿ-ಪುರಸ್ಕಾರಗಳು
ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ ಕೃತಿಗೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್
'ಶಾಸನಗಳಲ್ಲಿ ಶಿವಶರಣರು' ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ;
೧೯೯೦ ರಲ್ಲಿ ದೇಜಗೌ ಟ್ರಸ್ಟಿನ ವಿಶ್ವಮಾನವ ಪ್ರಶಸ್ತಿ
೧೯೯೧ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ
೧೯೯೬ರಲ್ಲಿ ಪಂಪ ಪ್ರಶಸ್ತಿ
೧೯೯೭ ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯಿಂದ 'ಜಾನಪದ ತಜ್ಞ' ಪ್ರಶಸ್ತಿ
ಶ್ರೀ ಜಯ ಚಾಮರಾಜ ಒಡೆಯರ ಪಾರಿತೋಷಕವನ್ನು ಪಡೆದಿದ್ದಾರೆ.
ಮಾರ್ಗ -೪ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ.

ಸ್ನಾತಕೋತ್ತರ ಪದವಿ ಪಡೆಯಲು ಹಳಗನ್ನಡ ಕಾವ್ಯಗಳ ವ್ಯಾಸಂಗ ಹಾಗೂ ಸಂಸ್ಕೃತ ಭಾಷೆಯ ಅಧ್ಯಯನಕ್ಕೂ ತೊಡಗಿದರು. ಕೊಲ್ಹಾಪುರ, ಗೋಕಾಕದ ಫ್ರೌಢಶಾಲೆಗಳಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಅನಂತರ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಹಾಗೂ ಕೊಲ್ಹಾಪುರದ ರಾಜಾರಾಮ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ೧೯೪೮ ರಲ್ಲಿ ನಿವೃತ್ತರಾದರು ಬೆಳಗಾವಿಯ ರಾಣಿ ಪಾರ್ವತಿದೇವಿ ಕಾಲೇಜಿನಲ್ಲಿಯೂ ಪ್ರಾಧ್ಯಾಪಕರಾಗಿದ್ದರು.
ಕೊಲ್ಹಾಪುರದಲ್ಲಿ ಕನ್ನಡದ ಬೆನ್ನೆಲುಬಾಗಿದ್ದ ಕುಂದಣಗಾರರು ಮುಂಬೈಯಲ್ಲಿ ಸೇರಿದ ಪ್ರಾಚ್ಯ ಮಹಾಸಭೆಯ ಕನ್ನಡ ವಿಭಾಗದ ಅಧ್ಯಕ್ಷರು ಇವರಾಗಿದ್ದರು. ಇವರು ಪತ್ರಿಕೋದ್ಯಮದಲ್ಲಿ ಹೆಸರು ಮಾಡಿದವರು. ಧಾರವಾಡದ 'ವಾಗ್ಭೂಷಣ' ಪತ್ರಿಕೆಯಲ್ಲಿ ಹಲವು ಕಾಲ ಕಾರ್ಯ ನಿರ್ವಹಿಸಿದರು. ಹಾಗೂ ಬೆಳಗಾವಿಯ ಜಿನವಿಜಯ ಪತ್ರಿಕೆಗಳಿಗೆ ಕೆಲವು ಕಾಲ ಸಂಪಾದಕರಾಗಿದ್ದರು. ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಅಭಿವೃದ್ಧಿಗಾಗಿ ಶ್ರಮಿಸಿದ ವಿದ್ವಾಂಸರು ಇವರು ಮೈಸೂರು ವಿಶ್ವವಿದ್ಯಾಲಯದ ಇಂಗ್ಲೀಷ್ ಕನ್ನಡ ನಿಘಂಟು ಹಾಗೂ ಕನ್ನಡ ನಿಘಂಟಿನ ಸಂಪಾದಕ ಮಂಡಳಿಯ ಸದಸ್ಯರಾಗಿ ಇವರು ಕಾರ್ಯ ನಿರ್ವಹಿಸಿದರು. ಇವರಿಗೆ ಕನ್ನಡ, ಇಂಗ್ಲೀಷ್, ಮರಾಠಿ ಪಾಲಿ, ಅರ್ಧಮಾಗದಿ ಭಾಷೆಗಳಲ್ಲೂ ಒಳ್ಳೆಯ ಪರಿಶ್ರಮವಿತ್ತು. ಇವರು ೧೯೬೫ ರ ಆಗಸ್ಟ್ ೨೨ ರಂದು ನಿಧನರಾದರು.

ಕೃತಿಗಳು.
ಸರಸ್ವತಿ, ಲೀಲಾವತಿ ಪ್ರಬಂದ, ಪೂರ್ವಪುರಾಣ, ಆದಿಪುರಾಣ, ಕುಮುದೇಂದು ರಾಮಾಯಣ, ಹರಿಹರದೇವ, ಸಮ್ ನೋಟ್ಸ್ ಆನ್ ಶ್ರೀಮಹಾಲಕ್ಷ್ಮೀ ಟೆಂಪಲ್ (ಇಂಗ್ಲೀಷ್) ಇನ್ಸ್‌ಕ್ರಿಪ್ಷನ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ಕೊಲ್ಹಾಪುರ ಸ್ಟೇಟ್, ಮಹದೇವಿಯಕ್ಕ, ಹರಿಹರ ದೇವಪ್ರಶಸ್ತಿ ಮುಂತಾದವು.
ಗೌರವ, ಪ್ರಶಸ್ತಿ-ಪುರಸ್ಕಾರಗಳು
೧೯೬೧ ರಲ್ಲಿ ಗದಗದಲ್ಲಿ ಜರುಗಿದ ೪೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.
೧೯೬೧ರಲ್ಲಿ ಅಬಿಮಾನಿಗಳು 'ಕುಂದಣ' ಎಮಬ ಅಬಿನಂದನಾ ಗ್ರಂಥವನ್ನು ಅರ್ಪಿಸಿದ್ದಾರೆ.

ಮುಂದಿನಪುಟಕ್ಕೆ

# ಕನ್ನಡ ಕವಿಗಳ ಮಾಹಿತಿ

ಮುಂದಿನಪುಟಕ್ಕೆ



**ಟಿ.ಪಿ.ಕೈಲಾಸಂ.**

ಟಿ.ಪಿ.ಕೈಲಾಸಂ ಅವರು ೧೮೮೪ರ ಜುಲೈ ೨೯ ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ತ್ಯಾಗರಾಜ ಪರಮಶಿವ ಅಯ್ಯಂಗಾರ್, ಬೆಂಗಳೂರಿನಲ್ಲಿ ಮುನ್ಸಿಫರಾಗಿ ಜೀವನ ಆರಂಭಿಸಿ ಶ್ರೇಷ್ಠ ನ್ಯಾಯಾಧೀಶರಾಗಿ ನಿವೃತ್ತರಾದರು. ಕೈಲಾಸಂ ಅವರ ಬಾಲ್ಯದ ವಿದ್ಯಾಭ್ಯಾಸ ಬೆಂಗಳೂರು, ಮೈಸೂರು, ಹಾಸನದಲ್ಲಿ ಜರುಗಿತು. ಸರ್.ಪಿ.ಎಸ್.ಶಿವಸ್ವಾಮಿ ಅಯ್ಯರ್ ಅವರ ಹಿಂದೂ ಹೈಸ್ಕೂಲಿನಲ್ಲಿ ಇವರು ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸು ಮಾಡಿದರು. ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದಿ ಭೂವಿಜ್ಞಾನದಲ್ಲಿ ಪ್ರಥಮ ದರ್ಜೆಯಲ್ಲಿ ಬಿ.ಎ. ಪದವಿ ಪಡೆದ ನಂತರ ಎಂ.ಎ. ಎರಡು ವರ್ಷ ವ್ಯಾಸಂಗ ನಡೆಸಿದರು. ಅನಂತರ ಮೈಸೂರು ಸಕಾರದ ಮಾಸಿಕ ವಿದ್ಯಾರ್ಥಿವೇತನ ಪಡೆದು ಲಂಡನ್ನಿನ ರಾಯಲ್ ಕಾಲೇಜ್ ಆಫ್ ಸೈನ್ಸ್ ಸೇರಿ ಶಾಸ್ತ್ರಾಧ್ಯಯನ ಮಾಡಿ ಮೊದಲ ದರ್ಜೆಯ ಪ್ರಶಸ್ತಿ ಗಳಿಸಿದರು. ಅಲ್ಲಿಯೇ ಜಿಯಾಲಜಿಕಲ್ ಸೊಸೈಟಿಗೆ ಬಂದು ನಿಬಂಧ ಬರೆದುಕೊಟ್ಟು ಅಲ್ಲಿಯೇ ಫೆಲೋ ಆದರು. ಆ ಫೆಲೋಷಿಪ್ ಪಡೆದ ಮೊದಲ ಭಾರತೀಯರು ಇವರು. ವಿಜ್ಞಾನ ಹಾಗೂ ಕ್ರೀಡಾಶಾಸ್ತ್ರದಲ್ಲಿ ಪಾಂಡಿತ್ಯ



**ಕುವೆಂಪು**

ಕುವೆಂಪು ಕಾವ್ಯನಾಮದಿಂದ ಖ್ಯಾತರಾದ ಕೆ. ವಿ.ಪುಟ್ಟಪ್ಪನವರು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹಿರಿಕೊಡಿಗೆ (ತನ್ನ ತಾಯಿಯ ಮನೆ)ಯಲ್ಲಿ ೧೯೦೪ ಡಿಸೆಂಬರ್ ೨೯ ರಂದು ಜನಿಸಿದರು. ತಂದೆ ವೆಂಕಟಪ್ಪಗೌಡ, ತಾಯಿ ಸೀತಮ್ಮ. ತೀರ್ಥಹಳ್ಳಿಯಲ್ಲಿ ತಮ್ಮ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಮುಗಿಸಿದ ಪುಟ್ಟಪ್ಪನವರು ೧೯೧೮ರಲ್ಲಿ ಮೈಸೂರಿಗೆ ಬಂದು ವೆಸ್ಲಿಯನ್ ಹೈಸ್ಕೂಲಿಗೆ ಸೇರಿದರು. ಈ ಸಂದರ್ಭದಲ್ಲಿ ಒಳ್ಳೆಯ ದೊಡ್ಡ ಗ್ರಂಥಾಲಯಗಳು ಇವರ ಜ್ಞಾನಾರ್ಜನೆಗೆ ಸಹಾಯಕವಾದವು. ಇವರಿಗೆ ಇಲ್ಲಿಯ ವಾತಾವರಣ ವ್ಯಾಪಕವಾದರಿಂದ ಸಾಹಿತ್ಯಾಸಕ್ತಿ ಬೆಳೆಯುವಂತೆ ಮಾಡಿತು. ವರ್ಡ್ಸ್‌ವರ್ತ್ ಷೆಲ್ಲಿ, ಟಾಲ್‌ಸ್ಟಾಯ್, ಕೃತಿಗಳನ್ನು ಇವರು ಅಭ್ಯಸಿಸಿದರು ಮಿಲ್ಟನ್ ಕವಿಯ 'ಪ್ಯಾರಡೈಸ್ ಲಾಸ್ಟ್' ಕೃತಿಯು ಇವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿತು. ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸ, ಶಂಕರಾಚಾರ್ಯ ಕೃತಿಗಳು ಇವರ ಮೇಲೆ ಪ್ರಭಾವವನ್ನು ಬೀರಿದವು. ಮಹಾತ್ಮ ಗಾಂಧೀಜಿಯವರು ಪ್ರಭಾವಕ್ಕೊಳಗಾಗಿ ಸ್ವದೇಶಿ ವಸ್ತ್ರಗಳನ್ನು ಧರಿಸತೊಡಗಿದರು. ೧೯೨೭ರಲ್ಲಿ ಬಿ.ಎ. ಪದವಿ ಹಾಗೂ ೧೯೨೯ರಲ್ಲಿ ಎಂ.ಎ. ಪದವಿಗಳನ್ನು ಪಡೆದುಕೊಂಡರು. ೧೯೨೮ರಲ್ಲಿ ಇವರು ಸೆಂಟ್ರಲ್ ಕಾಲೇಜಿನಲ್ಲಿ ಜರುಗಿದ ವಿದ್ಯಾರ್ಥಿ ಕವಿ ಸಮ್ಮೇಳನದ ಅಧ್ಯಕ್ಷರಾದರು. ತಾವು ಓದಿದ ಮೈಸೂರು ಮಹಾರಾಜ



**ಕೀರ್ತಿನಾಥ ಕುರ್ತಕೋಟಿ**

ಕೀರ್ತಿನಾಥ ಕುರ್ತಕೋಟಿಯವರು ೧೯೨೮ರ ಅಕ್ಟೋಬರ್ ೧೩ ರಂದು ಗದಗದ ಹತ್ತಿರದ ಕುರ್ತಕೋಟಿಯಲ್ಲಿ ಜನಿಸಿದರು. 'ಕನಸಿಗ' ಇವರ ಕಾವ್ಯನಾಮ ತಂದೆ ಡಿ.ಕೆ. ಕುರ್ತಕೋಟಿ, ತಾಯಿ ಪದ್ಮಾವತಿಬಾಯಿ ಇವರದು ವಿದ್ವತ್ ಪರಂಪರೆಯ ಕುಟುಂಬ. ಇವರು ಗದುಗಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಪಡೆದರು. ಧಾರವಾಡದ ಕೆ.ಇ. ಬೋರ್ಡ್ ಮತ್ತು ಕರ್ನಾಟಕ ಕಾಲೇಜ್‌ನಲ್ಲಿ ಬಿ.ಎ. ಪದವಿ ಮತ್ತು ಎಂ.ಎ. (ಇಂಗ್ಲಿಷ್) ಪದವಿ ಪಡೆದರು. ೧೯೫೦ ರಿಂದ ಮೂರು ವರ್ಷಗಳ ಕಾಲ ಗದಗಿನಲ್ಲಿ ಪ್ರೌಢಶಾಲಾ ಶಿಕ್ಷಕರಾಗಿ ದುಡಿದರು. ೧೯೫೮ ರಿಂದ ಪುಣೆಯ ಪರಶುರಾಮ ಬಾವು ಕಾಲೇಜಿನಲ್ಲಿ ಅಧ್ಯಾಪಕರಾಗಿ, ಅನಂತರ ಗುಜರಾತ್‌ನ ಆನಂದದಲ್ಲಿ, ಸರದಾರ್ ವಲ್ಲಭಬಾಯಿ ಪಟೇಲ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಶೈಕ್ಷಣಿಕ ಸೇವೆ ಸಲ್ಲಿಸಿ ನಿವೃತ್ತರಾದರು. ಧಾರವಾಡದ ಸಾಹಿತ್ಯಿಕ ಪರಿಸರ ಇವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದೆ. ದ.ರಾ.ಬೇಂದ್ರೆ, ಗೋಕಾಕ, ಆನಂದಕಂದ, ರಂ.ಶ್ರೀ. ಮುಗುಳಿ ಮೊದಲಾದ ಗಣ್ಯರ ಸಹವಾಸ ದೊರೆತು

ಸಂಪಾದಿಸಿದ್ದರಲ್ಲದೆ ನಾಟಕಾಭಿನಯ ಶಾಸ್ತ್ರದಲ್ಲೂ ಪಾರಂಗತರಾಗಿದ್ದರು.
ಮೈಸೂರಿನ ಭೂಗರ್ಭ ಶಾಲೆಯಲ್ಲಿ ಪ್ರೊಬೇಷನರಿ ನೌಕರಿ ಹಿಡಿದರು. ಕೋಲಾರ, ಹಾಸನ, ಶಿವಮೊಗ್ಗ, ಭದ್ರಾವತಿ, ಲಕ್ಕವಳ್ಳಿ, ತರೀಕೇರಿ, ಎಡೇಹಳ್ಳಿಗಳಲ್ಲಿ ಕಾರ್ಯನಿರ್ವಹಿಸಿದರು.
ಕನ್ನಡದ ಆಡುಭಾಷೆಯನ್ನು ಬಳಸಿ ನಾಟಕ ರಚಿಸಿದವರಲ್ಲಿ ಕೈಲಾಸಂ ಅಗ್ರಗಣ್ಯರು. ಪಾಶ್ಚಿಮಾತ್ಯ ನಾಟಕಗಳ ನೂತನ ಆಯಾಮಗಳನ್ನು ಕನ್ನಡಕ್ಕೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ. ನಾಟಕ ಪ್ರಪಂಚದಲ್ಲಿ ಹೊಸ ಹಾದಿ ಹಾಕಿಕೊಟ್ಟ ಹಿರಿತನ ಕೈಲಾಸಂ ಅವರದು. ೧೯೪೬ರಲ್ಲಿ ಬೆಂಗಳೂರಿನಲ್ಲಿ ನಿಧನ ಹೊಂದಿದರು.

ಕೃತಿಗಳು
ಹೋಂರೂಲು, ಬಹಿಷ್ಕಾರ, ನಮ್ ಕಂಪ್ನಿ, ಟೊಳ್ಳುಗಟ್ಟಿ, ಪೋಲಿ ಕಿಟ್ಟಿ, ಸೂಳೆ, ತಾಳಿಕಟ್ಟೊ ಕೂಲಿನೇ, ಸತ್ತವನ ಸಂತಪ, ನಮ್ ಬ್ರಾಹ್ಮಣ್ಕೆ, ಅಮ್ಮಾವ್ರ ಗಂಡ, ಅನುಕೂಲಕ್ಕೊಬ್ಬಣ್ಣ, ಸೀಕರ್ಣಿ ಸಾವಿತ್ರಿ, ತಾವರಕೆರೆ, ವೈದ್ಯನ ವ್ಯಾಧಿ, ಗಂಡಸ್ಕತ್ರಿ, ನಮ್ಕ್ಳಬ್ಬು, ಬಂಡ್ವಾಳಿಲ್ಲದ ಬಡಾಯಿ, ದಿ ಫುಲ್ ಫಿಲ್ಮೆಂಟ್, ದಿಪರ್ಪಸ್ ಏಕಲವ್ಯ, ದಿಕರ್ಸ್ ದಿಬರ್ಡನ್ ಮುಂತಾದವು.
ಕೈಲಾಸಂ ಬದುಕು ಬರಹ ಹಾಗೂ ಕೈಲಾಸಂ ದರ್ಶನ ಇವರ ಅಭಿನಂದನಾ ಗ್ರಂಥಗಳು.

ಗೌರವ, ಪ್ರಶಸ್ತಿ-ಪುರಸ್ಕಾರಗಳು
೧೯೪೫ ರಲ್ಲಿ ಮದ್ರಾಸ್ (ಈಗಿನ ಚೆನ್ನೈ) ನಲ್ಲಿ ನಡೆದ ೨೯ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಇವರಿಗೆ ವಹಿಸಿ ಗೌರವ ಸಲ್ಲಿಸಿತು.

ಕಾಲೇಜಿನಲ್ಲಿ ೧೯೨೯ ರಿಂದ ಕನ್ನಡ ಅಧ್ಯಾಪಕ ವೃತ್ತಿ ಆರಂಭಿಸಿದರು.
ಉಪಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಸಹಸ್ರಾರು ವಿದ್ಯಾರ್ಥಿಗಳ ಜ್ಞಾನದಾಹವನ್ನು ತಣಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ ೧೯೫೫ ರಲ್ಲಿ ಇಲ್ಲಿಯೇ ಪ್ರಾಂಶುಪಾಲರಾದರು.
ತದನಂತರ ೧೯೫೬ ರಿಂದ ೧೯೬೦ ರವರೆಗೆ ಮೈಸುರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಕಾರ್ಯ ನಿರ್ವಹಿಸಿದರು.
ಕುವೆಂಪುರವರ ಸಾಹಿತ್ಯ ಕ್ಷೇತ್ರವು ವಿಶಾಲವಾದದ್ದು, ಕಾವ್ಯ ಕಥೆ, ಕಾದಂಬರಿ, ನಾಟಕ, ಮಕ್ಕಳ ಸಾಹಿತ್ಯ, ಜೀವನ ಚರಿತ್ರೆ, ಮಹಾಕಾವ್ಯ ಮೊದಲಾದ ಕ್ಷೇತ್ರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇವರು ಕುಲಪತಿಗಳಾಗಿದ್ದಾಗ ಹುಟ್ಟುಹಾಕಿದ ಮಾನಸ ಗಂಗೋತ್ರಿಯನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವಲ್ಲಿ ಯಶಸ್ವಿಯಾದರು.
ಕುವೆಂಪುರವರು ನಾಡುನುಡಿಗಳ ಅಭಿವೃದ್ಧಿಗಾಗಿ ಹಾಗೂ ಕರ್ನಾಟಕ ಏಕೀಕರಣಕ್ಕಾಗಿ ಬಹುವಾಗಿ ಶ್ರಮಿಸಿದರು.
ಇವರು ೧೯೩೭ರಲ್ಲಿ ಹೇಮಾವತಮ್ಮ ಎಂಬುವರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ಇವರಿಗೆ ನಾಲ್ಕು ಜನ ಮಕ್ಕಳು. ಪ್ರಸಿದ್ಧ ಸಾಹಿತಿ ಪೂರ್ಣಚಂದ್ರ ತೇಜಸ್ವಿ ಇವರ ಮಗ, ಮತ್ತೊಬ್ಬರು ಕುಕಿಲೋದಯ ಚಂದ್ರ, ಇಂದುಕಲಾ, ತಾರಿಣಿ, ಇವರ ಇಬ್ಬರು ಹೆಣ್ಣು ಮಕ್ಕಳು.
ಪೂರ್ಣಚಂದ್ರ ತೇಜಸ್ವಿ ಇವರ ಪೂರ್ಣ ಹೆಸರು. ಶಿವಮೊಗ್ಗ ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮಾಡಿದ ಇವರು ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಬಿ.ಎ. (ಅನರ್ಸ) ಹಾಘೂ ಎಂ.ಎ. ಪದವಿಗಳನ್ನು ಪಡೆದರು. ೧೯೬೬ ನವೆಂಬರ್ ೨೭ ರಂದು ರಾಜೇಶ್ವರಿ ಎಂಬುವರೊಡನೆ ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ತೇಜಸ್ವಿಯವರು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ ನೆಲೆಸಿದ್ದರು. ಇವರು ಕೃಷಿಯ ಜೊತೆಗೆ ಸಾಹಿತ್ಯ ಕೃಷಿಯನ್ನು ನಡೆಸಿಕೊಂಡು ಬಂದಿದ್ದರು. ಕುವೆಂಪುರವರ ಕಲಾತ್ಮಕ ಗುಣವೊಂದನ್ನು ಹೊರತುಪಡಿಸಿ ಇನ್ನಾವುದರ ಪ್ರಭಾವಕ್ಕೊಳಗಾಗದೆ ತಮ್ಮ ಸ್ವಂತಿಕೆಯನ್ನು ಸ್ಥಾಪಿಸಿಕೊಂಡರು. ಕೃಷಿ, ಸಾಹಿತ್ಯದ ಜೊತೆಗೆ ಫೋಟೋಗ್ರಫಿ, ಹಕ್ಕಿಗಳ ಚಿತ್ರಗ್ರಹಣ ಇವರ ವಿಶೇಷತೆ. ಇವರ ಕೆಲವು ಕೃತಿಗಳು ಚಲನಚಿತ್ರಗಳಾಗಿ ಜನಪ್ರಿಯವಾಗಿವೆ. ಅಬಚೂರಿನ ಪೋಸ್ಟಾಪೀಸು, ತಬರನ ಕತೆ, ಕುಬಿ ಮತ್ತು ಇಯಾಲ ಇವು ಪ್ರಶಸ್ತಿ ಪಡೆದ ಚಲನಚಿತ್ರಗಳಾಗಿವೆ. ಗಿರೀಶ್ ಕಾಸರವಳ್ಳಿ ನಿರ್ದೇಶಿಸಿದ ತಬರನ ಕತೆ ಚಿತ್ರಕ್ಕೆ ಸ್ವರ್ಣಕಮಲ ರಾಷ್ಟ್ರಪ್ರಶಸ್ತಿ ದೊರೆತಿದೆ. ವಿಶಿಷ್ಟ ಚಿಂತನೆ ಹಾಗೂ ಹಾಸ್ಯ ಪ್ರಜ್ಞೆಯ ಬರಹಗಳಿಂದ ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ್ದಾರೆ. ಚುರುಕಾದ ಕಥನ ಶೈಲಿ, ವೈಚಾರಿಕತೆ ಇವರ ಬರಹದ ಇನ್ನೊಂದು ಗುಣ. ವಿಜ್ಞಾನ ಸಾಹಿತ್ಯದ ಬಗ್ಗೆ ಕೆಲವು ಕೃತಿಗಳನ್ನು ರಚಿಸಿದ್ದಾರೆ. ಇವರ ಛಾಯಚಿತ್ರ ಸಂಪುಟದ ಶುಭಾಶಯ

ಪ್ರಭಾವ ಬೀರಿ ಸಾಹಿತ್ಯ ಪ್ರೇರಣೆ ಮೂಡಿಸಿತು. ಜೊತೆಗೆ ಸಾದುಸಂತರ, ಶರಣರ ಪ್ರಭಾವ ಇವರ ಮೇಲಾಯಿತು. ಹುಟ್ಟೂರಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಹೆಚ್ಚಿನ ಶಿಕ್ಷಣಕ್ಕಾಗಿ ಕೊಪ್ಪಳಕ್ಕೆ ಬಂದಾಗ ಸ್ವಾತಂತ್ರ್ಯ ಚಳುವಳಿಯ ಕಾವು ಇವರನ್ನು ಬಿಸಿಯಾಗಿಸಿತು. ಹೈದರಾಬಾದ್ ನಿಜಾಮರು ಸ್ವತಂತ್ರ ಭಾರತದಲ್ಲಿ ವಿಲೀನಗೊಳ್ಳದೆ ಇದ್ದಾಗ ರಜಾಕರ ಹಾವಳಿಯನ್ನು ಹತ್ತಿಕ್ಕಿ ದಿಟ್ಟತನದಿಂದ ಹೋರಾಡಿ ಕೊಪ್ಪಳ ಕೋಟೆಯ ಮೇಲೆ ಭಾರತದ ಧ್ವಜನವನ್ನು ಹಾರಿಸಿದವರು. ಧಾರವಾಡದಲ್ಲಿ ವಿದ್ಯಾಭ್ಯಾಸ ಮಾಡಿ ಎಂ.ಎ. ಪದವಿ ಪಡೆದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಮೂವತ್ತೊಂದು ವರ್ಷ ಕಾಲ ಸೇವೆ ಸಲ್ಲಿಸಿ ನಿವೃತ್ತಿಯಾದರು. ಕನ್ನಡ ಹಿಂದಿ, ಉರ್ದು ಹಾಗೂ ಇನ್ನಿತರ ಭಾಷೆಗಳ ಮೇಲೆ ಪ್ರಭುತ್ವ ಹೊಂದಿದ್ದ ಇವರು ಬೇರೆ ಬೇರೆ ಭಾಷೆಯ ಕೃತಿಗಳನ್ನು ಅನುವಾದಿಸಿದರು. ಕಥೆ, ಕವನ, ಕಾದಂಬರಿ, ನಾಟಕ ಜೀವನ ಚರಿತ್ರೆ, ಸಂಪಾದನೆ, ಭಾಷಾಂತರ, ವಿಮರ್ಶೆಗಳಲ್ಲಿ ಸಾಹಿತ್ಯ, ಕೃತಿ ರಚಿಸಿ ಕನ್ನಡ ಸಾಹಿತ್ಯ ದೇವಿಗೆ ಅರ್ಪಿಸಿದ್ದಾರೆ.

ಕೃತಿಗಳು;
ಕವನ ಸಂಕಲನಗಳು: ಚೈತಾಕ್ಷಿ, ಬಯಲ ಬಾನಿನಲ್ಲಿ, ಗಾಳಿಗಂಧ, ಆಶೆ ತುಂಬಿದ ಉಸಿರುಗಳು, ಮಿತ್ರ ದೇಶದ ಕವಿತೆಗಳು, ಇಂದ್ರ ಧನಸ್ಸು ಬೆಳಕಿನ ಹೆಪ್ಪು ಹಾಕುವ ತವಕ.
ಕತೆಗಳು; ಕಾಶ್ಮೀರದ ಹೂ, ಗುಲಾಬಿ ಹೂ, ಎನ್ನಾಲೇಖ
ಕಾದಂಬರಿಗಳು: ಮಾಘ ಚೆಲ್ಲಿದ ಬೆಳಕು, ನಾರಿ, ಕತ್ತಲೆಯೊಂದಿಗೆ,
ಕವಿ ಕಾವ್ಯ ದರ್ಶನ, ಕವಿ ಕಾವ್ಯ ಕಲ್ಪನೆ, ಕವಿ ಕಾವ್ಯ ಚಿಂತನೆ, ಕಚಿ ರವೀಂದ್ರರು, ಹದಿನಾರು,

ಜರ್ಮನಿ, ಬ್ರಿಟನ್, ರಷ್ಯಾಗಳಿಗೆ ಭೇಟಿ ನೀಡಿದ್ದಾರೆ. ಆರಂಭದಿಂದ ಕನ್ನಡಪರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಬಂದಿದ್ದ ಇವರು ಗೋಕಾಕ್ ವರದಿ ಜಾರಿಗೊಳಿಸಲು ರಾಜ್ಯವ್ಯಾಪಿ ಆಂದೋಲನ ನಡೆದಾಗ ಅದರ ನೇತೃತ್ವವಹಿಸಿದ್ದರು. ಕರ್ನಾಟಕ ಸರ್ಕಾರ ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ರಚಿಸಿ ಇವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿತು. ಇಷ್ಟೇ ಅಲ್ಲದೆ ಇವರ ಸಾಹಿತ್ಯ ಸೇವೆಯು ವಿಪುಲವಾದುದು.

ಗೌರವ, ಪ್ರಶಸ್ತಿ- ಪುರಸ್ಕಾರಗಳು

೧೯೭೬ ರಲ್ಲಿ ರಾಜ್ಯ ಪ್ರಶಸ್ತಿ;

೧೯೯೦ ರಲ್ಲಿ ವಿಶ್ವೇಶ್ವರಯ್ಯ ಭಾರತ ಜ್ಯೋತಿ ಪ್ರಶಸ್ತಿ;

೧೯೯೩ರಲ್ಲಿ ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ

೧೯೯೪ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಿ.ಲಿಟ್ ಪದವಿ ಹಾಗೂ ಕರ್ನಾಟಕ ಸರ್ಕಾರದ ಪ್ರತಿಷ್ಟಿತ ಟಿ.ಎಸ್. ರಾವ್ ಪ್ರಶಸ್ತಿ.

೧೯೯೬ ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವ ಪ್ರಶಸ್ತಿ;

೨೦೦೧ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ;

೨೦೦೩ ರಲ್ಲಿ ಬೆಳಗಾವಿಯಲ್ಲಿ ಜರುಗಿದ ಅಖಿಲ ಭಾರತ ೭೦ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ಪತ್ರಗಳನ್ನು ಕೂಡಾ ಪ್ರಕಟಿಸಿದ್ದಾರೆ. ಇವರಿಗೆ ಇಬ್ಬರು ಹೆಣ್ಣು ಮಕ್ಕಳು. ಸುಶ್ಮಿತಾ ಮತ್ತು ಈಶಾನ್ಯ ಇವರು ೨೦೦೭ರ ಏಪ್ರಿಲ್ ೫ ರಂದು ಮೂಡಿಗೆರೆಯಲ್ಲಿ ನಿಧನರಾದರು.

ಕೃತಿಗಳು

ಪ್ಲೈಯಿಂಗ್ ಸಾಸರ್ಸ್ ಭಾಗ-೧ ಮತ್ತು ೨ ವಿಸ್ಮಯ ಭಾಗ ೧,೨,೩ ಪರಿಸರದ ಕತೆ, ಸಹಜ ಕೃಷಿ, ಮಿಸ್ಸಿಂಗ್ ಲಿಂಕ್, ನಿಗೂಢ ಮನುಷ್ಯರು, ಬೃಹನ್ನಳೆ, ಯಮಳ ಪ್ರಶ್ನೆ, ನಡೆಯುವ ಕಡ್ಡಿ, ಹಾರುವ ಎಲೆ, ಅಣ್ಣನ ನೆನಪು, ಮಿಂಚುಳ್ಳಿ, ಕನ್ನಡ ನಾಡಿನ ಹಕ್ಕಿಗಳು ಭಾಗ-೧ ಹೆಜ್ಜೆ ಮೂಡದ ಹಾದಿ, ಹಕ್ಕಿ ಪುಕ್ಕ, ಕಾಡಿನ ಕತೆಗಳು, ೧,೨,೩,೪ ರುದ್ರ ಪ್ರಯಾಗದ ಭಯಾನಕ ನರಭಕ್ಷಕ, ಚಿದಂಬರ ರಹಸ್ಯ, ಜುಗಾರಿ ಕ್ರಾಸ್, ಕರ್ವಾಲೊ, ಕಿರಗೂರಿನ ಗಯ್ಯಾಳಿಗಳು, ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್, ಮಿಲೆನಿಯಂ (ಭಾಗ ೧ ರಿಂದ ೧೬), ಮಾಯಾಲೋಕ, ಪ್ಯಾಪಿಲಾನ್ ಭಾಗ ೧ ಮತ್ತು ೨ ಅಬಚೂರಿನ ಪೋಸ್ಟಫೀಸು, ಪಾಕ ಕ್ರಾಂತಿ ಮತ್ತು ಇತರ ಕತೆಗಳು, ಹುಲಿಯೂರಿನ ಸರಹದ್ದು, ವ್ಯಕ್ತಿ ವಿಶಿಷ್ಟ ಸಿದ್ಧಾಂತ ಮತ್ತು ಯಮಳ ಪ್ರಶ್ನೆ, ಸೋಮುವಿನ ಸ್ವಗತ ಲಹರಿ ಮತ್ತು ಇತರ ಕವನಗಳು ಮುಂತಾದವು.

ಗೌರವ, ಪ್ರಶಸ್ತಿ- ಪುರಸ್ಕಾರಗಳು

೧೯೮೫ರಲ್ಲಿ 'ಚಿದಂಬರ ರಹಸ್ಯ' ಕೃತಿಗೆ ವರ್ಷದ ಶ್ರೇಷ್ಠ ಕೃತಿ ಪ್ರಶಸ್ತಿ ಲಭಿಸಿದೆ.

೧೯೮೭ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೮೮ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೮೮ ರಲ್ಲಿ ರಾಜ್ಯೋತ್ಸವ ಪ್ರಶಸ್ತಿ

೧೯೮೯ ರಲ್ಲಿ ಭಾರತೀಯ

ಪ್ರಬಂಧಗಳು, ಮಧುರವೀ ಬದುಕು, ಚೆಲುವಿನ ಅಲೆಗಳು ಇಂತಹ ಪ್ರಬಂಧ ಹಾಗೂ ವಿಮರ್ಶೆಗಳನ್ನು ವಿಜಯ ಮಹಾಂತೇಶ, ಶಿವಯೋಗಿ ಇಂತಹ ಜೀವಚರಿತ್ರೆ, ಮುಕ್ತಿ ಕ್ಷೇತ್ರ ಉಳವಿ ಐತಿಹಾಸಿಕ ಕೃತಿ, ಭಾರತ ದರ್ಶನ ಪ್ರವಾಸ ಕೃತಿ, ಚಾಕಲೇಟ್ ಮತ್ತು ಇತರ ಕತೆಗಳು, ನೀತಿ ಕತೆಗಳು, ದರೋಡೆಕಾರನ ಮಗ ಮುಂತಾದ ಮಕ್ಕಳ ಸಾಹಿತ್ಯ, ಗವಿ ದೀಪ್ತಿ, ಶಿವಲಿಂಗ ದೀಪ್ತಿಯಂತಹ ಸಂಪಾದನೆ, ಹತ್ತು ಹಿಂದಿ ಲಘು ನಾಟಕಗಳು, ಪಾಂಚಾಲಿ ಶಪಥ (ನಾಟಕ) ಒಳಗೊಂಡಂತೆ ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅಭಿಮಾನಿಗಳು 'ವಾತ್ಸಲ್ಯ' ಅಭಿನಂದನಾ ಗ್ರಂಥವನ್ನು ಸಮರ್ಪಿಸಿದ್ದಾರೆ.

ಗೌರವ, ಪ್ರಶಸ್ತಿ-ಪುರಸ್ಕಾರಗಳು

ಇವರ ಭಾಷಾ ಪ್ರೌಢಿಮೆ, ಉತ್ತಮ ವ್ಯಕ್ತಿತ್ವ ಹಾಗೂ ಸಾಹಿತ್ಯ ಕೃಷಿಗೆ ಹಲವಾರು ಪ್ರಶಸ್ತಿ - ಪುರಸ್ಕಾರಗಳು ದೊರೆತಿವೆ.

೧೯೮೫ ರಲ್ಲಿ ಅಮೇರಿಕದ ಅರಿಜೋನಾ ವಿಶ್ವವಿದ್ಯಾಲಯದಿಮದ ಡಿ.ಲಿಟ್ ಪದವಿ ಗೌರವ;

೧೯೮೮ರಲಲಿ 'ಮಿತ್ರ ದೇಶದ ಕತೆಗಳು' ಅನುವಾದಿತ ಕವನ ಸಂಕಲನಕ್ಕೆ ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ

ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಕರಂಡಿಕರ ಸಾಹಿತ್ಯ ಪ್ರಶಸ್ತಿ, ಮೂರು ಸಾವಿರ ಮಠ ಸಾಹಿತ್ಯ ಪ್ರಶಸ್ತಿಗಳನ್ನು ನೀಡಿ ಇವರನ್ನು ಗೌರವಿಸಲಾಗಿದೆ.

ಭಾಷಾ ಪರಿಷತ್ತಿನ ಪ್ರಶಸ್ತಿ
೧೯೯೩ ರಾಜ್ಯ ಪರಿಸರ ಪ್ರಶಸ್ತಿ
೨೦೦೧ ಪಂಪ ಪ್ರಶಸ್ತಿ ದೊರೆತಿವೆ.



**ಜೆ.ಎಫ್.ಫ್ಲೀಟ್**
ಜಾನ್ ಫೆಯ್ತ್ ಫುಲ್ ಫ್ಲೀಟ್ ಇವರ ಪೂರ್ಣ ಹೆಸರು. ಇಂಗ್ಲೆಂಡಿನ ಚೆಸ್ವಿಕ್‌ನಲ್ಲಿ ಜನಿಸಿದರು. ಜಾನ್ ಜಾರ್ಜ್‌ಫ್ಲೀಟ್ ಮತ್ತು ಎಸ್ತರ್ ಫೆಯ್ತ್‌ಫುಲ್ ಇವರ ತಂದೆ ತಾಯಿಗಳು. ಲಂಡನ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮುಗಿಸಿದರು. ಇವರು ಸಂಸ್ಕೃತವನ್ನು ಐಚ್ಛಿಕ ಭಾಷೆಯನ್ನಾಗಿ ಅಭ್ಯಾಸ ಮಾಡಿದರು. ೧೮೬೫ರಲ್ಲಿ ಇಂಡಿಯನ್ ಸಿವಿಲ್ ಸರ್ವಿಸ್‌ಗೆ ನೇಮಕಗೊಂಡು ಮುಂಬಯಿ ಸರ್ಕಾರದ ರೆವಿನ್ಯೂ ಇಲಾಖೆಯಲ್ಲಿ ಅಸಿಸ್ಟೆಂಟ್ ಕಲೆಕ್ಟರ್ ಹುದ್ದೆಯನ್ನು ನಿರ್ವಹಿಸಲು ಮೊಟ್ಟಮೊದಲ ೧೮೬೭ರಲ್ಲಿ ಭಾರತಕ್ಕೆ ಬಂದರು. ಕೊಲ್ಲಾಪುರ, ಸೊಲ್ಲಾಪುರ, ಬೆಳಗಾವಿ ಮುಂತಾದ ಸ್ಥಳಗಳಲ್ಲಿ ಕೆಲಸ ಮಾಡಿದರು. ಅಸಿಸ್ಟೆಂಟ್ ಕಲೆಕ್ಟರ್, ವಿದ್ಯಾಧಿಕಾರಿ, ಅಸಿಸ್ಟೆಂಟ್ ಪೊಲಿಟಿಕಲ್ ಏಜೆಂಟ್, ಶಾಸನ ಶಾಸ್ತ್ರಜ್ಞ ಜೂನಿಯರ್ ಕಲೆಕ್ಟರ್, ಸೀನಿಯರ್ ಕಲೆಕ್ಟರ್, ಕಸ್ಟಮ್ಸ್ ಕಮಿಷನರ್ ಮುಂತಾದ ಹುದ್ದೆಗಳನ್ನು ನಿರ್ವಹಿಸಿ ೧೮೯೭ರಲ್ಲಿ ನಿವೃತ್ತರಾದರು. ಜೆ.ಎಫ್. ಫ್ಲೀಟ್ ಇವರು ಸಮರ್ಥ ಆಡಳಿತಾಧಿಕಾರಿಯಾಗಿದ್ದಂತೆಯೇ ಶ್ರೇಷ್ಠ ಸಂಶೋಧಕರೂ ಆಗಿದ್ದರು. ಭಾರತಕ್ಕೆ ಬಂದೊಡನೆ ಇವರು ಮುಂಬಯಿ ಪ್ರಾಂತ್ಯದ ಶಾಸನಗಳ ಸಂಶೋಧನೆಗೆ ತೊಡಗಿದರು. ಪ್ರಾರಂಭದಲ್ಲಿ ಇವರ ಲೇಖನಗಳು ರಾಯಲ್ ಏಷ್ಯಾಟಿಕ್ ಸೊಸೈಟಿಯ ಮುಂಬಯಿ ಶಾಖೆಯ ಪತ್ರಿಕೆಯಲ್ಲಿ ಪ್ರಕಟವಾದವು.



**ಬಸವರಾಜ ಕಟ್ಟೀಮನಿ**
ಪ್ರಗತಿಶೀಲ ಕಾದಂಬರಿಕಾರ ಬಸವರಾಜ ಕಟ್ಟೀಮನಿ ೧೯೧೯ ಅಕ್ಟೋಬರ್ ೫ರಂದು ಬೆಳಗಾವಿ ಜಿಲ್ಲೆಯ ಮಲಾಮರಡಿಯಲ್ಲಿ ಜನಿಸಿದರು. ತಂದೆ ಅಪ್ಪಣ್ಣ, ತಾಯಿ ಬ ಾಳವ್ವ. ತಂದೆ ಸಶಸ್ತ್ರ ಪಡೆಯಲ್ಲಿ ಸಿಪಾಯಿಯಾಗಿದ್ದರು. ಇವರ ಪ್ರಾಥಮಿಕ ಶಿಕ್ಷಣ ಕಿತ್ತೂರಿನಲ್ಲಿ ಜರುಗಿತು. ಮುಂದೆ ಗೋಕಾಕ್, ಬೆಳಗಾವಿಯಲ್ಲಿ ವಿದ್ಯಾಭ್ಯಾಸ ಜರುಗಿತು. ಸಾಹಿತ್ಯ ಮತ್ತು ಪತ್ರಿಕೋದ್ಯಮದಲ್ಲಿ ಕಟ್ಟಿಮನಿಯವರಿಗೆ ಪ್ರಾರಂಭದಿಂದಲೂ ಆಸಕ್ತಿಯಿದ್ದು ಜೀವನೋಪಾಯಕ್ಕಾಗಿ ಅದೇ ಉದ್ಯೋಗವನ್ನು ಆಶ್ರಯಿಸಿದರು. ಸಂಯುಕ್ತ ಕರ್ನಾಟಕ, ತರುಣ ಕರ್ನಾಟಕ, ಸಮಾಜ ಲೋಕಮತ, ಕರ್ನಾಟಕ ಬಂಧು, ಸ್ವತಂತ್ರ ಕರ್ನಾಟಕ ಮುಂತಾದ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ೧೯೪೨ರಲ್ಲಿ ಚಲೆಜಾವ್ ಚಳುವಳಿಯಲ್ಲಿ ಕಟ್ಟೀಮನಿಯವರು ಧುಮುಕಿದರು. ಇದರಿಂದ ಬಂಧನಕ್ಕೊಳಗಾದರು. ಸೆರೆಮನೆಯಿಂದ ಹೊರಬಂದು ಉಷಾ ಪತ್ರಿಕೆಯಲ್ಲಿ ಕೆಲಸಕ್ಕೆ ಸೇರಿದರು. ಸ್ವತಂತ್ರ ಪತ್ರಿಕೆಯನ್ನು ಕೆಲಕಾಲ ನಡೆಸಿದರು. ಇವರು ಸುಮಾರು ಅರವತ್ತು ಕೃತಿಗಳನ್ನು ರಚಿಸಿದ್ದಾರೆ.

**ಬೆಂಜಮಿನ್ ಲೂಯಿ ರೈಸ್ :**
ಬೆಂಜಮಿನ್ ಲೂಯಿ ರೈಸರು ೧೮೩೭ರ ಜುಲೈ ೧೭ ರಂದು ಬೆಂಗಳೂರಿನಲ್ಲಿ ಜನಿಸಿದರು. ತಂದೆ ಬೆಂಜಮಿನ್ ಹೋಲ್ಟ್ ರೈಸ್ ಒಬ್ಬ ನಿಷ್ಠಾವಂತ ಆಂಗ್ಲ ಕ್ರೈಸ್ತ ಪಾದ್ರಿ. ಭಾರತದಲ್ಲಿ ಜನಿಸಿದ ಇವರು ಇಂಗ್ಲೆಂಡ್‌ನಲ್ಲಿ ವಿದ್ಯಾಭ್ಯಾಸ ಮಾಡಿ ೧೮೬೦ ರಲ್ಲಿ ಭಾರತಕ್ಕೆ ಬಂದು ಬೆಂಗಳೂರಿನ ಸೆಂಟ್ರಲ್ ಹೈಸ್ಕೂಲಿನಲ್ಲಿ ಐದು ವರ್ಷ ಮುಖ್ಯೋಪಾಧ್ಯಾಯರಾಗಿ ಕಾರ್ಯ ನಿರ್ವಹಿಸಿದರು. ಅನಂತರ ಮೈಸೂರು ಮತ್ತು ಕೊಡಗುಗಳಲ್ಲಿ ಶಾಲಾ ಇನ್ಸ್ ಪೆಕ್ಟರ್ ಆಗಿದ್ದರು. ೧೮೬೮ ರಲ್ಲಿ ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಯಾಗಿಯೂ ದುಡಿದರು. ೧೮೮೩ ರಲ್ಲಿ ಮೈಸೂರು ಸರ್ಕಾರದ ವಿದ್ಯಾಶಾಲೆಯ ಪ್ರಥಮ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಿದರು. ಕನ್ನಡದಲ್ಲಿ ಅಪಾರ ಪಾಂಡಿತ್ಯವನ್ನು ಹೊಂದಿದ್ದ ರೈಸ್ ವಿದ್ಯಾಭ್ಯಾಸ ಇಲಾಖೆಯಲ್ಲಿದ್ದ ಸಂಸ್ಥಾದಲ್ಲಿದ್ದ ಸ್ಥಳ ಪುರಾಣ, ಶಾಸನ, ಚಾರಿತ್ರಿಕ ವಿಷಯಗಳು, ಪುರಾತನ ಗ್ರಂಥಗಳನ್ನು ಸಂಗ್ರಹಿಸುತ್ತ ಶಾಸನಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡು ಶಾಸನ ವಿಷಯಗಳನ್ನು ಆಗಾಗ ಪ್ರಕಡಿಸುತ್ತಿದ್ದರು. ಮೈಸೂರು ಸರ್ಕಾರ ೧೮೮೪ರಲ್ಲಿ ಪ್ರಾಚ್ಯವಸ್ತು ಶಾಖೆಯನ್ನಾರಂಭಿಸಿದಾಗ ಇವರು ತಮ್ಮ ಹುದ್ದೆಯ ಜೊತೆಗೆ ಈ ಶಾಖೆಯ ಅಧಿಕಾರವನ್ನು ವಹಿಸಿಕೊಂಡರು.ಹೀಗೆ ಹಲವಾರು ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ

ಅಂಟಿಕ್ವೆರಿ ಪತ್ರಿಕೆ ಪ್ರಾರಂಭವಾದಾಗ ಏಳು ವರ್ಷಗಳ ಕಾಲ ಇದರ ಸಂಪಾದಕರಾಗಿದ್ದರು. 'ಭಾರತೀಯ ಶಾಸನಶಾಸ್ತ್ರ ಪಿತಾಮಹಾ' ಎಂದು ಇವರನ್ನು ಕರೆಯಬಹುದು. ಶಾಸನ ಕ್ಷೇತ್ರದಲ್ಲಿ ಫ್ಲೀಟ್ ಹೆಸರು ದೊಡ್ಡದು. ಶಾಸನಶಾಸ್ತ್ರವಲ್ಲದೆ ಭೂಗೋಳ, ಖಗೋಳ, ಇತಿಹಾಸ, ಭಾಷಾಶಾಸ್ತ್ರ, ಲಿಪಿಶಾಸ್ತ್ರ ಮುಂತಾದವುಗಳಲ್ಲಿ ಇವರು ಪರಿಣತರಾಗಿದ್ದರು. ಸಂಸ್ಕೃತ - ಕನ್ನಡ ಸಾಹಿತ್ಯದಲ್ಲಿ ಇವರಿಗೆ ಅಪಾರ ಒಲವಿತ್ತು. ಫ್ಲೀಟ್‌ರವರ 'ಸಂಸ್ಕೃತ, ಪಾಳಿ ಮತ್ತು ಹಳಗನ್ನಡ ಶಾಸನಗಳು' ಎಂಬ ಕೃತಿ ೧೮೭೮ ರಲ್ಲಿ ಪ್ರಕಟವಾಯಿತು. ೧೮೯೮ರಲ್ಲಿ ಮುಂಬಯಿ ಪ್ರಾಂತ್ಯದ ಕನ್ನಡ ಜಿಲ್ಲೆಗಳ ರಾಜವಂಶಗಳು ಎಮಬ ಮತ್ತೊಂದು ಅಮೂಲ್ಯ ಕೃತಿ ಪ್ರಕಟವಾಯಿತು. ಬಿ.ಎಲ್. ರೈಸರಂತೆ ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾರೆ. ಫ್ಲೀಟರ್ ಕಾರ್ಯಕ್ಷೇತ್ರ ಉತ್ತರ ಕರ್ನಾಟಕವಾಗಿತ್ತು. ಹಲವು ಕನ್ನಡ ಲಾವಣಿಗಳನ್ನು ಇಂಗ್ಲಿಷ್ ಅನುವಾದ ಸಹಿತ ಪ್ರಕಟಿಸಿ ಕನ್ನಡ ಜನಪದ ಸಾಹಿತ್ಯ ಸಂಗ್ರಹಕ್ಕೆ ಆದ್ಯರಾದ ಕೀರ್ತಿಯೂ ಫ್ಲೀಟ್‌ರಿಗೆ ಸಲ್ಲಬೇಕು. ಕನ್ನಡ ಭಾಷೆ, ಸಾಹಿತ್ಯಗಳ ಬಗ್ಗೆ ಇವರಿಗೆ ಬಹಳ ಅಭಿಮಾನವಿತ್ತು. ಭರತ ಖಂಡಕ್ಕೂ ಕನ್ನಡ ನಾಡಿಗೂ ವಿಶೇಷವಾದ ಸೇವೆ ಸಲ್ಲಿಸಿದ ಪಾಶ್ಚಾತ್ಯ ವಿದ್ವಾಂಸರಲೊಬ್ಬರು.

ಬಸವರಜ ಕಟ್ಟೀಮನಿಯವರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಇವರು ಸೋವಿಯತ್ ದೇಶಕ್ಕೂ ಭೇಟಿ ನೀಡಿದ್ದರು. ಇವರು ೧೯೮೯ರ ಅಕ್ಟೋಬರ್ ೨೩ ರಂದು ನಿಧನರಾದರು.

ಕೃತಿಗಳು

ಜ್ವಾಲಮುಖಿಯ ಮೇಲೆ, ನಾನೂ ಪೋಲಿಸನಾಗಿದ್ದೆ, ಬಂಗಾರದ ಜಿಂಕೆಯ ಹಿಂದೆ, ಬೆಂಗಳೂರಿಗೊಂದು ಟಿಕೀಟು, ಮೋಹದ ಬಲೆಯಲ್ಲಿ, ಜರತಾರಿ ಜಗದ್ಗುರು, ಬೀದಿಯಲ್ಲಿ ಬಿದ್ದವಳು, ಗಿರಿಯ ನವಿಲು, ಖಾನವಳಿ ಲೀಲಾ, ಜಲತರಂಗ, ಜನಿವಾರ ಮತ್ತು ಶಿವದಾರಾ, ಬಲೆಯ ಬೀಸಿದರು, ನೀನನ್ನ ಮುಟ್ಟಬೇಡ, ಸಾಕ್ಷಾತ್ಕಾರ, ನರಗುಂದ ಬಂಡಾಯ, ಸಂಗೋಳ್ಳಿ ರಾಯನಾಯಕ, ಬೆಳಗಿನ ಗಾಳಿ, ನಾನು ಕಂಡ ರಷ್ಯಾ, ಕುಂದರ ನಾಡಿನ ಕಂದ, ಮಾಜೀ ಮಂತ್ರಿ, ಸಮರ ಭೂಮಿ, ಪೌರುಷ ಪರೀಕ್ಷೆ, ಮಣ್ಣು ಮತ್ತು ಹೆಣ್ಣು, ಸೇನಾಪತಿ ಚೆನ್ನಪ್ಪ, ಮಾಡಿ ಮಾಡಿದವರು, ಸ್ವಾತಂತ್ರ್ಯದ ಕಡೆಗೆ, ಗೋವಾದೇವಿ, ದ್ರೋಹಿ, ಕತ್ತರಿ ಪ್ರಯೋಗ, ಹರಿಜನಾಯಣ, ಸುಂಟರಗಾಳಿ, ಹುಲಿಯಣ್ಣನ ಮಗಳು ಮುಂತಾದವು.
ಕಾದಂಬರಿಕಾರನ ಕಥೆ ಎಂಬುದು ಇವರ ಆತ್ಮಕಥೆ. ಕಟ್ಟಿಮನಿ ಎಂಬುದು ಇವರ ಅಭಿನಂದನಾ ಗ್ರಂಥ

ಗೌರವ, ಪ್ರಶಸ್ತಿ-ಪುರಸ್ಕಾರಗಳು

೧೯೬೮ರಲ್ಲಿ 'ಜ್ವಾಲಮುಖಿಯ ಮೇಲೆ' ಕೃತಿಗೆ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ ಲಭಿಸಿದೆ.
೧೯೮೦ರಲ್ಲಿ ಬೆಳಗಾವಿಯಲ್ಲಿ ಜರುಗಿದ ೫೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ

ರೈಸರು ೧೯೦೬ರ ವರೆಗೆ ಈ ದೇಶದ ಪುರಾತನ ಅಧ್ಯಯನ ರಂಗದಲ್ಲಿ ಅವಿಶ್ರಾಂತರಾಗಿ ದುಡಿದು ತಮ್ಮ ೭೦ನೇ ವಯಸ್ಸಿಗೆ ನಿವೃತ್ತರಾಗಿ ತಾಯ್ನಾಡಿಗೆ ಮರಳಿ ಹ್ಯಾರೋ ಪಟ್ಟಣದಲ್ಲಿ ನೆಲೆಸಿದರು. ಅನಂತರ ೧೯೨೭ ಜುಲೈ ತಿಂಗಳಲ್ಲಿ ತಮ್ಮ ೯೦ನೇಯ ವಯಸ್ಸಿನಲ್ಲಿ ನಿಧನರಾದರು.

ಬೆನಗಲ್ ರಾಮರಾವ್‌ರವರು ೧೮೭೬ರ ಏಪ್ರಲ್ ೩ ರಂದು ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿಯಲ್ಲಿ ಜನಿಸಿದರು. ತಂದೆ ಮಂಜುನಾಥಯ್ಯ, ಸುಪ್ರಸಿದ್ಧ ವಕೀಲರು; ತಾಯಿ ರಾಮಾಯಾಯಿ. ಸಂಗೀತ, ಸಾಹಿತ್ಯ, ಯಕ್ಷಗಾನ ಇವು ಮಂಜುನಾಥಯ್ಯನವರ ಪ್ರವೃತ್ತಿಗಳು. ಹೀಗೆ ಸುಸಂಸ್ಕೃತ ಕುಟುಂಬದಿಂದ ಬಂದ ಇವರಿಗೆ ಇವು ಒಗ್ಗೂಡಿ ಬಂದಿದ್ದವು.೧೯೦೨ರಲ್ಲಿ ಮುಂಬಯಿ ಸರ್ಕಾರದ ಭಾಷಾಂತರ ಶಾಖೆಯಲ್ಲಿ ಭಾಷಾಂತರಕಾರರಾಗಿ ಸುಮಾರು ೮ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ೧೯೦೮ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಎಲ್.ಎಲ್.ಬಿ. ಪದವಿ ಪಡೆದುಕೊಂಡರು. ೧೯೧೦ರಲ್ಲಿ ಶಾಖೆಯ ಮುಖ್ಯಸ್ಥರಾದರು. ನಿವೃತ್ತಿಯಗುವವರೆಗೂ ಅದೇ ವೃತ್ತಿಯಲ್ಲಿ ಮುಂದುವರೆದರು.
ಕನ್ನಡ ತೆಲುಗು, ಸಂಸ್ಕೃತ, ಬಂಗಾಲಿ, ಮರಾಠಿ ಭಾಷೆಗಳ ಪರಿಚಯ ಪಡೆದಿದ್ದ ರಾಮರಾಯರು ಆ ಭಾಷೆಗಳಿಂದ ಕನ್ನಡಕ್ಕೆ ಅನೇಕ ಕೃತಿಗಳನ್ನು ಅನುವಾದ ಮಾಡಿದ್ದಾರೆ. ರಾಮರಾಯರು ೧೯೪೩ ಮೇ ೮ರಂದು ನಿಧವರಾದರು.
ಗೌರವ, ಪ್ರಶಸ್ತಿ - ಪುರಸ್ಕಾರಗಳು
ರಲ್ಲಿ ಬೆಳಗಾವಿಯಲ್ಲಿ ನಡೆದ ೧೧ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.



**ಬೆನಗಲ್ ರಾಮರಾವ್ :** ಬೆನಗಲ್ ರಾಮರಾವ್‌ರವರು ೧೮೭೬ರ ಏಪ್ರಲ್ ೩ ರಂದು ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿಯಲ್ಲಿ ಜನಿಸಿದರು. ತಂದೆ ಮಂಜುನಾಥಯ್ಯ, ಸುಪ್ರಸಿದ್ಧ ವಕೀಲರು; ತಾಯಿ ರಾಮಾಯಾಯಿ. ಸಂಗೀತ, ಸಾಹಿತ್ಯ, ಯಕ್ಷಗಾನ ಇವು ಮಂಜುನಾಥಯ್ಯನವರ ಪ್ರವೃತ್ತಿಗಳು. ಹೀಗೆ ಸುಸಂಸ್ಕೃತ ಕುಟುಂಬದಿಂದ ಬಂದ ಇವರಿಗೆ ಇವು ಒಗ್ಗೂಡಿ ಬಂದಿದ್ದವು. ಪ್ರಾಥಮಿಕ ಮತ್ತು ಪ್ರೌಢ ವಿದ್ಯಾಭ್ಯಾಸವನ್ನು ಹುಟ್ಟೂರಾದ ಮಂಗಳೂರಿನಲ್ಲಿ ಮುಗಿಸಿದ ಅನಂತರ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕಾಲೇಜಿಗೆ ಪ್ರವೇಶ ಪಡೆದು ೧೮೯೭ರಲ್ಲಿ ಬಿ.ಎ. ಪದವಿ ಗಳಿಸಿದರು. ಇವರು ಅಭ್ಯಾಸ ಮಾಡಿದ ಪ್ರಮುಖ ವಿಷಯಗಳಲ್ಲಿ ಕನ್ನಡ ಭಾಷಾಶಾಸ್ತ್ರವೂ ಒಂದು. ೧೯೦೦ ರಲ್ಲಿ ರಾಚರಾಯರು ಮದ್ರಾಸ್ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡಿದುಕೊಂಡರು.
ರಾಮರಾಯರು ಕನ್ನಡದ ಜೊತೆಗೆ ತೆಲುಗುವನ್ನು ಅಭ್ಯಸಿಸಿದರು. ೧೯೦೮ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಎಲ್.ಎಲ್.ಬಿ. ಪದವಿ ಪಡೆದುಕೊಂಡರು. ೧೯೧೦ರಲ್ಲಿ ಶಾಖೆಯ ಮುಖ್ಯಸ್ಥರಾದರು. ನಿವೃತ್ತಿಯಗುವವರೆಗೂ ಅದೇ ವೃತ್ತಿಯಲ್ಲಿ ಮುಂದುವರೆದರು.
ಕನ್ನಡ ತೆಲುಗು, ಸಂಸ್ಕೃತ, ಬಂಗಾಲಿ, ಮರಾಠಿ ಭಾಷೆಗಳ ಪರಿಚಯ ಪಡೆದಿದ್ದ ರಾಮರಾಯರು ಆ ಭಾಷೆಗಳಿಂದ ಕನ್ನಡಕ್ಕೆ ಅನೇಕ ಕೃತಿಗಳನ್ನು ಅನುವಾದ ಮಾಡಿದ್ದಾರೆ. ಪತ್ರಿಕೋದ್ಯಮದಲ್ಲಿ ರಾಮರಾಯರಿಗೆ ಆಸಕ್ತಿ ಇತ್ತು. ಧಾರವಾದಿಂದ ಪ್ರಕಟವಾಗುತ್ತಿದ್ದ



**ಬೆಟಗೇರಿ ಕೃಷ್ಣಶರ್ಮ** ಬೆಟಗೇರಿ ಕೃಷ್ಣಶರ್ಮರವರು ೧೯೦೦ ಏಪ್ರಿಲ್ ೧೬ ರಂದು ಗೋಕಾಕ ತಾಲ್ಲೂಕಿನ ಬೆಟಗೇರಿಯಲ್ಲಿ ಜನಿಸಿದರು. ಆನಂದಕಂದ ಇವರ ಕಾವ್ಯನಾಮ ತಮ್ಮ ಹನ್ನರಡನೇ ಮಯಸ್ಸಿಗೆ ತಂದೆಯನ್ನು ಕಳೆದುಕೊಂಡು ಸಂಸಾರದ ಹೊರೆಯನ್ನು ಹೊರಲೇಬೇಕಾಯಿತು.
ಇಂತಹ ಪರಿಸ್ಥಿತಿಯಲ್ಲಿಯೂ ಸಹ ಅಲ್ಪ ಸ್ವಲ್ಪ ಓದು ಕಲಿತ ಕೃಷ್ಣಶರ್ಮರು ಮನೆಯಲ್ಲಿದ್ದರು.
೧೯೧೯ರಲ್ಲಿ ಧಾರವಾಡದಲ್ಲಿ ಜರುಗಿದ ಕರ್ನಾಟಕ ಏಕೀಕರಣ ಸಮ್ಮೇಳನ ಜರುಗಿದಾಗ ಕಾವ್ಯಾನಂದರ ನೇತೃತ್ವದಲ್ಲಿ ಸ್ವಯಂ ಸೇವಕರಾಗಿ ದುಡಿದರು. ಆಗ ಇವರಿಗೆ ಕೆರೂರು ವಾಸುದೇವಾಚಾರ್ಯ, ಹುಯಿಲಗೊಳ ನಾರಾಯಣರಾವ್ ಅವರಂತಹ ಸಂಪರ್ಕ ಅಲ್ಲದೇ ಕನ್ನಡಾಭಿಮಾನವೂ ಬೆಳೆಯಿತು.
ಬೆಟಗೇರಿಯವರು ಶಿಕ್ಷಕ ವೃತ್ತಿಗಿಂತ ಲೇಖಕ ಸಂಪಾದಕ ವೃತ್ತಿಯನ್ನೇ ಬಹುವಾಗಿ ಮೆಚ್ಚಿದರು.
ಬೆಟಗೇರಿಯವರು ಬೆಂಗಳೂರಿನ ಆರ್ಯ ವಿದ್ಯಾಶಾಲೆಯಲ್ಲಿ ಶಿಕ್ಷಕರಾಗಿ ಕೆಲಕಾಲ ಕೆಲಸ ಮಾಡಿದರು. ಅನಂತರ ಬೆಳಗಾವಿಯ ರಾಷ್ಟ್ರೀಯ ಶಾಲೆಯಲ್ಲಿಯೂ ಕೆಲಕಾಲ ದುಡಿದರು. ಬೆಳಗಾವಿಯಲ್ಲಿ ಮರಾಠಿ ವಾತಾವರಣ ಇದ್ದ ಕಾರಣ ಅಲ್ಲಿಯ ಜನರಲ್ಲಿ ಕನ್ನಡ ಪ್ರಜ್ಞೆ ಮೂಡಿಸಲು ಬಹುವಾಗಿ



**ಸಂ.ಶಿ. ಭೂಸನೂರಮಠ** ಸಂ.ಶಿ.ಭೂಸನೂರಮಠ ಇವರು ೧೯೧೦ರಲ್ಲಿ ಅವಿಭಜಿತ ಧಾರವಾಡ ಜಿಲ್ಲೆ (ಇಂದಿನ ಗದಗ ಜಿಲ್ಲೆ)ಯ ರೋಣ ತಾಲ್ಲೂಕಿನ ನಿಡಗುಂದಿಯಲ್ಲಿ ಜನಿಸಿದರು. ಸಂಗಯ್ಯ ಶಿವಮೂರ್ತಯ್ಯ ಭೂಸನೂರಮಠ ಇವರ ಪೂರ್ಣ ಹೆಸರು. ಇವರು ನಿಡಗುಂದಿ, ಗದಗ ಮತ್ತು ಹುಬ್ಬಳ್ಳಿಗಳಲ್ಲಿ ವ್ಯಾಸಂಗಮಾಡಿ ೧೯೩೧ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಅನಂತರ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ೧೯೩೫ರಲ್ಲಿ ಬಿ.ಎ. (ಆನರ್ಸ್) ಪದವಿಯನ್ನು ಗಳಿಸಿದರು. ೧೯೩೭ರಲ್ಲಿ ಮುಮಬಯಿ ವಿಶ್ವವಿದ್ಯಾಲಯಕ್ಕೆ ಮೊದಲಿಗರಾಗಿ ಎಂ.ಎ. (ಕನ್ನಡ) ಪದವಿ ಪಡೆದುಕೊಂಡರು.
ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಆರಂಭವಾಯಿತು.
೧೯೬೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಪ್ರಾಧ್ಯಾಪಕರಾದರು.
ಯು.ಜಿ.ಸಿ. ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು.
ಕರ್ನಾಟಕ ವಿಶ್ವವಿದ್ಯಾಲಯದ ಕಲಾ ವಿಭಾಗದ ಡೀನ್ ಆಗಿದ್ದರು. ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಕನ್ನಡ ನಿಘಂಟಿನ ಸಂಪಾದಕರ ಸಮಿತಿಯ ಸದಸ್ಯರಾಗಿಯೂ ಇವರು ಸೇವೆ ಸಲ್ಲಿಸಿದರು. ಇವರು ೧೯೯೧ರ ನವೆಂಬರ್ ೬ ರಂದು ನಿಧನರಾದರು.

ವಾಗ್ಭೂಷಣ ಪತ್ರಿಕೆಯ ಸಹ ಸಂಪಾದಕರಾಗಿಯೂ ಕೆಲಕಾಲ ದುಡಿದರು. ರಾಮರಾಯರು ೧೯೪೩ ಮೇ ೮ರಂದು ನಿಧವರಾದರು.

ಕೃತಿಗಳು :

ಕರ್ನಾಟಕ ಕಂದಮಾಲೆ, ಕಲಹಪ್ರಿಯ, ಕರ್ನಾಟಕ ಘೋಷಯಾತ್ರೆ, ಸತ್ಯರಾಜನ ಪೂರ್ವ ದೇಶದ ಯಾತ್ರೆಗಳು, ಕೃಷ್ಣಕುಮಾರಿ, ಸುಭದ್ರವಿಜಯ, ಇರಾವತಿ ಚಿಕ್ಕ ಕತೆಗಳು, ಪುರಾಣ ನಾಚಚೂಡಾಮಣಿ (ಸಂಪಾದಕರಾಗಿ) ತಂಜಾಬೂರು ಮನೆತನ ಕೈಫಿಯತ್ತು, ಜಯದೇವನ ವಿಜಯ, ತರುಬಾಲಾ, ಸುಭದ್ರಾಹರಣ ಇತ್ಯಾದಿ.

ಗೌರವ, ಪ್ರಶಸ್ತಿ - ಪುರಸ್ಕಾರಗಳು

ರಲ್ಲಿ ಬೆಳಗಾವಿಯಲ್ಲಿ ನಡೆದ ೧೧ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಶ್ರಮಿಸಿದರು. ಆ ಸಂದರ್ಭದಲ್ಲಿಯೇ ಎನಿತು ಇನಿದು ಈ ಕನ್ನಡ ನುಡಿಯು ಎಂಬ ಸುಂದರ ಗೀತೆಯನ್ನು ರಚಿಸಿದರು. ೧೯೩೮ರಲ್ಲಿ ಜಯಂತಿ ಪತ್ರಿಕೆಯನ್ನು ಆರಂಭಿಸಿ ಸುಮಾರು ೨೫ ವರ್ಷಗಳ ಕಾಲ ನಡೆಸಿದರು. ಸ್ವಧರ್ಮ, ಜಯ ಕರ್ನಾಟಕ ಈ ಪತ್ರಿಕೆಗಳ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದರು. ಇವರು ೧೯೮೨ರಲ್ಲಿ ನಿಧನರದರು.

ಕೃತಿಗಳು

ರಾಜಯೋಗಿ, ಅಶಾಂತಿ ಪರ್ವ, ಮಲ್ಲಿಕಾರ್ಜುನ, ಮುದ್ದಣ ಮಾತು, ಕಾರ ಹುಣ್ಣಿಮೆ, ವಿರಹಿಣಿ, ಒಡನಾಡಿ, ಸಂಸಾರ ಚಿತ್ರಗಳು, ಕಳ್ಳರ ಗುರು, ಸಂಸ್ಕೃತಿ ಪರಂಪರೆ, ಕರ್ನಾಟಕ ಜನಜೀವನ ಇವು ಇವರ ಕೃತಿಗಳು.

ಗೌರವ, ಪ್ರಶಸ್ತಿ- ಪುರಸ್ಕಾರಗಳು

೧೯೩೭ರಲ್ಲಿ ಜಮಖಂಡಿಯಲ್ಲಿ ನಡೆದ ೨೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯ ಗೋಷ್ಠಿಗೆ ಇವರು ಅಧ್ಯಕ್ಷರಾಗಿದ್ದರು.

೧೯೭೧ರಲ್ಲಿ ನಾಗಮಂಗಲದಲ್ಲಿ ನಡೆದ ಜಾನಪದ ಸಮ್ಮೇಳನ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

೧೯೭೪ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿದೆ.

ಕೃತಿಗಳು

ಭಕ್ತಿ ಸುಧಾಸಾರ, ಸಿದ್ಧ ನಂಜೇಶನ ಗುರುರಾಜ ಚಾರಿತ್ರ್ಯ, ಮೋಳಿಗೆ ಮಾರಯ್ಯನ ವಚನಗಳು, ರಾಣಿ ಮಹಾದೇವಿಯವರ ವಚನಗಳು, ಗೌರಂಕನ ಮೋಲಿಗೆಯ್ಯನ ಪುರಾಣ, ಅದೃಶ್ಯ ಕವಿಯ ಪ್ರೌಢರಾಯನ ಕಾವ್ಯ, ಸಿದ್ದ ವೀರಣೊಡೆಯರ ಶೂನ್ಯ ಸಂಪಾದನೆ, ಮಹಾಲಿಂಗದೇವರ ಏಕೋತ್ತರ ಶತಸ್ಥಲ, ಕಲ್ಲಮಠದ ಪ್ರಭುದೇವರ ಲಿಂಗಲೀಲಾ ವಿಲಾಸ ಚಾರಿತ್ರ್ಯ, ಶೂನ್ಯ ಸಂಪಾದನೆಯ ಪರಾಮರ್ಶೆ, ಕಲ್ಯಾಣದಿಂದ ಕಾಶ್ಮೀರಕ್ಕೆ ಇವು ಇವರ ಕೃತಿಗಳು.

ಗೌರವ, ಪ್ರಶಸ್ತಿ&ಪುರಸ್ಕಾರಗಳು

೧೯೬೯ ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೭೧ ರಲ್ಲಿ ಶೂನ್ಯ ಸಂಪಾದನೆಯ ಪರಾಮರ್ಶೆ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ.

೧೯೯೦ ರಲ್ಲಿ ಪಂಪ ಪ್ರಶಸ್ತಿ ಲಭಿಸಿದೆ.



**ಎಸ್.ಎಲ್. ಭೈರಪ್ಪ**

ಎಸ್.ಎಲ್.ಭೈರಪ್ಪನವರು ೧೯೩೪ರ ಜುಲೈ ೨೬ ರಂದು ಹಾಸನ ಜಿಲ್ಲೆಯ



**ಮುದ್ದಣ**

ಮುದ್ದಣರ ಮೂಲ ಹೆಸರು ನಂದಳಿಕೆ ಲಕ್ಷ್ಮೀನಾರಾಯಣಯ್ಯ. ಮುದ್ದಣ ಎಂಬುದು ಇವರ ಕಾವ್ಯನಾಮ. ಮುದ್ದಣನವರು

ದುರ್ಗಸಿಂಹ

ದುರ್ಗಸಿಂಹ ಗದಗ್ ಜಿಲ್ಲೆಯ ರೋಣ ತಾಲ್ಲೂಕಿನ ಸದರಿ ಗ್ರಾಮದವರು. ಸಕಲ ವಿದ್ಯಾಪಾರಂಗತನಾದ ದುರ್ಗಮಯ್ಯನೆಂಬ ಬ್ರಾಹ್ಮಣನ ಮೊಮ್ಮಗ, ಈಶ್ವರಾರ್ಯ ಈತನ ತಂದೆ.

ಚನ್ನರಾಯಪಟ್ಟಣ ತಾಲ್ಲೂಕಿನ ಸಂತೇಶಿವರ ಗ್ರಾಮದಲ್ಲಿ ಜನಿಸಿದರು. ತಂದೆ ಲಿಂಗಣ್ಣಯ್ಯ, ತಾಯಿ ಗೌರಮ್ಮ ಇವರು ಪ್ರಾಥಮಿಕ ಅಭ್ಯಾಸವನ್ನು ಸಂತೇಶಿವರ ಹಾಗೂ ಹತ್ತಿರದ ಗ್ರಾಮಗಳಲ್ಲಿ ಪೂರೈಸಿದರು. ಮೈಸೂರಿಗೆ ಬಂದು ಶಾರದಾ ವಿಲಾಸ ಪ್ರೌಢಶಾಲೆಯಲ್ಲಿ ಓದಿದ ನಂತರ ಮಹಾರಾಜ ಕಾಲೇಜಿನಿಂದ ೧೯೫೭ರಲ್ಲಿ ಬಿ.ಎ. (ಅನರ್ಸ್) ಪದವಿ ಗಳಿಸಿದರು. ೧೯೫೮ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ತತ್ವಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಪ್ರಥಮ ರ್‍ಯಾಂಕ್ ಗಳಿಸಿ ಎರಡು ಸುವರ್ಣ ಪದಕಗಳೊಂದಿಗೆ ಪಡೆದುಕೊಂಡರು. ಬರೋಡಾದ ಸಯ್ಯಾಜಿರಾವ್ ಮಹಾರಾಜ್ ವಿಶ್ವವಿದ್ಯಾಲಯದಿಂದ ಸತ್ಯ ಮತ್ತು ಸೌಂದರ್ಯ ಎಂಬ ಇಂಗ್ಲಿಷ್ ಮಹಾ ಪ್ರಬಂಧಕ್ಕಾಗಿ ಡಾಕ್ಟರೇಟ್ ಪದವಿ ಗಳಿಸಿಕೊಂಡರು. ಅನಂತರ ೧೯೫೮ ರಿಂದ ಹುಬ್ಬಳ್ಳಿಯ ಕಾಡಸಿದ್ದೇಶ್ವರ ಕಾಲೇಜಿನಲ್ಲಿ ತರ್ಕಶಾಸ್ತ್ರ ಮತ್ತು ಮನಶಾಸ್ತ್ರದ ಅಧ್ಯಾಪಕರಾಗಿದ್ದರು. ನಂತರ ೧೯೬೦ರಿಂದ ೧೯೬೬ರವರೆಗೆ ಗುಜರಾತಿನ ಸರ್ದಾರ್ ಪಟೇಲ್ ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ೧೯೬೭ ರಿಂದ ೧೯೭೧ರವರೆಗೆ ದೆಹಲಿ ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಶಿಕ್ಷಣ ಮೀಮಾಂಸಾ ವಿಷಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಇವರ ಕಾದಂಬರಿಗಳಲ್ಲಿ ವಂಶವೃಕ್ಷ, ಮತದಾನ, ತಬ್ಬಲಿಯು ನೀನಾದೆ ಮಗನೆ ಕನ್ನಡ ಚಲನಚಿತ್ರಗಳಾಗಿ ಪ್ರಶಸ್ತಿಗಳಿಸಿವೆ.

ಕೃತಿಗಳು

ಧರ್ಮಶ್ರೀ, ಧೂರ ಸರಿದರು, ಮತದಾನ, ವಂಶವೃಕ್ಷ, ಜಲಪಾತ, ನಾಯಿ ನೆರಳು, ಗೃಹಣ, ಸಾರ್ಥ, ಸಾಕ್ಷಿ, ತಬ್ಬಲಿಯು ನೀನಾದೆ ಮಗನೆ, ಗೃಹಭಂಗ, ಅಂಚು, ನಿರಾಕರಣ, ದಾಟು, ಅನ್ವೇಷಣೆ, ೧೮೭೦ರ ಜನವರಿ ೨೪ರಂದು ಕಾರ್ಕಳ ತಾಲ್ಲೂಕಿನ ನಂದಳಿಕೆ ಎಂಬ ಗ್ರಾಮದಲ್ಲಿ ಜನಿಸಿದರು. ತಂದೆ ಪಾಟಾಳಿ ತಿಮ್ಮಯ್ಯ, ತಾಯಿ ಮಹಾಲಕ್ಷ್ಮಮ್ಮ. ಪ್ರಾಥಮಿಕ ಶಿಕ್ಷಣವನ್ನು ನಂದಳಿಕೆಯಲ್ಲಿಯೇ ಪಡೆದರು. ಅನಂತರ ಟ್ರೈನಿಂಗ್ ಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿದರು. ಕಡು ಬಡತನದಿಂದಾಗಿ ಆಂಗ್ಲ ವಿದ್ಯಾಭ್ಯಾಸ ಮಾಡಲಾಗಲಿಲ್ಲ. ಅನಂತರ ವ್ಯಾಯಮ ಶಿಕ್ಷಣದ ತರಬೇತಿ ಪಡೆಯಲು ಮದರಾಸಿಗೆ ತೆರಳಿದರು. ವ್ಯಾಯಾಮ ಶಿಕ್ಷಣ ಪಡೆದು ೧೮೮೯ರ ಜೂನ್ ೧೫ ರಂದು ಉಡುಪಿಯ ಹೈಸ್ಕೂಲಿನಲ್ಲಿ ಅಂಗಸಾಧನೆಯ ಶಿಕ್ಷಕನಾಗಿ ನೇಮಕಗೊಂಡರು. ೧೮೯೨ರ ಮಾರ್ಚ್ ೨೬ ರಂದು ಉಡುಪಿಯಿಂದ ಕುಂದಾಪುರಕ್ಕೆ ವರ್ಗವಾಯಿತು. ೧೮೯೯ರಲ್ಲಿ ಕಮಲಾಬಾಯಿ ಎಂಬುವರ ಜೊತೆ ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ಮುಂದೆ ಮುದ್ದಣನವರಿಗೆ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲೊಂದರಲ್ಲಿ ಕನ್ನಡ ಪಂಡಿತರಾಗಿ ಉದ್ಯೋಗ ದೊರೆಯಿತು. ಇವರಿಗೆ ಸಾಹಿತ್ಯದಲ್ಲಿ ಒಲವು ಬೆಳೆಯಲು ಮಳಲಿ ಸುಬ್ಬರಾಯರು ಕಾರಣರಾದರು. ಇವರಿಗೆ ಯಕ್ಷಗಾನದಲ್ಲೂ ಅಭಿರುಚಿಯಿತ್ತು. ಮುದ್ದಣನ ಪ್ರತಿಭೆಯು ರಾಮಾಶ್ವಮೇಧ ಗ್ರಂಥದಲ್ಲಿ ಸಂಪೂರ್ಣವಾಗಿ ಉಪಯುಕ್ತವಾಗಿದೆ.

ರಾಮಾಶ್ವಮೇಧ ಕೃತಿಯಲ್ಲಿ ಮುದ್ದಣನು ಕನ್ನಡ ಸಾಹಿತ್ಯ ಗದ್ಯ ಪದ್ಯಗಳ ಬಗೆ ಸಹ ವಿವರಿಸಿದ್ದಾನೆ. ನವಿರಾದ ಹಾಸ್ಯ ಮತ್ತು ಉತ್ತಮ ನಿರೂಪಣೆ ಮುದ್ದಣನ ವಿಶೇಷತೆಗಳು. ಚಿಕ್ಕ ವಯಸ್ಸಿಗೆ ಕ್ಷಯ ರೋಗಕ್ಕೆ ತಾಯಿ ರೇಮಕಟ್ಟಿ. ಈತ ಬ್ರಾಹ್ಮಣ ಕವಿ, ಕುಲ ಗೌತಮಗೋತ್ರ, ದುರ್ಗಸಿಂಹನು ಚಾಲುಕ್ಯ ರಾಜ್ಯ ಜಗದೇಕಮಲ್ಲನ ಆಸ್ಥಾನದಲ್ಲಿ ಸಂಧಿ ವಿಗ್ರಹಿಯಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಈತನ ಕೃತಿ ಪಂಚತಂತ್ರ. ವಸುಭಾಗಭಟ್ಟನ ಪಂಚತಂತ್ರವನ್ನು ಕನ್ನಡಕ್ಕೆ ಅನುವಾದಿಸಿದ್ದಾನೆ.

ದುರ್ಗಸಿಂಹನ ಪಂಚತಂತ್ರ ಚಂಪೂ ರೂಪದಲ್ಲಿದೆ. ಪಂಚತಂತ್ರವು ಐದು ಅಧಿಕಾರಾಗಗಳಿಂದ ಕೂಡಿದ್ದು ಇಲ್ಲಿ ಒಂದೊಂದು ತನ್ನದೇ ಆದ ನೀತಿ ಬೋಧನೆಗಳನ್ನು ಹೊಂದಿದೆ. ಇದರಲ್ಲಿ ಮೊಲವು ಸಿಂಹವನ್ನು ಕೊಂದ ಕಥೆ, ಶಿವಭೂತಿಯ ಕಥೆ ಮೊದಲಾದವು ವಿಶಿಷ್ಟವಾಗಿವೆ.

| | | |
|---|---|---|
| ಪರ್ವ, ತಂತು, ಸಾಹಿತ್ಯ, ಮತ್ತು ಪ್ರತೀಕ ಕಥೆ ಮತ್ತು ಕಥಾವಸ್ತು, ಸತ್ಯ ಮತ್ತು ಸೌಂದರ್ಯ, ನೆಲೆ, ನಾನೇಕೆ ಬರೆಯುತ್ತೇನೆ. ಭಿತ್ತಿ, ಮಂದ್ರ, ಅವರಣ ಇವು ಇವರ<br><br>ಗೌರವ, ಪ್ರಶಸ್ತಿ-ಪುರಸ್ಕಾರಗಳು<br>ಇವರಿಗೆ ಅಭಿನವ ಕಾಳಿದಾಸ ಎಂಬ ಬಿರುದು ಇತ್ತು. | ತುತ್ತಾಗಿ, ಕಾಯಿಲೆ ಉಲ್ಬಣಗೊಂಡು ೧೯೦೧ ಫೆಬ್ರವರಿ ೧೫ ರಂದು ನಿಧನರಾದರು. ಚಿಕ್ಕ ವಯಸ್ಸಿನಲ್ಲೇ ನಿಧನರಾದ ಇವರನ್ನು ಇವರ ಕೃತಿಗಳು ಕನ್ನಡ ಸಾಹಿತ್ಯ ಲೋಕದಲ್ಲಿ ಅಮರರನ್ನಾಗಿಸಿವೆ.<br><br>ಕೃತಿಗಳು:<br>ಅದ್ಭುತ ರಾಮಾಯಣಂ, ರತ್ನಾವತೀ ಕಲ್ಯಾಣ, ಶ್ರೀರಾಮ ಪಟ್ಟಾಭಿಷೇಕ, ಕುಮಾರ ವಿಜಯ, ಕಾವ್ಯಮಂಜರಿ, ಶ್ರೀ ರಾಮಾಶ್ವಮೇಧಂ. | |

ಮುಂದಿನಪುಟಕ್ಕೆ



**ಮುಳಿಯ ತಿಮ್ಮಪ್ಪಯ್ಯ**

ಮುಳಿಯ ತಿಮ್ಮಪ್ಪಯ್ಯನವರು ೧೮೮೮ರ ಮಾರ್ಚ್ ೩ ರಂದು ದಕ್ಷಿಣ ಕನ್ನಡ ಜಿಲ್ಲೆಯ ಕಡೆಂಗೊಂಡ್ಲುವಿನಲ್ಲಿ ತನ್ನ ಅಜ್ಜನ ಮನೆಯಲ್ಲಿ ಜನಿಸಿದರು. ಇವರು ಊರು ಮುಳಿಯ ಮತ್ತು ವಿಟ್ಲಗಳಲ್ಲಿ ಇವರಿಗೆ ಪ್ರಾಥಮಿಕ ವಿದ್ಯಾಭ್ಯಾಸ ದೊರೆಯಿತು. ಆ ಹೊತ್ತಿಗೆ ಬಡತನದಲ್ಲಿದ್ದ ಇವರಿಗೆ ನಾಲ್ಕನೆಯ ತರಗತಿಯೇ ಕೊನೆಯಾಯಿತು. ಬಾಲ್ಯದಲ್ಲಿಯೇ ಸಂಸ್ಕೃತ ವಿದ್ವಾಂಸರಿಂದ ಸಂಸ್ಕೃತ ಕಲಿತರು. ೧೯೦೬ರಲ್ಲಿ ತಿರುವಾಂಕೂರಿಗೆ ಹೋಗಿ ಮಹಾರಾಜ ಸಂಸ್ಕೃತ ಕಾಲೇಜು ಸೇರಿ ವ್ಯಾಸಂಗ ನಡೆಸಿದರು. ಅನಂತರ ಮೈಸೂರಿಗೆ ಬಂದು ಸಂಗೀತ ಕಲಿತರು. ೧೯೧೧ರಲ್ಲಿ ಮಂಗಳೂರಿನ ಕೆನರ ಹೈಸ್ಕೂಲಿನ ಕನ್ನಡ ಪಂಡಿರತಾರಿ ಕೆಲಸಕ್ಕೆ ಸೇರಿದರು. ೧೯೧೫ರಲ್ಲಿ ಪೇಜಾವರ ಬಾಬುರಾಯರ ಜೊತೆ ಕನ್ನಡದ ಕೋಗಿಲೆ ಪತ್ರಿಕೆ ಪ್ರಾರಂಭಿಸಿದರು. ಇವರು ಮೊದಲಿಗೆ ಬರೆಯುತ್ತಿದ್ದ ಲೇಖನಗಳು, ಕಾದಂಬರಿಗಳು ಈ ಪತ್ರಿಕೆಯಲ್ಲಿಯೇ ಪ್ರಕಟವಾಗುತ್ತಿದ್ದವು. ೧೯೧೬ರಲ್ಲಿ ದೇವಕಿ ಎಂಬುವರೊಡನೆ ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ೧೯೧೮ರಲಲಿ ಮಂಗಳೂರಿನ ಸೆಂಟ್ ಅಲೋಷಿಯಸ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದರು. ಪಂಜೆ ಮಂಗೇಶರಾಯರು, ರಾಷ್ಟ್ರಕವಿ ಎಂ. ಗೋವಿಂದ ಪೈ, ಎಂ.ಎನ್. ಕಾಮತ್ ಇವರ ಸಮಕಾಲೀನರು. ಮುಳಿಯ ತಿಮ್ಮಪ್ಪಯ್ಯನವರು ೧೯೫೦ರ ಜನವರಿ ೧೬ ರಂದು ನಿಧನ ಹೊಂದಿದರು.

ಕೃತಿಗಳು

ಚಂದ್ರಾವಳಿ ವಿಲಾಸ, ಸೊಬಗಿನ ಬಳ್ಳಿ, ನಡತೆಯ ನಾಡು, ಬಡ ಹುಡುಗಿ, ಹಗಲಿರುಳು, ಪ್ರೇಮಪಾಶ, ಪಶ್ಚಾತಾಪ, ನಾಡೋಜ ಪಂಪ, ನವನೀತ ರಾಮಾಯಣ, ಆದಿಪುರಾಣ ಸಂಗ್ರಹ, ಸಮಸ್ತ ಭಾರತ ಸಾರ, ತ್ರಿಪುರಾ ವಾಡಾಹ, ಪಾರ್ತಿ ಸುಬ್ಬ, ಕವಿರಾಜಮಾರ್ಗ ವಿವೇಕ, ವೀರಬಂಕೆಯ, ಕನ್ನಡ ಸಾಹಿತ್ಯ ಮತುತ ಇತರ ಕೃತಿಗಳು, ಕನ್ನಡ ನಾಡು ದೇಶಿ ಸಾಹಿತ್ಯ, ರಾಹುತ ರಂಗಪ್ಪ ಮುಂತಾದವು.

ಗೌರವ, ಪ್ರಶಸ್ತಿ-ಪುರಸ್ಕಾರಗಳು

೧೯೩೧ರಲ್ಲಿ ಕಾರವಾರದಲ್ಲಿ ನಡೆದ ೧೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

೧೯೪೧ರಲ್ಲಿ ನಡೆದ ಪಂಪ ಸಹಸ್ರ ಸಾಂವತ್ಸರಿಕ ಉತ್ಸವದ ಅಧ್ಯಕ್ಷತೆ ವಹಿಸಿದ್ದರು.



**ಮಾಸ್ತಿ ವೆಂಕಟೇಶ ಅಯ್ಯಂಗಾರ್**

ಶ್ರೀನಿವಾಸ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಮಾಸ್ತಿ ವೆಂಕಟೇಶ್ ಅಯ್ಯಂಗಾರರು ೧೮೯೧ರ ಜೂನ್ ೬ರಂದು ಕೋಲಾರ ಜಿಲ್ಲೆಯ ಮಾಸ್ತಿ ಎಂಬಲ್ಲಿ ಜನಿಸಿದರು. ತಂದೆ ರಾಮಸ್ವಾಮಿ ಅಯ್ಯಂಗಾರ್, ತಾಯಿ ತಿರುಮಲಮ್ಮ. ಇವರ ಪ್ರಾಥಮಿಕ ವಿದ್ಯಾಭ್ಯಾಸ ಶಿವಾರಪಟ್ಟಣ, ಮಳವಳ್ಳಿ, ಕೃಷ್ಣರಾಜ ಪೇಟೆಗಳಲ್ಲೂ, ಪ್ರೌಢಶಾಲಾ ವಿದ್ಯಾಭ್ಯಾಸ ಮೈಸೂರಿನ ವೆಸ್ಲಿಯನ್ ಹೈಸ್ಕೂಲಿನಲ್ಲಿಯೂ ನಡೆಯಿತು. ಅನಂತರ ಮೈಸೂರಿನ ಮಹಾರಾಜ ಕಾಲೇಜು ಸೇರಿ ಎಫ್.ಎ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. ತದನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜು ಸೇರಿ ೧೯೧೨ರಲ್ಲಿ ಬಿ.ಎ. ಪದವಿ ಪಡೆದರು. ಅನಂತರ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಇಂಗ್ಲಿಷ್ ವಿಷಯವನ್ನು ಮುಖ್ಯ ವಿಷಯವನ್ನಾಗಿ ಅಭ್ಯಾಸ ಮಾಡಿ ಎಂ.ಎ. ಪದವಿ ಪಡೆದುಕೊಂಡರು. ೧೯೧೩ರಲ್ಲಿ ಮೈಸೂರಿನ ಸಿವಿಲ್ ಸರ್ವಿಸ್ ಪರೀಕ್ಷೆ ಉತ್ತೀರ್ಣರಾದರು. ಕೆಲಕಾಲ ಬೆಂಗಳೂರು ಮತ್ತು ಮದ್ರಾಸುಗಳಲ್ಲಿ ಉಪನ್ಯಾಸಕರಾಗಿ ದುಡಿದರು. ೧೯೧೪ರಲ್ಲಿ ಮೈಸೂರು ಸರ್ಕಾರದಲ್ಲಿ ಕೆಲಸಕ್ಕೆ ಸೇರಿದರು. ಅಸಿಸ್ಟೆಂಟ್ ಕಮಿಷನರ್, ಅಸಿಸ್ಟೆಂಟ್ ಸೆಕ್ರೆಟರಿ, ಸಬ್ ಡಿವಿಜನ್ ಆಫಿಸರ್, ಮ್ಯಾಜಿಸ್ಟ್ರೇಟ್, ಸೀನಿಯರ್ ಅಸಿಸ್ಟೆಂಟ್ ಕಮಿಷನರ್, ಸೆನ್ಸಸ್ ಕಮಿಷನರ್, ಡೆಪ್ಯೂಟಿ ಕಮಿಷನರ್, ಕಂಟ್ರೋಲರ್, ಎಕ್ಸೈಜ್ ಕಮಿಷನರ್ ಇಂತಹ ವಿವಿಧ ಉನ್ನತ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ ಮಾಸ್ತಿಯವರು ಜನಮನ್ನಣೆ ಗಳಿಸಿಕೊಂಡರು. ೧೯೪೪ರಲ್ಲಿ ಸ್ವಿಚ್ಛೆಯಿಂದ ನಿವೃತ್ತರಾದರು. ಮಾಸ್ತಿಯವರು ಇಂಗ್ಲಿಷ್ ಸಾಹಿತ್ಯವನ್ನು ಮುಖ್ಯ ವಿಷಯವನ್ನಾಗಿ ಅಭ್ಯಸಿಸಿ ಉನ್ನತ ವ್ಯಾಸಂಗ ಪಡೆದರೂ ಕನ್ನಡ ಸಾಹಿತ್ಯ ಸೇವೆಗೆ ನೀಡಿರುವ ಕೊಡುಗೆ ಅವಿಸ್ಮರಣೀಯ ಜನ್ ಇವರನ್ನು ಮಾಸ್ತಿ ಕನ್ನಡದ ಆಸ್ತಿ, ಸಣ್ಣ ಕತೆಗಳ ಬ್ರಹ್ಮ ಎಂಬ ಹಿರಿಮೆಗೆ ಪಾತ್ರರನ್ನಾಗಿಸಿದ್ದಾರೆ. ಇವರು ೧೯೮೬ರ ಜೂನ್ ೬ ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು.

ಕೃತಿಗಳು:

ಸಣ್ಣ ಕತೆಗಳು ೧೧ ಸಂಪುಟಗಳು, (ಈಗ ಐದು ಸಂಪುಟದಲ್ಲಿವೆ) ಸುಬ್ಬಣ್ಣ ಬಿನ್ನಹ ಮನವಿ, ಅರುಣ ತಾವರೆ, ಚೆಲುವು, ಸುನೀತಾ, ಗೌಡರ ಮಲ್ಲಿ, ರಾಮನವಮಿ, ಶ್ರೀರಾಮ ಪಟ್ಟಾಭಿಷೇಕ, ನವರಾತ್ರಿ, ಚೆನ್ನ ಬಸವನಾಯಕ, ಚಿಕ್ಕವೀರ ರಾಜೇಂದ್ರ, ಶೇಷಮ್ಮ, ಶಾಂತಾ, ಸಾವಿತ್ರಿ, ಉಷಾ, ತಾಳಿಕೋಟೆ, ಮಂಜುಳಾ, ಶಿವಛತ್ರಪತಿ, ಯಶೋಧರಾ, ತಿರುಪಾಣಿ, ಕಾಕನಕೋಟೆ, ಮಾಸತಿ, ಅನಾರ್ಕಲಿ, ಪುರಂದರದಾಸ, ಕನಕಣ್ಣ, ಭಟ್ಟರ ಮಗಳು, ಆದಿಕವಿ ವಾಲ್ಮೀಕಿ, ಭಾರತ ತೀರ್ಥ, ನಮ್ಮ ನುಡಿ, ಲಿಯರ್ ಮಹಾರಾಜ, ಚಂಡಮಾರುತ, ದ್ವಾದಶ ರಾತ್ರಿ, ಹ್ಯಾಮ್ಲೆಟ್, ಚಿತ್ರಾಂಗದ, ಬಿಜ್ಜಳರಾಯ ಚರಿತ್ರೆ, ಕರ್ಣಾಟ ಭಾರತ



**ಮಿರ್ಜಿ ಅಣ್ಣಾರಾಯ**

ಮಿಜಿ ಅಣ್ಣರಾಯರು ಬೆಳಗಾವಿ ಜಿಲ್ಲೆಯ ಶೇಡಬಾಳದಲ್ಲಿ ೧೯೧೮ರಲ್ಲಿ ಆಗಸ್ಟ ೨೫ ರಂದು ಜನಿಸಿದರು. ತಂದೆ ಅಣ್ಣಪ್ಪ, ತಾಯಿ ಚಂದ್ರವ್ವ, ಇವರದು ಕೃಷಿಕ ಕುಟುಂಬ. ಇವರು ಓದಿದ್ದು ಪ್ರಾಥಮಿಕ ಶಾಲೆಯವರೆಗೆ ಮಾತ್ರ. ತದನಂತರ ತಮ್ಮ ಸ್ವಂತ ಪ್ರಯತ್ನದಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಜಾಣ ಪರೀಕ್ಷೆಯಲ್ಲಿ ತೇರ್ಗಡೆಯಾದರು. ೧೯೩೮ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನೇಮಕಗೊಂಡು ಕೆಲಕಾಲ ಕಾರ್ಯ ನಿರ್ವಹಿಸಿದರು. ಇವರು ೧೯೫೩ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಧಾರವಾಡದ ಟೀಚರ್ಸ್ ಟ್ರೈನಿಂಗ್ ಕಾಲೇಜಿನಿಂದ ಶಿಕ್ಷಕ ತರಬೇತಿಯನ್ನು ಪಡೆದುಕೊಂಡರು. ಮಿರ್ಜಿ ಅಣ್ಣಾರಾಯ ಎಂಬುದು ಹೊಸಗನ್ನಡ ಸಾಹಿತ್ಯದಲ್ಲಿ ಚಿರಪರಿಚಿತ ಹೆಸರು. ಬಹುಮುಖಿ ಸಾಹಿತ್ಯಕಾರ. ಹಳ್ಳಿಯ ಸಹಜ ಬದುಕಿನಲ್ಲಿ ಬೆಳೆದ ಅಣ್ಣರಾಯರು ಚಿಕ್ಕಂದಿನಲ್ಲಿಯೇ ಸಾಹಿತ್ಯದ ಕಡೆಗೆ ಆಕರ್ಷಿತರಾದರು. ಹಳಗನ್ನಡ ಕೃತಿಗಳ ಜೊತೆಗೆ ಹೊಸ ಸಾಹಿತ್ಯವನ್ನು ಅಭ್ಯಾಸ ಮಾಡಿಕೊಂಡರು. ಜೊತೆಗೆ ಬರವಣಿಗೆಯನ್ನು ಕಲೆಯನ್ನು ರೂಢಿಸಿಕೊಂಡರು. ಅಣ್ಣಾರಾಯರು ಸರ್ಕಾರದ ಹಲವು ಪಠ್ಯ ಪುಸ್ತಕ ರಚನಾ ಸಮಿತಿಯಲ್ಲಿ ಸದಸ್ಯರಾಗಿದ್ದರು. ಅಣ್ಣಾರಾಯರು ಸರ್ಕಾರದ ಹಲವು ಪಠ್ಯ ಪುಸ್ತಕ ರಚನಾ ಸಮಿತಿಯಲ್ಲಿ ಸದಸ್ಯರಾಗಿದ್ದರು.

| | | |
|---|---|---|
| | ಕಥಾಮಂಜರಿ (ಕುವೆಂಪು ಮತ್ತು ಮಾಸ್ತಿ ) ಇವರ ಆತ್ಮಕಥನ ಭಾವ ಮೂರು ಭಾಗಗಳಲ್ಲಿದೆ. ಮಾತುಗಾರ ರಾಮಣ್ಣ, ಸರ್ ಎಂ.ವಿಶ್ವೇಶ್ವರಯ್ಯ, ಷೇಕ್ಸ್‌ಪಿಯರ್ ದೃಶ್ಯಗಳು ಭಾಗ ೧, ಭಾಗ ೨ ಮತ್ತು ಭಾಗ ೩ ಮುಂತಾದವು.<br><br>ಗೌರವ, ಪ್ರಶಸ್ತಿ-ಪುರಸ್ಕಾರಗಳು:<br>೧೯೨೯ರಲ್ಲಿ ಬೆಳಗಾವಿಯಲ್ಲಿ ನಡೆದ ೧೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.<br>೧೯೪೨ರಲ್ಲಿ ರಾಜ ಸೇವಾಸಕ್ತ ಬಿರುದು<br>೧೯೪೬ರಲ್ಲಿ ಮದ್ರಾಸಿನಲ್ಲಿ ನಡೆದ ದಕ್ಷಿಣ ಭಾರತೀಯ ಭಾಷೆಗಳ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.<br>೧೯೬೧ರಲ್ಲಿ ಅಖಿಲ ಭಾರತ ಬರಹಗಾರರ ಸಮ್ಮೇಳನಾಧ್ಯಕ್ಷರಾಗಿದ್ದರು.<br>೧೯೫೬ರಲಲಿ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಿ.ಲಿಟ್ ಪ್ರಶಸ್ತಿ ನೀಡಿ ಗೌರವಿಸಿದೆ.<br>೧೯೭೭ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಗೌರವ ಡಿ.ಲಿಟ್ ಪ್ರಶಸ್ತಿ ನೀಡಿ ಗೌರವಿಸಿದೆ.<br>೧೯೬೮ ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಲಭಿಸಿದೆ.<br>೧೯೮೪ರಲ್ಲಿ ಚಿಕ್ಕವೀರ ರಾಜೇಂದ್ರ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ.<br>೧೯೪೩ ರಿಂದ ೧೯೪೭ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಉಪಧ್ಯಕ್ಷರಾಗಿ ಸೇವೆ ಸಲ್ಲಿಕೆ<br>೧೯೫೩ ರಿಂದ ೧೯೫೪ ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ನಾಡು ನುಡಿಯ ಸೇವೆ ಸಲ್ಲಿಸಿದರು.<br>೧೯೪೪ ರಿಂ ೬೫ ರವರೆಗೆ ಜೀವನ ಪತ್ರಿಕೆಯ ಸಂಪಾದಕರಾಗಿದ್ದರು.<br>೧೯೭೨ರಲ್ಲಿ ಶ್ರೀನಿವಾಸ ಎಂಬ ಸಂಭಾವನಾ ಗ್ರಂಥ ಅರ್ಪಿಸಲಾಯಿತು. | ಅಣ್ಣರಾಯರಿಗೂ, ಸಾಹಿತ್ಯ ಪರಿಷತ್ತಿಗೂ ಮಧುರ ಸಂಬಂಧ. ೧೯೭೦ ರಿಂದ ೭೪ ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಸಮಿತಿಯ ಸದಸ್ಯರಾಗಿದ್ದರು ಮತ್ತು ಬೆಳಗಾವಿ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿದ್ದರು ಮತ್ತು ಬೆಳಗಾವಿ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿದ್ದರು. ೧೯೭೩ರಲ್ಲಿ ಬೆಳಗಾವಿ ಜಿಲ್ಲ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನೆರವೇರಿಸಿದರು. ಮಿರ್ಜಿ ಅಣ್ಣರಾಯರು ಶೇಡಬಾಳದಲ್ಲಿ ಶಾಂತಿ ಸೇವಾ ಸದನವನ್ನು ತೆರೆದು ಅನೇಕ ಹೊಸ ಬರಹಗಾರರಿಗೆ ತರಬೇತಿ ನೀಡಿದ್ದರು. ಇದರ ವತಿಯಿಂದ ಪುಸ್ತಕ ಪ್ರಕಾಶನ, ಸಾಂಸ್ಕೃತಿಕ ಚಟುವಟಿಕೆಗಳಲ್ಲದೆ ಶಿಕ್ಷಣ ಶಿಬಿರಗಳನ್ನೂ ಏರ್ಪಡಿಸಿದ್ದರು. ಸಭೆ ಸಮಾರಂಭಗಳು ಉಚಿತ ವಾಚನಾಲಯ ಅನುಕೂಲವು ದೊರೆಯುತ್ತಿತ್ತು. ೧೯೭೦ರಲ್ಲಿ ಚಂದ್ರಗಂಗಾ ಜ್ಞಾನಪೀಠವೆಂಬ ಮಂಡಳಿಯೊಂದನ್ನು ತೆರೆದರು. ಇದರಿಂದ ಸಾರ್ವಜನಿಕ ಗ್ರಂಥಾಲಯ, ಸಾಹಿತಿಗಳು, ವಿದ್ವಾಂಸರು ಉಳಿಯುವ ವ್ಯವಸ್ಥೆ, ಮುದ್ರಣಾಲಯ, ಸಾಹಿತ್ಯ ಪ್ರಸಾರ, ಗಾಯನ ಸಂಸ್ಥೆ ಇವೆಲ್ಲವನ್ನೊಳಗೊಂಡ ಈ ಮಂಡಳಿಯು ಅಣ್ಣರಾಯರ ತ್ಯಾಗಬುದ್ದಿಯ ಉದಾತ್ತ ಸಂಸ್ಥೆ, ಇವರು ೧೯೫೭ರಲ್ಲಿ ನಿಧನರಾದರು.<br><br>ಕೃತಿಗಳು<br>ಶ್ರೇಯಾಂಸ, ಪ್ರತಿಸರಕಾರ, ಅಶೋಕಚಕ್ರ, ಎರಡು ಹೆಜ್ಜೆ, ಹದಗೆಟ್ಟ ಹಳ್ಳಿ, ರಾಷ್ಟ್ರಪುರುಷ, ರಾಮಣ್ಣ ಮಾಸ್ತರ, ಸಾಮ್ರಾಟ ಶ್ರೇಣಿಕ, ಚಾವುಂಡರಾಯ ನಿಸರ್ಗ, ಋಷಭದೇವ, ಪ್ರಣಯ ಸಮಾಧಿ, ಅಮರ ಕಥೆಗಳು, |

ವಿಜಯಶ್ರೀ, ವಿಮರ್ಶೆಯ ಸ್ವರೂಪ, ಭರತೇಶನ ನಾಲ್ಕು ಚಿತ್ರಗಳು, ಕನ್ನಡ ಸಾಹಿತ್ಯದ ಒಲವುಗಳು, ಕಲ್ಯಾಣ ಕೀರ್ತಿಯ ಚಿನ್ಮಯ ಚಿಂತಾಮಣಿ, ಭರತೇಶ ವೈಭವದ ಶೋಭದ ಸಂಧಿಗಳು, ಪ್ರಿಯದರ್ಶಿ, ಭಾರತದ ಬೆಳಕು, ಖಾರವೇಲ, ಭಗವಾನ್ ಮಹಾವೀರ, ಬುದ್ಧನ ಕಥೆ, ಮಹಮ್ಮದ್ ಪೈಗಂಬರ, ಶ್ರೀ ಶಾಂತಿಸಾಗರರು, ತೀರ್ಥಂಕರ ಮಹಾವೀರ, ಮಹಾಪುರಷ, ಜತನಾ ರಾಮಾಯಣ ಇವು ಇವರ ಕೃತಿಗಳು.

ಗೌರವ, ಪ್ರಶಸ್ತಿ-ಪುರಸ್ಕಾರಗಳು

೧೯೬೭ರಲ್ಲಿ ರಾಜ್ಯ ಸರ್ಕಾರದಿಂದ ಆದರ್ಶ ಶಿಕ್ಷಕ ಪ್ರಶಸ್ತಿ ಹಾಗೂ ಭಾರತ ಸರ್ಕಾರದಿಂದ ರಾಷ್ಟ್ರಪತಿಧ್ಯಕ್ಷರ ಪ್ರಶಸ್ತಿಗೆ ಪಾತ್ರರಾದರು. ೧೯೭೦ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿತು. ಇವರಿಗೆ ಇವರ ಅಬಿಮಾನಿ ಬಳಗ ಮಿರ್ಜಿ ಅಣ್ಣಾರಾಯ ಎಂಬ ಸಂಭಾವನ ಗ್ರಂಥವನ್ನು ಅರ್ಪಿಸಿದ್ದಾರೆ.



**ರಂ.ಶ್ರೀ ಮುಗಳಿ**

ರಂ.ಶ್ರೀ. ಮುಗುಳಿಯವರು ಧಾರವಾಡ ಜಿಲ್ಲೆಯ ಹೊಳೆ ಆಲೂರಿನಲ್ಲಿ ೧೯೦೬ರಲ್ಲಿ ಜೂನ್ ೧೫ ರಂದು ಜನಿಸಿದರು. ಇವರ ತಂದೆ ಶ್ರೀನಿವಾಸರಾಯರು. ತಾಯಿ ಕಮಲಮ್ಮನವರು. ರಸಿಕರಂಗ ಎಂಬುದು ಇವರ ಕಾವ್ಯನಾಮ. ರಂಗನಾಥ ಶ್ರೀನಿವಾಸ ಇವರ ಪೂರ್ಣ ಹೆಸರು. ಇವರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಬಿಜಾಪುರದ ಬಾಗಲಕೋಟೆಗಳಲ್ಲಿ ನಡೆಯಿತು. ೧೯೨೪ರಲ್ಲಿ ಧಾರವಾಡಕ್ಕೆ ಬಂದು ಕರ್ನಾಟಕ ಕಾಲೇಜಿನಲ್ಲಿ ೧೯೨೮ರಲ್ಲಿ ಬಿ.ಎ. (ಸಂಕೃತ ಅನರ್ಸ್) ೧೯೩೦ರಲ್ಲಿ ಎಂ.ಎ. (ಕನ್ನಡ) ಪದವಿಯನ್ನು ಪಡೆದರು. ಪಡೆದರು. ಇಂಗ್ಲಿಷ್‌ನಲ್ಲಿಯೂ ಎಂ.ಎ. ಪದವಿಯನ್ನು ಪಡೆದರು. ಅನಂತರ ಮುಂಬಯಿಯಲ್ಲಿ ಬಿ.ಟಿ. ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿದರು. ಅನಂತರ ೧೯೩೨ರಲ್ಲಿ ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಹೈಸ್ಕೂಲಿನಲ್ಲಿ ಶಿಕ್ಷಕರಾದರು. ೧೯೩೩ರಲ್ಲಿ ಸಾಂಗ್ಲಿಯ ವಿಲಿಂಗ್ಡನ್ ಕಾಲೇಜಿನ ಪ್ರಾಂಶುಪಾಲರಾದರು. ೧೯೬೬ರಲ್ಲಿ ಈ ಹುದ್ದೆಯಿಂದ ನಿವೃತ್ತರಾದರು. ಕರ್ನಾಟಕ ಸರ್ಕಾರದ ಸಾಹಿತ್ಯ, ಸಂಸ್ಕೃತಿ ಇಲಾಖೆಯ



**ಎ.ಎನ್. ಮೂರ್ತಿರಾವ್**

ಅಕ್ಕಿಹೆಬ್ಬಾಳು ನರಸಿಂಹರಾವ್ ಮೂರ್ತಿರಾವ್ ಇವರ ಪೂರ್ಣ ಹೆಸರು. ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಅಕ್ಕಹೆಬ್ಬಾಳುವಿನಲ್ಲಿ ೧೯೦೦ ಜೂನ್ ೧೬ರಂದು ಜನಿಸಿದರು. ತಂದೆ ಸುಬ್ಬರಾಯ ತಾಯಿ ಪುಟ್ಟಮ್ಮ. ಮಾಧ್ಯಮಿಕ ಹಂತದವರೆಗೆ ಅಕ್ಕಿಹೆಬ್ಬಾಳುವಿನಲ್ಲಿ ಅಭ್ಯಾಸ ಮಾಡಿದರು. ಮೈಸೂರಿನ ವೆಸ್ಲಿಯನ್ ಹೈಸ್ಕೂಲಿನಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಎಂ.ಎ. ಪದವಿ ಪಡೆದರು. ಎಸ್. ರಾಧಾಕೃಷ್ಣನ್ ಅವರು ಇವರಿಗೆ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ಬಿ.ಎಂ. ಶ್ರೀಕಂಠಯ್ಯನವರು ಇವರ ಗುರುಗಳಾಗಿದ್ದರು. ೧೯೨೪ರಲ್ಲಿ ಮೂರ್ತಿರಾಯರು ಮಹಾರಾಜ ಕಾಲೇಜಿನ ಇಂಗ್ಲಿಷ್ ವಿಭಾಗದಲ್ಲಿ ಟ್ಯೂಟರ್ ಆಗಿ ಕೆಲಕಾಲ ಸೇವೆ ಸಲ್ಲಿಸಿ ೧೯೨೫ರಲ್ಲಿ ಮೈಸೂರು ಮಹಾರಾಜ ಹೈಸ್ಕೂಲಿನ ಅಧ್ಯಾಪಕರಾದರು. ೧೯೨೭ರಲ್ಲಿ ಕಾಲೇಜು ಅಧ್ಯಾಪಕರಾಗಿದ್ದರು. ೧೯೪೦ರಲ್ಲಿ ಉಪ ಪ್ರಾಧ್ಯಾಪಕರಾದರು. ೧೯೪೦-೪೩ರವರೆಗೆ ಶಿವಮೊಗ್ಗದ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿದ್ದರು. ೧೯೪೩ರಲ್ಲಿ ಮೈಸೂರು ಆಕಾಶವಾಣಿಯ ಸಹಾಯಕ ನಿರ್ದೇಶಕರಾಗಿ ನೇಮಕವಾದರು. ಬೆಂಗಳೂರಿನ



**ಮುದವೀಡು ಕೃಷ್ಣರಾಯರು**

ಮುದವೀಡು ಕೃಷ್ಣರಾಯರು ೧೮೭೪ರ ಜುಲೈ ೨೪ ರಂದು ಆಂದ್ರ ಪ್ರದೇಶದ ಕಡಪಾ ಜಿಲ್ಲೆಯ ಮುದವೀಡುವಿನಲ್ಲಿ ಜನಿಸಿದರು. ತಂದೆ ಹನುಮಂತರಾಯ; ತಾಯಿ ಗಂಗಾಬಾಯಿ. ಕೃಷ್ಣರಾಯರ ವಿದ್ಯಾಭ್ಯಾಸ ಕಾರವಾರ ಮತ್ತು ಧಾರವಾಡಗಳಲ್ಲಿ ನಡೆಯಿತು. ಇವರು ಬಾಲಗಂಗಾಧರ ತಿಲಕರ ಪ್ರಭಾವಕ್ಕೊಳಗಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ಪಾನನಿರೋಧ ಚಳುವಳಿಯಲ್ಲಿ

ನಿರ್ದೇಶರಾಗಿ ಆರು ತಿಂಗಳ ಕಾಲ ಸೇವೆ ಸಲ್ಲಿಸಿದರು. ೧೯೬೭ ರಿಂದ ೧೯೭೦ರವರೆಗೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು. ೧೯೪೦-೪೩ರವರೆಗೆ ಜೀವನ ಪತ್ರಿಕೆಯ ಸಂಪಾದಕರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ವಿವಿಧ ಯೋಜನೆಗಳಲ್ಲಿ ಮಾರ್ಗದರ್ಶಕರಾಗಿ ಕೆಲಸ ಮಾಡಿದರು.
ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿದ ಪ್ರಸಿದ್ಧ ವಿದ್ವಾಂಸರು. ಧಾರವಾಡದ ಗೆಳೆಯರ ಗುಂಪಿನ ಬೇಂದ್ರೆ ಮತ್ತು ಗೋಕಾಕರ ಸಹಚರ್ಯೆಯಿಂದ ಕಾವ್ಯ ಸಾಧನೆಯಲ್ಲಿ ತೊಡಗಿದರು. ತಮ್ಮ ವಿಶಿಷ್ಟ ವ್ಯಕ್ತಿತ್ವವನ್ನು ಅರಳಿಸಿಕೊಂಡ ಇವರು ಸಾಹಿತ್ಯ ಚರಿತ್ರೆಕಾರರಾಗಿ ವಿಮರ್ಶಕರಾಗಿ ಕನ್ನಡ ನಾಡಿನಲ್ಲಿ ಸುವಿಖ್ಯಾತರಾಗಿದ್ದು ಅನೇಕ ಗ್ರಂಥಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ. ಇವರು ೧೯೯೩ರ ಫೆಬ್ರವರಿ ೨೦ ರಂದು ನಿಧನರಾದರು.

ಕೃತಿಗಳು
ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಸಾಹಿತ್ಯ ಚರಿತ್ರೆ ಅದರ ರೂಪಗಳು, ಕೃತಿರತ್ನ, ತವನಿಧಿ, ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು, ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ, ಬಾಸಿಂಗ, ಅಪಾರ ಕರುಣೆ, ಓಂ ಅಶಾಂತಿ, ಅನ್ನ, ಕಾರಣ ಪುರುಷ, ಎತ್ತಿದ ಕೈ, ಮನೋರಾಜ್ಯ, ಧನಂಜಯ್ಯ, ಹೆರಿಟೇಜ್ ಆಫ್ ಕರ್ನಾಟಕ, ಹಿಸ್ಟರಿ ಆಫ್ ಕನ್ನಡ ಲಿಟರೇಚರ್ ಇವು ಇವರ ಕೃತಿಗಳು.

ಗೌರವ, ಪ್ರಶಸ್ತಿ-ಪುರಸ್ಕಾರಗಳು
೧೯೪೧ರಲ್ಲಿ ಹೈದರಾಬಾದಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಇವರು ನಾಟಕಗೋಷ್ಠಿಯ ಅಧ್ಯಕ್ಷರಾಗಿದ್ದರು.
೧೯೫೫ರಲ್ಲಿ ಮೈಸೂರಿನಲ್ಲಿ ನಡೆದ ೩೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ವಿಮರ್ಶಾ ಗೋಷ್ಠಿಯ ಅಧ್ಯಕ್ಷರಾಗಿದ್ದರು.
೧೯೫೬ರಲ್ಲಿ ಕನ್ನಡ ಸಾಹಿತ್ಯ ಚರಿತ್ರೆ ಕೃತಿಗೆ ಪುಣೆ ವಿಶ್ವವಿದ್ಯಾಲಯವು ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿತು.
೧೯೫೬ರಲ್ಲಿ ಕನ್ನಡ ಸಾಹಿತ್ಯ ಚರಿತ್ರೆ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
೧೯೬೩ರಲ್ಲಿ ಸಿದ್ಧಗಂಗಾದಲ್ಲಿ ನಡೆದ ೪೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.
೧೯೬೪ರಲ್ಲಿ ಇಂಕ್ಲಾ ಸಂಸ್ಥೆಯ ಪರವಾಗಿ ಫೆಬ್ರವರಿಯಲ್ಲಿ ನಡೆದ ಜಾಗತಿಕ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಪ್ರತಿನಿಧಿಯಾಗಿ ಇವರು ಭಾಗವಹಿಸಿದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದರು.
೧೯೭೬ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಸೆಂಟ್ರಲ್ ಕಾಲೇಜಿನ ಅಧ್ಯಾಪಕರಾಗಿ ಆರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ೧೯೫೫ರಲ್ಲಿ ನಿವೃತ್ತರಾದರು. ೧೯೫೯ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ, ೧೯೫೪ರಿಂದ ೫೬ ರವರೆಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಂಚಾಲಕ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಇವರು ಶತಾಯುಷಿಯೂ, ತಮ್ಮ ೧೦೧ ನೇ ವಯಸ್ಸಿನಲ್ಲಿ ನಿಧನರಾದರು. ಕನ್ನಡದ ಹೆಸರಾಂತ ಹಿರಿಯ ವಿಮರ್ಶಕರು, ವಿದ್ವಾಂಸರು, ಪ್ರಬಂಧಕಾರರು ಆದ ಮೂರ್ತಿರಾಯರು ಕನ್ನಡ ಸಾಹಿತ್ಯ ಲೋಕಕ್ಕೆ ತನ್ನದೇ ಆದ ಸೇವೆಯನ್ನು ಸಲ್ಲಿಸಿದ್ದಾರೆ.

ಕೃತಿಗಳು
ಅಪರ ವಯಸ್ಕನ ಅಮೇರಿಕಾ ಯಾತ್ರೆ, ಹಗಲುಗನಸು, ಪೂರ್ವ ಸೂರಿಗಳೊಡನೆ ಅಲೆಯುವ ಮನ, ಮಿನುಗು, ಮಿಂಚು, ಚಿತ್ರಗಳು ಪತ್ರಗಳು, ಮಾಸ್ತಿಯವರ ಕತೆಗಳು, ಷೇಕ್ಸ್‌ಪಿಯರ್, ಸಂಜೆಗಣ್ಣಿನ ಹಿನ್ನೋಟ, ಹೆಬ್ಬಾಳು, ದೇವರು, ಸಾಹಿತ್ಯ ಮತ್ತು ಸತ್ಯ, ಜನತಾ ಜನಾರ್ಧನ, ಇಂಡಿಯಾ ಇಂದು ಮತ್ತು ನಾಳೆ, ವಿಮರ್ಶಾತ್ಮಕ ಪ್ರಬಂಧಗಳು, ಚಂಡಮಾರುತ, ಪಾಶ್ಚಾತ್ಯ ಸಣ್ಣ ಕತೆಗಳು, ಆಷಾಢಭೂತಿ, ಸಾಕ್ರೇಟೀಸನ ಕೊನೆಯ ದಿನಗಳು, ಹವಳದ ದ್ವೀಪ, ಸಮಗ್ರ ಲಲಿತ ಪ್ರಬಂಧಗಳು ಮುಂತಾದವು.
ಗೌರವ, ಪ್ರಶಸ್ತಿ- ಪುರಸ್ಕಾರಗಳು,
ಮೈಸೂರು ವಿಶ್ವವಿದ್ಯಾಲಯ, ಹಂಪಿ ವಿಶ್ವವಿದ್ಯಾಲಯ ಇವರಿಗೆ ಗೌರ ಡಿ.ಲಿಟ್ ಪದವಿ ನೀಡಿದೆ.
ಇವರ ಚಿತ್ರಗಳು ಪತ್ರಗಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.
೧೯೭೪ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.
೧೯೮೪ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ
೧೯೯೨ ರಲ್ಲಿ ಪಂಪ ಪ್ರಶಸ್ತಿ
ಕನ್ನಡ ವಿಶ್ವವಿದ್ಯಾಲಯ ಹಂಪಿಯ ನಾಡೋಜ ಗೌರವ ಪ್ರಶಸ್ತಿ
೧೯೮೪ರಲ್ಲಿ ಕೈವಾರದಲ್ಲಿ ಜರುಗಿದ ೫೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಇವರು ವಹಿಸಿದ್ದರು.

ಭಾಗವಹಿಸಿದ್ದಕ್ಕಾಗಿ ೨ ವರ್ಷ ಸೆರೆಮನೆವಾಸವನ್ನು ಅನುಭವಿಸಿದರು. ೧೯೨೪ರಲ್ಲಿ ಬೆಳಗಾವಿಯಲ್ಲಿ ಪಡೆದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಹಿಂದಿ, ಇಂಗ್ಲಿಷ್, ಸಂಸ್ಕೃತ ಹಾಗೂ ಕನ್ನಡದಲ್ಲಿ ಒಳ್ಳೆಯ ಪರಿಶ್ರಮವಿತ್ತು. ಕೃಷ್ಣರಾಯರು ಪತ್ರಿಕೋದ್ಯಮದಲ್ಲೂ ಆಸಕ್ತಿಯನ್ನೊಂದಿದ್ದರು. ಒಳ್ಳೆಯ ಲೇಖಕರೂ ಆಗಿದ್ದರು. ಇವರ ಲೇಖನಗಳಲ್ಲಿ ರಾಷ್ಟ್ರಾಭಿಮಾನ ಎದ್ದುಕಾಣುತ್ತಿತ್ತು. ಇವರು 'ಕನಾಟಕ ವೃತ್ತ' ಪತ್ರಿಕೆಯನ್ನಾರಂಭಿಸಿ ಸುಮಾರು ೧೮ ವರ್ಷಗಳ ಕಾಲ ಯಶಸ್ವಿಯಾಗಿ ನಿರ್ವಹಿಸಿದರು. 'ಧನಂಜಯ' ಎಂಬ ಇನ್ನೊಂದು ಪತ್ರಿಕೆಯನ್ನು ಆರಂಭಿಸಿದರು. ರಾಷ್ಟ್ರೀಯ ನಾಯಕರು ಕರ್ನಾಟಕಕ್ಕೆ ಆಗಮಿಸಿದಾಗ ಅವರ ಭಾಷಣಗಳನ್ನು ಕನ್ನಡಕ್ಕೆ ಇವರೇ ತರ್ಜುಮೆಗೊಳಿಸುತ್ತಿದ್ದರು. ಇವರು ೧೯೪೭ರ ಸೆಪ್ಟೆಂಬರ್ ೨ ರಂದು ನಿಧನರಾದರು.

ಕೃತಿಗಳು
ವಿಕ್ರಮ, ಶಶಿಕಲಾ, ಸುಭದ್ರಾ, ಚಿತ್ತೂರು ಮುತ್ತಿಗೆ, ಪ್ರೇಮಭಂಗ, ರಾಮರಾಜವಿಯೋಗ, ಮೊದಲಾದವು.


ಗೌರವ, ಪ್ರಶಸ್ತಿ- ಪುರಸ್ಕಾರಗಳು
೧೯೩೯ರಲ್ಲಿ ಬೆಳಗಾವಿಯಲ್ಲಿ ಜರುಗಿದ ೨೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಇವರು ವಹಿಸಿದ್ದರು.



**ಯಶವಂತ ಚಿತ್ತಾಲ**
ಯಶವಂತ ಚಿತ್ತಾಲರು ೧೯೨೮ರ ಆಗಸ್ಟ್ ೩ರಂದು



**ಎಸ್.ವಿ. ರಂಗಣ್ಣ**
ಎಸ್.ವಿ. ರಂಗಣ್ಣನವರು ೧೮೯೮ರ ಡಿಸೆಂಬರ್ ೨೪



**ರೆವರೆಂಡ್**



ಉತ್ತರ ಕನ್ನಡ ಜಿಲ್ಲೆಯ ಹನೇಹಳ್ಳಿಯಲ್ಲಿ ಜನಿಸಿದರು. ತಂದೆ ವಿಠೋಬಾ ಪುಂಡಲೀಕ ಚಿತ್ತಾಲ, ತಾಯಿ ರುಕ್ಮಿಣಿ. ಕನ್ನಡದ ಪ್ರಸಿದ್ಧ ಕವಿ ಗಂಗಾಧರ ಚಿತ್ತಾಲ ಇವರ ಅಣ್ಣ. ಇವರ ಪ್ರಾಥಮಿಕ ವಿದ್ಯಾಭ್ಯಾಸ ಹನೇಹಳ್ಳಿ ಮತ್ತು ಕುಮಟಾಗಳಲ್ಲಿ ನಡೆಯಿತು. ಉನ್ನತ ವಿದ್ಯಾಭ್ಯಾಸಕ್ಕಾಗಿ ಧಾರವಾಡ, ಮುಂಬೈ ಮತ್ತು ಅಮೇರಿಕಾದ ನ್ಯೂಜೆರ್ಸಿಗಳಲ್ಲಿ ನಡೆಯಿತು. ಯಶವಂತ ಚಿತ್ತಾಲರ ಮೇಲೆ ಗೌರೀಶ ಕಾಯ್ಕಿಣಿಯವರು, ಗೆಳೆಯ ಶಾಂತಿನಾಥ ದೇಸಾಯಿಯವರು ಅಗಾಧವಾದ ಪ್ರಭಾವವನ್ನು ಬೀರಿದರು. ಚಿತ್ತಾಲರು ಚಿತ್ರಕಲೆಯ ಬಗ್ಗೆ ವಿಶೇಷವಾದ ಆಸಕ್ತಿ ಹೊಂದಿದ್ದರು. ಚಿತ್ರಕಲೆಯಲ್ಲಿ ವಿಶೇಷ ಪರಿಣತಿ ಪಡೆಯಲು ಮುಂಬಯಿಯ 'ಕಲಾನಿಕೇತನ' ಸಂಜೆ ತರಗತಿಗಳಿಗೆ ಸೇರಿದರು. ಚಿತ್ತಾಲರ ಮೇಲೆ ಎಂ.ಎನ್.ರಾಯ್ ಅವರು ಕೂಡ ಪ್ರಭಾವ ಬೀರಿದರು. ಇವೆಲ್ಲವುಗಳ ಜೊತೆಗೆ ತಮ್ಮ ಆಯ್ಕೆಯ ವಿಷಯವಾದ ಪ್ಲಾಸ್ಟಿಕ್ ತಂತ್ರಜ್ಞಾನ ವಿಷಯದಲ್ಲಿ ಪದವಿ ಪಡೆದರು. ಅನಂತರ ೧೯೫೩ರಿಂದ ಮುಂಬಯಿಯ ಬೇಕ್‌ಲೈಟ್ ಹೈಲ್ಯಾಮ್ ಲಿಮಿಟೆಡ್ ಸಂಸ್ಥೆಯಲ್ಲಿ ಉನ್ನಡ ಹುದ್ದೆಯ ಸೇವೆ ಸಲ್ಲಿಸಿದರು. ಇಂಡಿಯನ್ ಇನ್‌ಸ್ಟಿಟ್ಯೂಟ್ ಆರ್ಫ ಟೆಕ್ನಾಲಜಿ ಹಾಗೂ ಪ್ಲಾಸ್ಟಿಕ್ ಅಂಡ್ ರಬ್ಬರ್ ಸಂಸ್ಥೆಯಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಇವರು ಮುಂಬಯಿಯಲ್ಲಿ ಇಂಡಿಯನ್ ಪ್ಲಾಸ್ಟಿಕ್ ಮತ್ತು ಅಮೇರಿಕಾದ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಸಂಸ್ಥೆಯಲ್ಲಿ ಹಲವಾರು ಸಂಶೋಧನೆಗಳನ್ನು ನಡೆಸಿದ್ದಾರೆ. ೧೯೭೨ರಲ್ಲಿ ಅಮೆರಿಕಾ ಸ್ಟೀವ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಅಧ್ಯಯನ ನಡೆಸಿ ರಾಸಾಯನ ತಂತ್ರಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ವೃತ್ತಿಯಿಂದ ರಸಾಯನ ವಿಜ್ಞಾನದ ತಂತ್ರಜ್ಞರಾದರೂ ಇವರ ಆಸಕ್ತಿ ಕನ್ನಡ ಸಾಹಿತ್ಯದ ಮೇಲಿತ್ತು. ಇವರಿಗಿರುವ ವೃತ್ತಿ-ಸಂಬಂಧವಾದ ಪಾಶ್ಚಾತ್ಯ, ಪೌರಸ್ತ್ಯ ದೇಶಗಳ ಸಂಚಾರ, ಅಲ್ಲಿಯ ಸಾಹಿತ್ಯ, ಸಂಸ್ಕೃತಿ, ಬದುಕು, ಮೌಲ್ಯಗಳ ಪರಿಚಯ ಮತ್ತು ತೌಲನಿಕ ಚಿಂತನೆ ಇವರ ಸಾಹಿತ್ಯ ನಿರ್ಮಿತಿಗೆ ಹರಹನ್ನು, ಆಳವನ್ನು ತಂದುಕೊಟ್ಟಿವೆ. ಮನಃಶಾಸ್ತ್ರ, ರಾಜಕೀಯ, ಅರ್ಥಶಾಸ್ತ್ರ, ಮಾನವಶಾಸ್ತ್ರ ಇತ್ಯಾದಿ ಅನೇಕ ಅಧ್ಯಯನ ಕ್ಷೇತ್ರಗಳಿಗೆ ಮನಸ್ಸು ತೆರೆದುಕೊಂಡಿರುವ ಇವರು ಅನೇಕ ಪಾಶ್ಚಾತ್ಯ ಚಿಂತಕರ ವಿಚಾರಗಳನ್ನು ಆಸಕ್ತಿಯಿಂದ ಅಧ್ಯಯನ ಮಾಡಿದ್ದಾರೆ. ಈ ಎಲ್ಲಾ ಹಿನ್ನೆಲೆಯಿಂದಾಗಿ ಇವರ ಕೃತಿಗಳಲ್ಲಿ ಸೃಜನಶೀಲತೆ ಪುಷ್ಟಿಗೊಂಡು ಮೈದಳೆದಿದೆ.

ಕೃತಿಗಳು

ಸಂದರ್ಶನ, ಅಂಬೋಲೀನ, ಆಟ, ಆಯ್ದ ಕತೆಗಳು, ಕತೆಯಾದಳು ಹುಡುಗಿ, ಬೇನ್ಯಾ, ಮೂರು ದಾರಿಗಳು, ಶಿಕಾರಿ, ಛೇದ, ಪುರುಷೋತ್ತಮ, ಕೇಂದ್ರಬಿಂದು.

ಗೌರವ, ಪ್ರಶಸ್ತಿ-ಪುರಸ್ಕಾರಗಳು

೧೯೮೩ ರಲ್ಲಿ ಇವರ ಕಥೆಯಾದಳು ಹುಡುಗಿ ಕಥಾಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ



ರಂದು ಹಾಸನ ಜಿಲ್ಲೆಯ ಸಾಲಗಾಮೆಯಲ್ಲಿ ಜನಿಸಿದರು. ತಂದೆ ವೆಂಕಟಸುಬ್ಬಯ್ಯ, ತಾಯಿ ವೆಂಕಟಲಕ್ಷ್ಮಮ್ಮ ಇವರ ಪೂರ್ಣ ಹೆಸರು ಸಾಲಿಗ್ರಾಮ ವೆಂಕಟಸುಬ್ಬಯ್ಯ ರಂಗಣ್ಣ. ಇವರ ಪ್ರೌಢಶಾಲಾ ವಿದ್ಯಾಭ್ಯಾಸ ಚಿಕ್ಕಮಗಳೂರಿನಲ್ಲಿಯೂ, ಇಂಟರ್‌ಮಿಡಿಯಟ್ ಮತ್ತು ಬಿ.ಎ. ಪದವಿಯ ವಿದ್ಯಾಭ್ಯಾಸ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ನಡೆಯಿತು. ಇವರಿಗೆ ಇಂಗ್ಲಿಷ್ ಸಾಹಿತ್ಯದಲ್ಲಿ ವಿಶೇಷವಾದ ಆಸಕ್ತಿಯಿತ್ತು. ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಎ.ಆರ್. ಕೃಷ್ಣಶಾಸ್ತ್ರಿಗಳು ರಂಗಣ್ಣನವರಿಗೆ ಕನ್ನಡ ಸಾಹಿತ್ಯದಲ್ಲಿ ಅಭಿಮಾನ ಮೂಡುವಂತೆ ಮಾಡಿದರು. ೧೯೧೯ರಲ್ಲಿ ಬಿ.ಎ. ಪದವಿ ಪಡೆದ ಇವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರೊಂದಿಗೆ ೧೯೨೧ರಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಥಮ ಶ್ರೇಣಿಯಲ್ಲಿ ಎಂ.ಎ. ಪದವಿ ಪಡೆದುಕೊಂಡರು. ೧೯೨೩ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾದರು. ೧೯೨೮ -೩೩ ರವರೆಗೆ ತುಮಕೂರಿನ ಇಂಟರ್‌ಮೀಡಿಯೆಟ್ ಕಾಲೇಜಿನ ಮೇಲ್ವಿಚಾರಕರಾಗಿದ್ದು, ಅದೇ ವರ್ಷ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಹಿಂದಿರುಗಿದರು. ಉಪಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಬಂದರು. ಅನಂತರ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿದ್ದಲ್ಲದೆ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿದರು. ೧೯೪೫ರಲ್ಲಿ ನಿವೃತ್ತರಾದರು. ಎಸ್.ವಿ. ರಂಗಣ್ಣನವರು ಕನ್ನಡ-ಇಂಗ್ಲಿಷ್ ಭಾಷೆಗಳೆರಡರಲ್ಲೂ ವಿದ್ವಾಂಸರಾಗಿದ್ದರು. ಕನ್ನಡದ ಅದ್ವಿತೀಯ ಪ್ರತಿಭೆ ಅಪಾರ ಪಾಂಡಿತ್ಯವನ್ನು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳೆರಡರಲ್ಲೂ ಗಳಿಸಿದ್ದರು. ಕನ್ನಡ ಸಾಹಿತ್ಯ ಲೋಕಕ್ಕೆ ಅವರು ನೀಡಿರುವ ಕೊಡುಗೆ ಅಪಾರವಾದದ್ದು. ಬಿ.ಎಂ. ಶ್ರೀಕಂಠಯ್ಯನವರ ಪ್ರೇರಣೆ ಕನ್ನಡದ ಸಾಹಿತ್ಯ ರಚನೆಗೆ ಸಹಾಯಕವಾಗಿತ್ತು. ೧೯೨೩ರಲ್ಲಿ ರಂಗಣ್ಣನವರು ಸ್ಕೌಟ್ ಚಳುವಳಿಯಲ್ಲಿ ಭಾಗವಹಿಸಿ ಕೊನೆಗಾಲದವರೆಗೂ ಅವರಲ್ಲಿ ಆಸಕ್ತಿಯಿತ್ತು. ರಂಗಣ್ಣನವರು ೧೯೮೭ರ ಫೆಬ್ರವರಿ ೧೭ ರಂದು ಮೈಸೂರಿನಲ್ಲಿ ನಿಧನ ಹೊಂದಿದರು.

ಕೃತಿಗಳು

ಕುಮಾರವ್ಯಾಸ, ರುಚಿ, ಶೈಲಿ, ವಿಡಂಬನೆ, ಹಾಸ್ಯ ಹೊನ್ನಶೂಲ, ಕಾಳಿದಾಸನ ನಾಟಕಗಳ ವಿಮರ್ಶೆ, ರಂಗಬಿನ್ನಪ, ಮರು ಬಿನ್ನಪ, ಪಾಶ್ಚಾತ್ಯ ಗಂಭೀರ ನಾಟಕಗಳು, ಕವಿ ಕಥಾಮೃತ, ಕೋಲ್‌ಕೋಲ್ ಕೂಡಿಬರಲಿ, ನಾಟು ನುಡಿ, ಹರಿಶ್ಚಂದ್ರ ಕಾವ್ಯ, ಉತ್ತರ ಕುಮಾರ ಕಿರುನಾಟಕಗಳು ಇತ್ಯಾದಿ.

ಇಂಗ್ಲಿಷಿನಲ್ಲಿ ಬಿ.ಎಂ. ಶ್ರೀಕಂಠಯ್ಯ ದಿಲೇಡ್ ಅಂಡ್ ದಿ ರಿಂಗ್ಸ್ ಓಲ್ಡ್‌ಟೇಲ್ಸ್ ರಿಟೋಲ್ಡ್ ಅನ್ ದಿ ಸೆಲ್ಫ್.

ಗೌರವ, ಪ್ರಶಸ್ತಿ-ಪುರಸ್ಕಾರಗಳು


೧೯೬೫ರಲ್ಲಿ 'ರಂಗಬಿನ್ನಪ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು.

೧೯೭೬ರಲ್ಲಿ ಶಿವಮೊಗ್ಗದಲ್ಲಿ ನಡೆದ ೪೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.



**ಫರ್ಡಿನೆಂಡ್ ಕಿಟೆಲ್**

ರೆವರೆಂಡ್ ಫರ್ಡಿನೆಂಡ್ ಕಿಟೆಲರು ೧೮೩೨ರ ಏಪ್ರಿಲ್ ೮ ರಂದು ಜರ್ಮನಿಯ ರಾಸ್ಟರ್ ಹಾಫ್ ಎಂಬ ಊರಿನಲ್ಲಿ ಜನಿಸಿದರು. ತಂದೆ ಗಾಟಫ್ರೀಟ್ ಕ್ರಿಶ್ಚಿಯನ್ ಕಿಟೆಲ್. ತಾಯಿ ತೆಯಡೋವ್ ಹೆಲೆನ್ ಹಾರ್ಬಟ್ ಫರ್ಡಿನೆಂಡ್ ಕಿಟೆಲರ ಶಾಲಾ ಶಿಕ್ಷಣ ಅಜ್ಜನ ಊರಾದ ಆರಿಶ್‌ನಲ್ಲಿ ನಡೆಯಿತು. ಅನಂತರ ಸ್ವಟ್ಜರ್ಲೆಂಡಿನ ಬಾಸೆಲ್ ನಗರದ ೧೮೫೩ರಲ್ಲಿ ಮಿಷನ್ ಸ್ಕೂಲನ್ನು ಸೇರಿ ಅಲ್ಲಿಯ ಶಿಕ್ಷಣವನ್ನು ಮುಗಿಸಿ ಗುರುದೀಕ್ಷೆ ಪಡೆದುಕೊಂಡರು. ಮಿಷನ್ ಸಂಸ್ಥೆ ಅವರನ್ನು ಭಾರತಕ್ಕೆ ಕಳುಹಿಸಿಕೊಟ್ಟಿತು. ೧೮೫೪ರ ಅಕ್ಟೋಬರ್ ೨೦ ರಂದು ಮಂಗಳೂರಿಗೆ ಮೊದಲು ಬಂದರು. ಅನಂತರ ಧಾರವಾಡದಲ್ಲಿ ನೆಲೆಸಿದರು. ಕಿಟೆಲರಿಗೆ ಗ್ರೀಕ್, ಲ್ಯಾಟಿನ್, ಹೀಬ್ರೂ, ಫ್ರೆಂಚ್ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪ್ರಾವೀಣ್ಯತೆ ಇತ್ತು. ಅದೇ ರೀತಿಯಲ್ಲಿ ಸ್ಥಳೀಯ ಭಾಷೆಯನ್ನು ಕಲಿಯರು ಆಸಕ್ತಿವಹಿಸಿದರು. ಆ ಕಾರಣಕ್ಕಾಗಿ ಕಿಟೆಲರು ಆ ಕಾಲಕ್ಕೆ ಶಿಕ್ಷಣಕ್ಕೆ ಹೆಸರುವಾಸಿಯಾಗಿದ್ದ ಮಂಗಳೂರಿಗೆ ಹೋದರು. ಅಲ್ಲಿ ಕನ್ನಡ ಭಾಷೆಯ ಅಧ್ಯಯನ ಮಾತ್ರವಲ್ಲದೆ ಜೊತೆಯಲ್ಲಿ ಸಂಸ್ಕೃತ, ತುಳು, ಮಲೆಯಾಳಂ ಭಾಷೆಗಳನ್ನು ಪರಿಚಯ ಮಾಡಿಕೊಂಡರು. ೧೮೬೦ರ ನವೆಂಬರ್‌ನಲ್ಲಿ ಪೌಲಿನ್ ಈತ ಎಂಬ ಜರ್ಮನ್ ಮಹಿಳೆಯೊಡನೆ ವಿವಾಹವಾದರು. ವಿವಾಹವಾದ ನಾಲ್ಕು ವರ್ಷಗಳಲ್ಲಿ ಪತ್ನಿಯನ್ನು ಕಳೆದುಕೊಳ್ಳಬೇಕಾಯಿತು. ಪಾಲಿರಾಐತ್ ತೀರಿಕೊಂಡ ಮೇಲೆ ಜರ್ಮನಿಗೆ ಹೋದರು. ೧೮೬೬ ರಲ್ಲಿ ಆಕೆಯ ತಂಗಿ ಜಾಲಿಯನ್ನು ಮದುವೆಯಾಗಿ ೧೮೬೭ರಲ್ಲಿ ಭಾರತಕ್ಕೆ

| | | |
|---|---|---|
| ಪ್ರಶಸ್ತಿ ಲಭಿಸಿದೆ.<br>೨೦೦೮ರಲ್ಲಿ ಪಂಪ ಪ್ರಶಸ್ತಿ ಲಭಿಸಿದೆ. | ೧೯೩೭ರ ಮಾರ್ಚ್ ೨೧ ರಿಂದ ೧೯೩೮ರ ಜುಲೈ ೨೩ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದರು.<br>೧೯೫೪ರಲ್ಲಿ ಇವರಿಗೆ 'ಬಾಗಿನ' ಎಂಬ ಅಭಿನಂದನ ಗ್ರಂಥದ ಸಮರ್ಪಣೆ. | ಬಂದರು.<br>೧೮೮೩-೮೪ರವರೆಗೆ ಧಾರವಾಡದ ಬಾಸೆಲ್ ಮಿಷನ್ ಹೈಸ್ಕೂಲಿನ ಪ್ರಾಂಶುಪಾಲರಾಗಿ ಕಿಟೆಲರು ಕಾರ್ಯ ನಿರ್ವಹಿಸಿದರು. ೧೮೭೨ ರಿಂದ ೧೮೯೪ರ ವರೆಗೆ ನಿಘಂಟು ರಚನೆಯಲ್ಲಿ ತೊಡಗಿದ್ದರು. ಈ ಮಹಾನ್ ಕಾರ್ಯಕ್ಕಾಗಿ ಜರ್ಮನಿಯ ಟ್ಯುಬಿಂಗನ್ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು. ಇದು ಕನ್ನಡ ಕಾರ್ಯಕ್ಕೆ ಸಂದ ಪ್ರಪಥಮ ಗೌರವ ಡಾಕ್ಟರೇಟ್ ಪದವಿಯಿದು. ೧೯೦೩ ರ ಅಕ್ಟೋಬರ್ ೧೯ ರಂದು ಟ್ಯುಬಿಂಗನ್ ನಗರದಲ್ಲಿ ನಿಧನ ಹೊಂದಿದರು.<br><br>ಕೃತಿಗಳು<br>ಹಳಗನ್ನಡದ ಸಂಕ್ಷಿಪ್ತ ವ್ಯಾಕರಣ ಸೂತ್ರಗಳು, ಸಣ್ಣ ಕರ್ನಾಟಕ ಕಾವ್ಯಮಾಲೆ, ಕಾವ್ಯಮಂಜರಿ, ಕೇಶಿರಾಜನ ಶಬ್ದಮಣಿ ದರ್ಪಣ, ಕರ್ನಾಟಕ ಕಾವ್ಯಮಾಲೆ, ಪಂಚತಂತ್ರ ನಾಗವರ್ಮನ ಛಂದೋಂಬುಧಿ, ಕನ್ನಡ ಇಂಗ್ಲಿಷ್ ನಿಘಂಟು, ಕ್ರಿಸ್ತ ಚರಿತೆ, ಇಂಗ್ಲಿಷ್‌ನಲ್ಲಿ 'ಗ್ರಾಮರ್ ಆಫ್ ದಿ ಕನ್ನಡ ಲಾಂಗ್ವೇಜ್.<br>ಗೌರವ, ಪ್ರಶಸ್ತಿ-ಪುರಸ್ಕಾರಗಳು<br>೧೮೯೬ರ ಜೂನ್ ೬ ರಂದು ಜರ್ಮನಿಯ ಟ್ಯುಬಿಂಗನ್ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು. |
|  **ಬಿಸಿ. ರಾಮಚಂದ್ರಶರ್ಮ**<br>ಬಿ.ಸಿ. ರಾಮಚಂದ್ರಶರ್ಮ ೧೯೨೫ ನವೆಂಬರ್ ೨೮ ರಂದು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೋಗಾದಿಯಲ್ಲಿ ಜನಿಸಿದರು. ಇವರ ತಂದೆ ಚಂದ್ರಶೇಕರ ಶರ್ಮ ಬೋಗಾದಿ ಚಂದ್ರಶೇಖರ ಶರ್ಮ ರಾಮಚಂದ್ರ ಶರ್ಮ ಇವರ ಪೂರ್ಣ ಹೆಸರು. ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ಕಡು ಬಡತನದಲ್ಲಿ ಬೆಳೆಯಬೇಕಾಯಿತು. ಬೆಂಗಳೂರು, ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮುಗಿಸಿ ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎಸ್.ಸಿ.ಬಿ.ಇಡಿ. ಪದವಿಗಳನ್ನು ಗಳಿಸಿದರು. ಚಿಕ್ಕಂದಿನಲ್ಲಿ |  **ರಾಶಿ (ಶಿವರಾಂ.ಎಂ)**<br>ಶಿವರಾಂ ಎಂ. ಇವರು ೧೯೦೫ ನವೆಂಬರ್ ೧೦ ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರು 'ರಾಶಿ' ಎಂಬ ಕಾವ್ಯನಾಮದಿಂದಲೇ ಪ್ರಸಿದ್ದರು. ಶಿವರಾಂ ಅವರು ವೈದ್ಯ ಶಿಕ್ಷಣ ಪಡೆದು ಸ್ವತಂತ್ರ್ಯವಾಗಿ ಬೆಂಗಳೂರಿನಲ್ಲಿ ವೈದ್ಯ ವೃತ್ತಿಯನ್ನಾರಂಭಿಸಿ ದಕ್ಷ ವೈದ್ಯರೆಂದು ಪ್ರಖ್ಯಾತಿಯಾದರು. ವೈದ್ಯ ವೃತ್ತಿಯಷ್ಟೇ ಅಲ್ಲದೇ ಹಾಸ್ಯ ಬರವಣಿಗೆಯನ್ನು ಪ್ರವೃತ್ತಿಯನ್ನಾಗಿ ಬೆಳೆಸಿಕೊಂಡರು. ಇವರು ೧೯೪೨ರಲ್ಲಿ ಕೊರವಂಜಿ ಪತ್ರಿಕೆ ಆರಂಭಿಸಿದರು. ತಮ್ಮ ವಿಶಾಲವಾದ ಅನುಭವದ ತಲಹದಿಯ ಮೇಲೆ ಪ್ರತಿಭೆಯನ್ನು ರೂಪಿಸಿಕೊಂಡ ಇವರು ಕನ್ನಡದಲ್ಲಿ ವಿರಳವಾಗಿದ್ದ ಹಾಸ್ಯ ಸಾಹಿತ್ಯ | <br>**ಜಿ.ಪಿ.ರಾಜರತ್ನಂ**<br>ಜಿ.ಪಿ.ರಾಜರತ್ನಂರವರು ೧೯೦೮ರ ಡಿಸೆಂಬರ್ ೫ ರಂದು ರಾಮನಗರದಲ್ಲಿ ಜನಿಸಿದರು. ತಂದೆ ಜಿ.ಕೆ. ಗೋಪಾಲಕೃಷ್ಣ ಅಯ್ಯಂಗಾರ್.<br>೧೯೨೮ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಬಿ.ಎ. ಪದವಿ; |

ಎಂ.ವಿ.ಸೀತಾರಾಮಯ್ಯ ಎಂಬುವವರ ಮೂಲಕ ವಿ.ಸೀತಾರಾಮಯ್ಯ, ಬಿ.ಎಂ. ಶ್ರೀಕಂಠಯ್ಯ, ಎಂ.ಆರ್. ಶ್ರೀನಿವಾಸಮೂರ್ತಿ, ಕು.ವೆಂ. ರಾಘವಾಚಾರ್, ಎಲ್ ಗುಂಡಪ್ಪ, ಬೇಂದ್ರ ಮೊದಲಾದ ಹಲವು ಕನ್ನಡದ ದಿಗ್ಗಜರ ಸಹವಾಸದಿಂದ ಉತ್ತಮ ಸಾಹಿತ್ಯ ಪ್ರೇರಣೆ ದೊರೆಯಿತು. ಭಾರತದ ಮಕ್ಕಳ ಬುದ್ಧಿಶಕ್ತಿಯನ್ನು ಕುರಿತು ರಚಿಸಿದ ಮಹಾಪ್ರಬಂಧಕ್ಕೆ ಪಿ.ಎಚ್.ಡಿ. ಪದವಿ ಗಳಿಸಿದರು. ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದ ಇವರು ಇಥಿಯೋಪಿಯಕ್ಕೆ ತೆರಳಿ ಅಲ್ಲಿ ಕೆಲಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ವಿಶ್ವಸಂಸ್ಥೆಯ ಪರವಾಗಿ ಮನಃಶಾಸ್ತ್ರದ ಸಲಹೆಗಾರರಾಗಿ ಇಂಗ್ಲೆಂಡ್, ಜಾಂಬಿಯ ಮತ್ತು ಯುನೆಸ್ಕೊಗಳಲ್ಲಿ ಸೇವೆ ಸಲ್ಲಿಸಿದರು.

ಆಧುನಿಕ ಕನ್ನಡ ಕಾವ್ಯ ಚರಿತ್ರೆಯಲ್ಲಿ ಬಿ.ಸಿ. ರಾಮಚಂದ್ರಶರ್ಮರು ಅಗ್ರಗಣ್ಯರು. ಸುಮಾರು ಐದು ದಶಕಗಳ ಕಾಲ ಕಾವ್ಯ ರಚನೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ಶರ್ಮರಿಗೆ ಕಾವ್ಯದ ಬಗೆಗೆ ಅತೀವ ನಿಷ್ಠೆ. ಗೋಪಾಲಕೃಷ್ಣ ಅಡಿಗರು ಹೊಸ ಬಗೆಯಲ್ಲಿ ಬರೆಯಲು ಆರಂಭಿಸಿದ ಸುಮಾರಿನಲ್ಲಿ ಅವರ ಸಮಕಾಲೀನರಾಗಿ ಬರೆಯಲು ತೊಡಗಿದ ಶರ್ಮರವರು ಅಡಿಗರಿಗಿಂತ ಭಿನ್ನವಾಗಿ ನವ್ಯಕಾವ್ಯ ಮಾರ್ಗವನ್ನು ರೂಪಿಸಲು ಪ್ರಯತ್ನಿಸಿದ ಕವಿ. ಇವರು ೨೦೦೫ ಏಪ್ರಿಲ್ ೧೮ ರಂದು ನಿಧನರಾದರು.

ಕೃತಿಗಳು

ಹೃದಯಗೀತೆ, ಏಳು ಸುತ್ತಿನ ಕೋಟೆ, ಬುವಿ ನೀಡಿದ ಸ್ಫೂರ್ತಿ ಬ್ರಾಹ್ಮಣ ಹುಡುಗ, ಹೇಸರಗತ್ತೆ, ಮಾತು-ಮಾಲೆ, ದೆಹಲಿಗೆ ಬಂದ ಹೊಸವರ್ಷ, ಸಪ್ತಪದಿ, ನೂರು ಇಂಗ್ಲಿಷ್ ಕವನಗಳು, ಮಂದಾರ ಕುಸುಮ, ಏಳನೆಯ ಜೀವ, ಬೆಳಗಾಯಿತು, ಕತೆಗಾರನ ಕತೆ, ಬಾಳಸಂಜೆ, ನೀಲಿ ಕಾಗದ, ಸೆರಗಿನ ಕೆಂಡ, ನೆರಳು, ಕಾರಂಜಿ, ಫ್ರಂ ಕಾವೇರಿ ಟು ಗೋದಾವರಿ, ಮಾಸ್ತಿ, ದಿ ಹೌಸ್ ಆಫ್ ಕಾನೂರು (ಕಾನೂರು ಹೆಗ್ಗಡತಿಯ ಇಂಗ್ಲಿಷ್ ಭಾಷಾಂತರ ) ಇವು ಇವರ ಕೃತಿಗಳು.

ಗೌರವ, ಪ್ರಶಸ್ತಿ-ಪುರಸ್ಕಾರಗಳು

೧೯೮೫ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೯೨ರಲ್ಲಿ ಕಥೆಗಳ ಅನುವಾದಕ್ಕಾಗಿ ಕಥಾ ಪ್ರಶಸ್ತಿ

೧೯೯೭ರಲ್ಲಿ ರಾಜ್ಯೋತ್ಸವ ಪ್ರಶಸ್ತಿ

೧೯೯೮ರಲ್ಲಿ 'ಸಪ್ತಪದಿ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಸೃಷ್ಟಿಯಲ್ಲಿ ತೊಡಗಿದರು. ತಮ್ಮ ವೈದ್ಯ ವೃತ್ತಿಗೆ ಸಂಬಂಧಿಸಿದಂತೆಯೂ ಇವರು ಗ್ರಂಥಗಳನ್ನು ರಚಿಸಿದ್ದಾರೆ. ಇವರು ೧೯೭೮-೮೦ರ ಅವಧಿಯಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಇವರು ೧೯೮೪ ಜನವರಿ ೧೩ ರಂದು ನಿಧನರಾದರು.

ಕೃತಿಗಳು

ಮನಮಂಥನ, ಮನೋನಂದನ, ಜಗ್ಗೋಜಿ, ಬುದ್ದೋಜಿಯ ಕಥೆಗಳು, ಕೊರವಂಜಿಯ ಪಡುವಣ ಯಾತ್ರೆ, ನಮ್ಮ ಅಡಿಗೆ ಪಥ್ಯದ ಊಟ, ತುಟಿ ಮೀರಿದುದು, ಮಧುವನದಲ್ಲಿ ಮೇಳ, ಕಾರ್ತಿಕ ಸೋಮವಾರ ಮುಂತಾದವು.

ಗೌರವ, ಪ್ರಶಸ್ತಿ-ಪುರಸ್ಕಾರಗಳು

೧೯೭೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಪ್ರಶಸ್ತಿ

೧೯೭೬ರಲ್ಲಿ ಕರ್ನಾಟಕ ರಾಜ್ಯೋತ್ಸವ ಅಕಾಡೆಮಿ ಪ್ರಶಸ್ತಿ

೧೯೭೧-೭೬ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೭೬ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

೧೯೩೧ರಲ್ಲಿ ಮೈಸೂರು ಮಹಾರಾಜ ಕಾಲೇಜಿನಿಂದ ಎಂ.ಎ. ಪದವಿ ಪಡೆದರು. ಮಹಾರಾಜ ಕಾಲೇಜಿನಲ್ಲಿ ಕೆಲವು ಕಾಲ ಅಧ್ಯಾಪಕರಾಗಿದ್ದರು. ಆರಂಭದಲ್ಲಿ ಇವರು ಶಿಶುವಿಹಾರ, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಕೆಲಸ ಮಾಡಿದರು. ಅನಂತರ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಇಲಾಖೆಯಲ್ಲಿ ಇವರಿಗೊಂದು ಪಂಡಿತ ಹುದ್ದೆ ದೊರೆಯಿತು. ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿ ತಮ್ಮ ವೃತ್ತಿಜೀವನ ಆರಂಭಿಸಿದ ಇವರು ಮುಂದೆ ಕನ್ನಡ ಉಪಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸಿ ೧೯೬೪ರಲ್ಲಿ ನಿವೃತ್ತರಾದರು. ಮೈಸೂರು, ಶಿವಮೊಗ್ಗ, ತುಮಕೂರುಗಳಲ್ಲಿ ಇವರು ಸೇವೆ ಸಲ್ಲಿಸಿದರು. ಅನಂತರ ಮೂರು ವರ್ಷಗಳಲ ಕಾಲ ಯು.ಜಿ.ಸಿ. ಉಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ರಾಜರತ್ನಂರವರ ಪಾಂಡಿತ್ಯ ಬಹುಮುಖವಾದುದು. ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಳಿ, ಪ್ರಾಕೃತ, ಹಿಂದಿ ಹಾಗೂ ತೆಲುಗು ಭಾಷೆಗಳಲ್ಲಿ ಇವರಿಗೆ ಒಳ್ಳೆಯ ಪರಿಶ್ರಮವಿತ್ತು. ಇವರು ಮಾಡಿರುವ ಸಾಹಿತ್ಯ ಸೇವೆ ಕನ್ನಡ ಸಾಹಿತ್ಯ ಲೋಕಕ್ಕೆ ಗಣನೀಯ ಕೊಡುಗೆ. (ಇವರು ೧೯೭೯ ರ ಮಾಚ್ ೧೩ರಂದು ನಿಧನರಾದರು.)

ಕೃತಿಗಳು

ಚೀನಾ ದೇಶದ ಬೌದ್ಧ ಯಾತ್ರಿಕರು, ಧರ್ಮಧಾನಿ ಬುದ್ಧ, ಬುದ್ಧ ವಚನ ಪರಿಚಯ, ಪಾಲಿಪಜ್ಜ, ಧಮ್ಮಪದ, ಭಗವಾನ್ ಬುದ್ಧ, ಶ್ರೀ ಗೊಮ್ಮಟೇಶ್ವರ, ಭಗವಾನ್ ಮಹಾವೀರ, ಶ್ರೀ ಪಾರ್ಶ್ವನಾಥ ಚಂಪೂ, ರತ್ನನ ಪದಗಳು, ನಾಗನ ಪದಗಳು, ಶಾಂತಿ, ನೂರು ಪುಟಾಣಿ, ಗಂಡುಗೊಡಲಿ, ನರಕದ ನ್ಯಾಯ, ಕಂಬಳಿ

ಸೇವೆ, ಸಂಭವಾಮಿ ಯುಗೇ ಯುಗೇ, ಶಕಾರನ ಸಾರೋಟು, ಬಾಹುಬಲಿ ವಿಜಯ, ಗೊಮ್ಮಟಶಿಲ್ಪ, ಪುರುಷ ಸರಸ್ವತಿ, ತರಂಗ, ಕಿರಣಾನುಭವ, ಸಭಾವಿನಯ, ಸ್ನೇಹದೀಪ, ರನ್ನನ ರಸಘಟ್ಟ, ಹೊಸಗನ್ನಡ ಯಶೋಧರ ಚರಿತ್ರೆ, ಶ್ರೀ ಕವಿರತ್ನ, ಚಿಕ್ಕದೇವ ರಾಜ ಬಿನ್ನಪ, ಶ್ರೀ ಕವಿಪಂಪ, ವಿಗಡ, ವಿಕ್ರಮರಾಯ, ಚಿತ್ರಾಂಗದ ಚಿತ್ರಕೂಟ, ಗಾಂಧಿ, ಜಯಂತಿಯ ಕಾಣಿಕೆ, ದೇವರ ಸಾಕ್ಷಿ, ಗಾಂಧಿ ಜ್ಞಾಪಕ ದೀಪ, ಗಾಂಧೀಜಿ ಅವರ ಕತೆ, ಗಿಳಿಮರಿಗಳ ಗಾಂಧಿ, ಮಕ್ಕಳ ಗಾಂಧಿ ವಂದೇ ಗಾಂಧೀಜಿ, ತುತ್ತೂರಿ, ಕಡಲೆಪುರಿ, ಚುಟಿಕ, ಕೆನೆಹಾಲು, ಕಲ್ಲುಸಕ್ಕರೆ, ರಸಕವಳ, ಗುಲಗಂಜಿ, ಕೋಳಿಕ್ಕಿಲ್ಲ, ಗೂಳೂರಿನ ಗಾಯಕರು, ಬಾ ಕರೂಬಾ, ಬೆಳೆಯುವ ಪಯಿರು, ಧ್ವಜವಂದನೆ, ತುಂಟ ಗಣಪತಿ, ಮುದ್ದುಕೃಷ್ಣ, ಪೋಲಿ ಸುಬ್ಬಣ್ಣ, ಪಂಚತಂತ್ರದ ಕಥೆಗಳು, ಅಣ್ಣ ತಮ್ಮ ಬೆಪ್ಪು ತಕ್ಕಡಿ ಐವಾನ್, ಕಂದನ ಕಾವ್ಯಮಾಲಿ, ಪುಟಾಣಿ ಪ್ರಾರ್ಥನೆ, ಸ್ವಾರಸ್ಯ, ವಿಚಾರ ತಂರಗ ಭಾಗ ೧ ಮತ್ತು ೨ ಶ್ರೀ ಸಾಯಿಚಿಂತನ, ತಾರೆ, ಧ್ವಜವಂದನೆ, ವಿಚಾರರಶ್ಮಿ ಮೊದಲಾದವು.

ಗೌರವ, ಪ್ರಶಸ್ತಿ-ಪುರಸ್ಕಾರಗಳು

೧೯೪೪ ರಲ್ಲಿ ರಬಕವಿಯಲ್ಲಿ ನಡೆದ ೨೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕ ಗೋಷ್ಠಿಗೆ ಇವರು ಅಧ್ಯಕ್ಷರಾಗಿದ್ದರು.

೧೯೬೯ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ

೧೯೭೨ರಲ್ಲಿ ಇವರಿಗೆ ಮೈಸೂರು ವಿಶ್ವವಿದ್ಯಾಲಯದ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿತು.

೧೯೭೦ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಬುದ್ಧ ವಚನ ಪರಿಚಯ, ರತ್ನನ ಪದಗಳು ಕೃತಿಗಳಿಗೆ 'ದೇವರಾಜ ಬಹದ್ದೂರ್' ಪ್ರಶಸ್ತಿ ಲಭಿಸಿದೆ.

| | | |
|---|---|---|
| | | ೧೯೭೮ರಲ್ಲಿ ಹೊಸ ದೆಹಲಿಯಲ್ಲಿ ನಡೆದ ೫೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.<br>೧೯೭೯ ರಲ್ಲಿ ಧರ್ಮಸ್ಥಳದಲ್ಲಿ ನಡೆದ ೫೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಮಕ್ಕಳ ಸಾಹಿತ್ಯ ಗೋಷ್ಠಿಗೆ ಇವರು ಅಧ್ಯಕ್ಷರಾಗಿದ್ದರು.<br>೧೯೭೯ರಲ್ಲಿ 'ಜೀವರತ್ನ ಮತ್ತು ಸಾಹಿತ್ಯ ಪರಿಚಾರಕ' ಎಂಬ ಸಂಸ್ಕರಣ ಗ್ರಂಥಗಳನ್ನು ಪ್ರಕಟಿಸಲಾಗಿದೆ. |

ಹಿಂದಿನ ಪುಟಕ್ಕೆ